ಸಂಜೆವಾಣಿ

1982

ಬೆಂಗಳೂರು - ಹುಬ್ಬಳ್ಳಿ - ಕಲಬುರಗಿ - ಬಳ್ಳಾರಿ - ಮೈಸೂರು - ಮಂಗಳೂರು - ರಾಯಚೂರು - ದಾವಣಗೆರೆ - ಶಿವಮೊಗ್ಗ

www.sanjevani.com contact @sanjevani.com PH: 080 22868882




# ಭಯೋತ್ಪಾದನೆ ಸಮರ್ಥನೆಗೆ ಅವಕಾಶವಿಲ್ಲ

## ವಿಶ್ವಸಂಸ್ಥೆಯಲ್ಲಿ ಪಾಕ್ ವಿರುದ್ಧ ಜೈಶಂಕರ್ ವಾಗ್ದಾಳಿ




**ವಿಶ್ವಸಂಸ್ಥೆ,ಸೆ.27:** ಭಯೋತ್ಪಾದನೆಯನ್ನು ಸಮರ್ಥಿಸಲು ಹಾಗೂ ಅದರ ಪರಿಣಾಮಗಳಿಂದ ತಪ್ಪಿಸಿಕೊಳ್ಳಲು ಯಾರಿಗೂ ಅವಕಾಶವಿಲ್ಲ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಸ್ಪಷ್ಟ ಸಂದೇಶ ನೀಡಿದ್ದಾರೆ.

ಪಾಕಿಸ್ತಾನವನ್ನು 'ಸರಣಿ ಭಯೋತ್ಪಾದನೆಯ ಅನುಷ್ಠಾನಕ' ಎಂದು ಉಲ್ಲೇಖಿಸಿದ ಅವರು, ಭಯೋತ್ಪಾದನೆಗೆ ಬೆಂಬಲ ನೀಡುವವರು ತಮ್ಮ ಮಾರ್ಗವನ್ನು ಬದಲಿಸಬೇಕು ಎಂದು ತೀಕ್ಷ್ಣವಾಗಿ ಜೈಶಂಕರ್ ಹೇಳಿದರು.

ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಅವರು ವಿಶ್ವಸಂಸ್ಥೆಯಲ್ಲಿ ಮಾಡಿದ ಭಾಷಣಕ್ಕೆ ಪ್ರತಿಕ್ರಿಯಿಸಿದ ಜೈಶಂಕರ್, ಪಾಕಿಸ್ತಾನವು ಸಭೆಯ ಮುಂದೆ ವಾಸ್ತವಾಂಶಗಳನ್ನು ತಪ್ಪಾಗಿ ನಿರೂಪಿಸಲು ಹಾಗೂ ಭಯೋತ್ಪಾದನೆಯನ್ನು ಸಹಜಗೊಳಿಸುವ ರೀತಿಯಲ್ಲಿ ವಾದ ಮಂಡಿಸಲು ಪ್ರಯತ್ನಿಸಿದೆ ಎಂದು ಆರೋಪಿಸಿದರು.



"ನಿನ್ನೆ ಸರಣಿ ಭಯೋತ್ಪಾದನೆಯ ಅನುಷ್ಠಾನಕನೊಬ್ಬ ಈ ಸಭೆಯ ಮುಂದೆ ವಾಸ್ತವಾಂಶಗಳನ್ನು ತಪ್ಪಾಗಿ ನಿರೂಪಿಸಿದ. ಭಯೋತ್ಪಾದನೆಯನ್ನು ಸಾಮಾನ್ಯವೆಂದು ಬಿಂಬಿಸುವ ಹಾಗೂ ಅದರ ಪರಿಣಾಮಗಳಿಂದ ವಿನಾಯಿತಿ ಪಡೆಯುವ ಪ್ರಯತ್ನ ನಡೆಯಿತು. ಅದು ನಡೆಯಲು ಸಾಧ್ಯವಿಲ್ಲ," ಎಂದು ಜೈಶಂಕರ್ ಹೇಳಿದರು.

ಭಯೋತ್ಪಾದನೆಯ ವಿರುದ್ಧ ಭಾರತ

- ಪಾಕಿಸ್ತಾನವನ್ನು 'ಸರಣಿ ಭಯೋತ್ಪಾದನೆಯ ಅನುಷ್ಠಾನಕ' ಎಂದು ಜೈಶಂಕರ್ ಉಲ್ಲೇಖ.
- ಭಯೋತ್ಪಾದನೆಗೆ ಯಾವುದೇ ರೀತಿಯ ವಿನಾಯಿತಿ ನೀಡಲು ಸಾಧ್ಯವಿಲ್ಲ ಎಂದು ಸ್ಪಷ್ಟ ಸಂದೇಶ.
- ಭಯೋತ್ಪಾದನೆಯ ವಿರುದ್ಧ ಭಾರತಕ್ಕೆ ಆತ್ಮರಕ್ಷಣೆಯ ಹಕ್ಕಿದೆ ಎಂದು ಪ್ರತಿಪಾದನೆ.
- ಕೊಲ್ಲಿ ಸಂಘರ್ಷದಿಂದ ದೂರದ ರಾಷ್ಟ್ರಗಳೂ ಪರಿಣಾಮ ಎದುರಿಸುತ್ತಿವೆ ಎಂದ ಜೈಶಂಕರ್.
- ವಾಣಿಜ್ಯ ಹಡಗುಗಳು ಮತ್ತು ನಾವಿಕರ ಮೇಲಿನ ದಾಳಿಗೆ ತೀವ್ರ ಖಂಡನೆ.
- ಇಂಧನ ಮತ್ತು ಜಾಗತಿಕ ವಾಣಿಜ್ಯ ಹರಿವು ನಿರಂತರವಾಗಿರಬೇಕು ಎಂದು ಕರೆ.
- ಉಕ್ರೇನ್ ಯುದ್ಧಕ್ಕೆ ಶಾಂತಿಯುತ ಪರಿಹಾರಕ್ಕೆ ಭಾರತ ಬೆಂಬಲ.
- ಆರೋಗ್ಯ, ಶಿಕ್ಷಣ, ಕುಡಿಯುವ ನೀರು, ವಿದ್ಯುತ್, ರಸ್ತೆ, ವಸತಿ ಕ್ಷೇತ್ರಗಳ ಭಾರತದ ಪ್ರಗತಿ ಪ್ರಸ್ತಾಪ.

ತನ್ನನ್ನು ತಾನು ರಕ್ಷಿಸಿಕೊಳ್ಳುವ ಹಕ್ಕನ್ನು ಹೊಂದಿದೆ ಎಂದು ಅವರು ಒತ್ತಿ ಹೇಳಿದರು. ಭಯೋತ್ಪಾದನೆಯೊಂದಿಗೆ ಸ್ನೇಹ, ಸದ್ಭಾವನೆ ಮತ್ತು ಸಹಕಾರ ಒಂದೇ ಸಮಯದಲ್ಲಿ ಸಾಗಲು ಸಾಧ್ಯವಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಹಿಂದೆ ಮಾಡಿಕೊಂಡಿರುವ ಯಾವುದೇ ತಿಳುವಳಿಕೆಗಳನ್ನೂ ಮರುಪರಿಶೀಲಿಸಬೇಕಾಗುತ್ತದೆ 'ಭಯೋತ್ಪಾದನೆ ನಡೆಸುವವರೇ ತಮ್ಮ ಮಾರ್ಗವನ್ನು ಸರಿಪಡಿಸಿಕೊಳ್ಳಬೇಕು" ಎಂದು ಜೈಶಂಕರ್ ಸ್ಪಷ್ಟಪಡಿಸಿದರು.

ಮಧ್ಯಪ್ರಾಚ್ಯ ಮತ್ತು ಕೊಲ್ಲಿ ಪ್ರದೇಶದಲ್ಲಿ ಮುಂದುವರಿದಿರುವ ಸಂಘರ್ಷವು ಈಗಾಗಲೇ ಸಂಕಷ್ಟದಲ್ಲಿರುವ ಜಾಗತಿಕ ಪರಿಸ್ಥಿತಿಯನ್ನು ಮತ್ತಷ್ಟು ಬಿಗಡಾಯಿಸುತ್ತಿದೆ ಎಂದು ಜೈಶಂಕರ್ ಕಳವಳ ವ್ಯಕ್ತಪಡಿಸಿದರು. "ಸಂಘರ್ಷದಿಂದ ದೂರವಿರುವ ದೇಶಗಳೂ ಯಾವುದೇ ತಪ್ಪಿಲ್ಲದೆ ಅದರ ಪರಿಣಾಮಗಳನ್ನು ಎದುರಿಸುತ್ತಿವೆ. ಆದರೆ, ಹೆಚ್ಚು ಪರಿಣಾಮಕ್ಕೊಳಗಾಗುವವರಿಗೆ ತಮ್ಮ ಮಾತು ಹೇಳುವ ಅವಕಾಶವೇ ಕಡಿಮೆ," ಎಂದು ಅವರು ಹೇಳಿದರು.

ವಿಶ್ವಸಂಸ್ಥೆಯ ಸದಸ್ಯ ಪುಟ 2

## ನಾಳೆ ದೆಹಲಿಗೆ ಸರ್ವಪಕ್ಷ ನಿಯೋಗ

**ಬೆಂಗಳೂರು.ಸೆ.27 –** ರಾಜ್ಯದ ಪ್ರಮುಖ ವಿಷಯಗಳ ಕುರಿತು ಚರ್ಚಿಸಲು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಸರ್ವಪಕ್ಷ ನಿಯೋಗ ನಾಳೆ ದೆಹಲಿಗೆ ಭೇಟಿ ನೀಡಲಿದ್ದು, ಕೇಂದ್ರ ಕೃಷಿ, ಅರಣ್ಯ ಸೇರಿದಂತೆ ಕೆಲ ಸಚಿವರ ಜೊತೆ ಚರ್ಚೆ ನಡೆಸಲಿದೆ.

ರಾಜ್ಯದ ರೈತರ ಹಿತರಕ್ಷಣೆ ಮತ್ತು ಬರ ಪರಿಹಾರ ಕಾರ್ಯಗಳಿಗಾಗಿ ಕೇಂದ್ರದ ನೆರವು ಕೋರಲು ಈ ದೆಹಲಿ ಭೇಟಿ ತೀವ್ರ ರಾಜಕೀಯ ಹಾಗೂ ಆಡಳಿತಾತ್ಮಕ ಮಹತ್ವ ಪಡೆದುಕೊಂಡಿದೆ.

ಇತ್ತೀಚೆಗೆ ನಡೆದ ರಾಜ್ಯದ ವಿಶೇಷ ಜಂಟಿ ಸದನ ಅಧಿವೇಶನದಲ್ಲಿ ಕಸ್ತೂರಿರಂಗನ್ ವರದಿಯ ಪರಿಸರ ಸೂಕ್ಷ್ಮ ವಲಯ ಘೋಷಣೆಯನ್ನು ವಿರೋಧಿಸಿ ನಿರ್ಣಯ ಕೈಗೊಳ್ಳಲಾಗಿತ್ತು. ಈ ಕುರಿತು ಕೇಂದ್ರದ ಅರಣ್ಯ ಸಚಿವರಿಗೆ ರಾಜ್ಯದ ಒಮ್ಮತದ ನಿಲುವು ತಿಳಿಸಲು ಸರ್ವಪಕ್ಷ ನಿಯೋಗ ನಿರ್ಧರಿಸಿದೆ.

ಕರ್ನಾಟಕದ 200ಕ್ಕೂ ಹೆಚ್ಚು ತಾಲ್ಲೂಕುಗಳು ಬರಗಾಲದಿಂದ ತತ್ತರಿಸಿದ್ದು, ಬೃಹತ್ ಪ್ರಮಾಣದ ಬೆಳೆ ನಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ಕೇಂದ್ರದಿಂದ ಮಧ್ಯಂತರ ಹಾಗೂ ಗರಿಷ್ಠ ಬರ ಪರಿಹಾರವನ್ನು ಕೋರಲು ಸರ್ವಪಕ್ಷ ನಿಯೋಗ ನಿರ್ಧರಿಸಿದ್ದು, ಈ ಸಂಬಂಧ ಕೇಂದ್ರ ಕೃಷಿ ಸಚಿವರಿಗೆ ಮನವಿ ಕೂಡ ಸಲ್ಲಿಸಲಿದೆ. ಜೊತೆಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೇಂದ್ರ ಸಚಿವರನ್ನು ಭೇಟಿ ಮಾಡಿ ರಾಜ್ಯದ ಬರ ಪರಿಸ್ಥಿತಿಯನ್ನು ಅಂಕಿ ಅಂಶ ಹಾಗೂ ದಾಖಲೆಗಳ ಸಮೇತ ಮನವರಿಕೆ ಮಾಡಿಕೊಡಲಿದ್ದಾರೆ.

## ಬಿಡದಿ ಟೌನ್ ಶಿಪ್‌ಗಾಗಿ ಬಲವಂತದಿಂದ ಜಮೀನು ಪಡೆಯುವುದಿಲ್ಲ

**ಬೆಂಗಳೂರು,ಸೆ.27:** ಬಿಡದಿ ಟೌನ್ ಶಿಪ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ರೈತರಿಂದ ಬಲವಂತವಾಗಿ ಜಮೀನು ಪಡೆಯುವ ಪ್ರಶ್ನೆಯೇ ಇಲ್ಲ ರೈತರು ರಸ್ತೆ ತಡೆ ಚಳುವಳಿ ನಡೆಸುವುದು ಬೇಡ ಎಂದು ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಹೇಳಿದರು

ಬೆಂಗಳೂರಿನಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾರು ಜಮೀನು ಕೊಡಬೇಡಿ ಎಂದು ಹೇಳುತ್ತಿದ್ದೇನೆ. ಇಷ್ಟ ಇದ್ದವರೇ ಕೊಡುತ್ತಾರೆ, ಇಲ್ಲದಿದ್ದರೆ ಇರಲಿ. ಬದುಕಬೇಕು, ದುಡ್ಡು ಬೇಕು ಎಂದವರು ಕೊಡುತ್ತಾರೆ, ಬೇಡವಾದವರು ಬಿಡುತ್ತಾರೆ. ನನಗೆ ಪ್ರತಿಷ್ಠೆ ಇಲ್ಲ. ಕುಮಾರಸ್ವಾಮಿ ಯೋಜನೆಯನ್ನು ಮುಂದುವರೆಸುತ್ತಿದ್ದೇನೆ ಅಷ್ಟೇ ಎಂದು ಅವರು ಸ್ಪಷ್ಟಪಡಿಸಿದರು

**ವಿಟಿಯು ಅನುದಾನ:**

ವಿಟಿಯುಗೆ ಅನುದಾನ ಕೊಡಲು ಪತ್ರ ಬರೆದಿರುವ ವಿಚಾರವನ್ನು ಪರಿಶೀಲಿಸುತ್ತಿದ್ದೇನೆ ಎಂದು ಸಿಎಂ ತಿಳಿಸಿದ್ದಾರೆ.

ವಿಪಕ್ಷಗಳು ಚುನಾವಣಾ ಆಯೋಗದ ವಿರುದ್ಧ ಪುಟ 2



ಜಗದ್ಗುರು ಪಂಚಪೀಠಾಧೀಶ್ವರ ದಿವ್ಯ ಸಾನಿಧ್ಯದಲ್ಲಿ ಅಖಿಲ ಭಾರತ ವೀರಶೈವ ಶಿವಾಚಾರ್ಯ ಸಂಸ್ಥೆ ಹಾಗೂ ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ಆಶ್ರಯದಲ್ಲಿ ಬೆಂಗಳೂರಿನಲ್ಲಿ ನಡೆದ ವೀರಶೈವ ಲಿಂಗಾಯತ ಧರ್ಮ ಸಂರಕ್ಷಣಾ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಭಾಗಿಯಾಗಿದ್ದರು ಸಚಿವರಾದ ಈಶ್ವರ ಖಂಡ್ರೆ ವಿಜಯಾನಂದ ಕಾಶಪ್ಪನವರ್ , ಮತ್ತಿತರ ಗಣ್ಯರು ಇದ್ದಾರೆ

## ಉಗ್ರವಾದಕ್ಕೆ ಶೂನ್ಯ ಸಹಿಷ್ಣುತೆ: ಪ್ರಧಾನಿ

**ನವದೆಹಲಿ,ಸೆ.27:** ಉಗ್ರವಾದದ ವಿರುದ್ಧ ಭಾರತ 'ಶೂನ್ಯ ಸಹಿಷ್ಣುತೆ' ನೀತಿ ಅನುಸರಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಭಾನುವಾರ ನಡೆದ ತಮ್ಮ ಮಾಸಿಕ ರೇಡಿಯೊ ಕಾರ್ಯಕ್ರಮ 'ಮನ್ ಕಿ ಬಾತ್'ನ 138ನೇ ಸಂಚಿಕೆಯಲ್ಲಿ ಮಾತನಾಡಿದ ಅವರು, ಕಳೆದ ಒಂದು ದಶಕದಲ್ಲಿ ಉಗ್ರವಾದದ ವಿರುದ್ಧ ಭಾರತ ಕೈಗೊಂಡ ಪ್ರಮುಖ ಕಾರ್ಯಾಚರಣೆಗಳನ್ನು ಉಲ್ಲೇಖಿಸಿದರು.

2016ರ ಸರ್ಜಿಕಲ್ ಸ್ಟ್ರೈಕ್, 2019ರ ಬಾಲಾಕೋಟ್ ವೈಮಾನಿಕ ದಾಳಿ ಹಾಗೂ 2025ರ ಆಪರೇಷನ್ ಸಿಂಧೂರ್‌ಗಳನ್ನು ಪ್ರಸ್ತಾಪಿಸಿದ ಪ್ರಧಾನಿ, ಭಾರತದ ಮೇಲೆ ಉಗ್ರರು



ಮೋದಿ ಮನದ ಮಾತು

ದಾಳಿ ನಡೆಸಿದರೆ ಅದಕ್ಕೆ ಪ್ರತಿಕ್ರಿಯೆ ಅನಿವಾರ್ಯ ಎಂಬ ಸಂದೇಶವನ್ನು ಪುನರುಚ್ಚರಿಸಿದರು.

ಭಾರತದ ವಿರುದ್ಧ ಉಗ್ರರು ಯಾವುದೇ ರೀತಿಯ ದಾಳಿ ನಡೆಸಿದರೂ ಅದನ್ನು ಸಹಿಸುವ ಪ್ರಶ್ನೆಯೇ ಇಲ್ಲ. ಉಗ್ರವಾದದ ವಿರುದ್ಧ ಶೂನ್ಯ ಸಹಿಷ್ಣುತೆ ಭಾರತದ ನಿಲುವಾಗಿದೆ ಎಂದು ಮೋದಿ ಹೇಳಿದರು.

ರಾಷ್ಟ್ರೀಯ ಭದ್ರತೆ ಮತ್ತು ಉಗ್ರವಾದದ ವಿರುದ್ಧದ ಹೋರಾಟ ಕುರಿತು ಮಾತನಾಡಿದ ಅವರು, ದೇಶದ ಮೇಲೆ ದಾಳಿ ನಡೆಸುವವರಿಗೆ ಸೂಕ್ತ ಪ್ರತಿಕ್ರಿಯೆ ನೀಡಲಾಗುವುದು ಎಂಬ ನಿಲುವನ್ನು ವ್ಯಕ್ತಪಡಿಸಿದರು. ಕಳೆದ ಹತ್ತು ವರ್ಷಗಳಲ್ಲಿ ಉಗ್ರವಾದದ ವಿರುದ್ಧ ಭಾರತ ಕೈಗೊಂಡ ಕ್ರಮಗಳನ್ನು ಪ್ರಧಾನಿ ವಿವರಿಸಿದರು.

ಉರಿ ಉಗ್ರ ದಾಳಿಯ ಬಳಿಕ ಸೆ.28–29ರಂದು ನಿಯಂತ್ರಣ ರೇಖೆ (ಎಲ್‌ಒಸಿ) ಸಮೀಪದ ಉಗ್ರರ ಲಾಂಚ್‌ಪ್ಯಾಡ್‌ಗಳನ್ನು ಪುಟ 2

## ಅಕ್ಟೋಬರ್ ಮೊದಲ ವಾರದಲ್ಲಿ ರಾಜ್ಯಕ್ಕೆ ಕೇಂದ್ರ ಬರ ಅಧ್ಯಯನ ತಂಡ



**ಬೆಂಗಳೂರು.ಸೆ.27–** ರಾಜ್ಯದ ಬರ ಪರಿಸ್ಥಿತಿಯ ವಾಸ್ತವ ಸ್ಥಿತಿಯನ್ನು ಪರಿಶೀಲಿಸಲು ಕೇಂದ್ರ ಸರ್ಕಾರದ ಬರ ಅಧ್ಯಯನ ತಂಡ ಅಕ್ಟೋಬರ್ ಮೊದಲ ವಾರದಲ್ಲಿ ಕರ್ನಾಟಕಕ್ಕೆ ಆಗಮಿಸಲಿದೆ.

ಕೇಂದ್ರ ಕೃಷಿ ಇಲಾಖೆಯ ಜಂಟಿ ಕಾರ್ಯದರ್ಶಿ ಅಜಿತ್ ಕುಮಾರ್ ಸಾಹು ನೇತೃತ್ವದ ತಂಡ ರಾಜ್ಯದ ಬರಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಪರಿಸ್ಥಿತಿಯನ್ನು ಅವಲೋಕಿಸಲಿದೆ. ರಾಜ್ಯ ಪ್ರವಾಸಕ್ಕೂ ಮುನ್ನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ತಂಡ ಸಭೆ ನಡೆಸಲಿದೆ.

ಸಭೆಯಲ್ಲಿ ರಾಜ್ಯ ಸರ್ಕಾರ ಈಗಾಗಲೇ ಸಿದ್ಧಪಡಿಸಿರುವ ಬರಪೀಡಿತ ತಾಲೂಕುಗಳ ಪಟ್ಟಿ ಹಾಗೂ ಸಂಬಂಧಿತ ಅಂಕಿ–ಅಂಶಗಳನ್ನು ಕೇಂದ್ರ ತಂಡಕ್ಕೆ ನೀಡಲಿದೆ. ಈ ಪಟ್ಟಿಯ ಆಧಾರದ ಮೇಲೆ ಆಯ್ದ ತಾಲೂಕುಗಳಿಗೆ ತಂಡ ಭೇಟಿ ನೀಡಲಿದೆ. ಕೇಂದ್ರ ತಂಡದೊಂದಿಗೆ ರಾಜ್ಯದ ಅಧಿಕಾರಿಗಳೂ ಪ್ರವಾಸ ಕೈಗೊಂಡು ಬರ ಪರಿಸ್ಥಿತಿಯ ವಾಸ್ತವ ಸ್ಥಿತಿಯನ್ನು ಪುಟ 2

## ಹತಾಶೆಯಿಂದ ರಾಹುಲ್ ಚು.ಆಯೋಗದ ವಿರುದ್ಧ ಆರೋಪ-ಆಶೋಕ್

**ಬೆಂಗಳೂರು, ಸೆ. 27:** ಕಾಂಗ್ರೆಸ್ಗೆ ಗೆಲ್ಲಲು ಸಾಧ್ಯವಿಲ್ಲ ಎಂಬ ಭ್ರಮನಿರಸನದಿಂದ ರಾಹುಲ್ ಗಾಂಧಿ ಅವರು ನ್ಯಾಯಾಲಯ, ಜಾರಿ ನಿರ್ದೇಶನಾಲಯ (ಇಡಿ), ಸಿಬಿಐ ಮತ್ತು ಚುನಾವಣಾ ಆಯೋಗದ ವಿರುದ್ಧ ಮಾತನಾಡುವ ಚಟಕ್ಕೆ ಬಲಿಯಾಗಿದ್ದಾರೆ ಎಂದು .ವಿಪಕ್ಷ ನಾಯಕ ಆರ್. ಅಶೋಕ್ ಆರೋಪಿಸಿದರು.

ಬಿಜೆಪಿ ಕಚೇರಿಯಲ್ಲಿ ವಿಧಾನ ಪರಿಷತ್ತಿನ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ



ಜೊತೆ ಜಂಟಿ ಸುದ್ದಿಗೋಷ್ಠಿ ನಡೆಸಿ, ಮಾತನಾಡಿದ ಅವರು ಕಾಂಗ್ರೆಸ್ ಮತ್ತು ರಾಹುಲ್ ಗಾಂಧಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು

ಚುನಾವಣಾ ಆಯೋಗವು ಈಗಾಗಲೇ ತನ್ನ ಪತ್ರಿಕಾಗೋಷ್ಠಿಯಲ್ಲಿ ಎಲ್ಲವನ್ನೂ ಸ್ಪಷ್ಟಪಡಿಸಿದೆ ಎಂದು ಹೇಳಿದರು. ಎವಿಎಂ ಬಗ್ಗೆ ಕಾಂಗ್ರೆಸ್ ಸುಳ್ಳು ಪ್ರಚಾರ ಮಾಡುತ್ತಿದೆ ಎಂದು ಆರೋಪಿಸಿದ ಅಶೋಕ್, "ಎವಿಎಂ ಅನ್ನು ತಂದವರೇ ರಾಹುಲ್ ಗಾಂಧಿ ಅವರ ತಂದೆ ರಾಜೀವ್ ಗಾಂಧಿ. ಅದನ್ನೇ ಬ್ಲಾಕ್ ಬಾಕ್ಸ್ ಎಂದು ಕರೆಯುವ ಮೂಲಕ ರಾಹುಲ್ ತಮ್ಮ ತಂದೆಯ ಮೇಲೆಯೇ ನಂಬಿಕೆ ಇಲ್ಲದಂತಾಗಿದೆ" ಎಂದು ಟೀಕಿಸಿದರು. ಸುಪ್ರೀಂ ಕೋರ್ಟ್ ಈಗಾಗಲೇ ಎವಿಎಂ ಸರಿ ಇದೆ ಎಂದು ಹೇಳಿದ್ದು, ಕಾಂಗ್ರೆಸ್ ಯಾವುದೇ ಸಂಸ್ಥೆಯ ಮೇಲೂ ನಂಬಿಕೆ ಇಡುತ್ತಿಲ್ಲ ಪುಟ 2

## ರೈತರ ಪರವಾಗಿ ನಾವು ನಿಲ್ಲುತ್ತೇವೆ

**ಬೆಂಗಳೂರು, ಸೆ.27:** ಬಿಡದಿ ಟೌನ್ಶಿಪ್ ವಿರೋಧಿಸಿ "ಕಳೆದ ಐದು ದಿನಗಳಿಂದ ಅಮರಣಾಂತ ಉಪವಾಸ ಮಾಡುತ್ತಿದ್ದ ರೈತರ ಮೇಲೆ ಏಕಾಏಕಿ ಸುಮೋಟೊ ಕೇಸ್ ಹಾಕಲಾಗಿದೆ. ಐದು ದಿನ ಪ್ರತಿಭಟನೆ ಮಾಡುವಾಗ ಏಕೆ ಮೌನವಾಗಿದ್ದಿರಿ ಹೋರಾಟ ಹತ್ತಿಕ್ಕಲು ಈ ಪ್ರಯತ್ನ. ನಾವು ರೈತರ ಪರವಾಗಿಯೇ ನಿಲ್ಲುತ್ತೇವೆ" ಎಂದು ಕೇಂದ್ರ ಸಚಿವ ಎಚ್ ಡಿ ಕುಮಾರಸ್ವಾಮಿ ಹೇಳಿದರು.

ಜೆಪಿ ಭವನದಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಬಿಡದಿ ರೈತರ ಮೇಲೆ ದಾಖಲಿಸಿರುವ ಎಫ್‌ಐಆರ್



ಸಂಬಂಧ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

**ರೈತ ಸ್ವಾಭಿಮಾನ ಯಾತ್ರೆಗೆ ಬೆಂಬಲ:**

"ರೈತರಿಗೆ ವಿಶ್ವಾಸ ಮೂಡಿಸುವ ನಿಟ್ಟಿನಲ್ಲಿ ರೈತ ಸ್ವಾಭಿಮಾನ ಯಾತ್ರೆ ಮಾಡುತ್ತಿದ್ದಾರೆ. ರೈತರ ಜೊತೆ ಬೆಂಬಲವಾಗಿ ನಿಲ್ಲಲು ನಾವು ಯಾವಾಗಲೂ ಸಿದ್ಧ. ನೀವು ಜನರ ಪರವಾಗಿ ಕೆಲಸ ಮಾಡುತ್ತೀರಾ ನೀವೇ ಇನ್ನೂ ಹತ್ತು ವರ್ಷ ಅಧಿಕಾರದಲ್ಲಿರಿ, ನಾನೇ 50 ಸಾವಿರ ಜನರನ್ನು ಸೇರಿಸಿ ನಿಮಗೆ ಸನ್ಮಾನ ಮಾಡುತ್ತೇನೆ. ಆದರೆ ದುಡ್ಡು ಹೊಡೆಯಲು ಮುಂದಾದರೆ ಅಡ್ಡಗಾಲು ಹಾಕುತ್ತೇನೆ" ಎಂದು ಕುಮಾರಸ್ವಾಮಿ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರಿಗೆ ಎಚ್ಚರಿಕೆ ನೀಡಿದರು

ಕೊಟ್ಟಿರುವ ಅಧಿಕಾರ ಕಳ್ಳಕಾಕರನ್ನು ರಕ್ಷಣೆ ಮಾಡಲು ಅಲ್ಲ. ನಾನು ಹಿಟ್ ಅಂಡ್ ರನ್ ಮಾಡುವುದಿಲ್ಲ. ಸ್ವಲ್ಪ ತಡೆಯಿರಿ, ಎಲ್ಲಕ್ಕೂ ಒಂದು ಕಾಲ ಬರುತ್ತದೆ. ಸ್ಯಾಚುರೇಷನ್ ಪಾಯಿಂಟ್ ತಲುಪಿದ್ದೀರಿ, ಪುಟ 2

## ಕಾಮಗಾರಿ ಬಿಲ್ ಪಾವತಿಗೆ ಡಿಜಿಟಲ್ ಟಚ್ ವಿಳಂಬಕ್ಕೆ ಬ್ರೇಕ್; 7 ದಿನದಲ್ಲಿ ಪರಿಶೀಲನೆ

**ಬೆಂಗಳೂರು.ಸೆ.27:** ಸಾರ್ವಜನಿಕ ಕಾಮಗಾರಿಗಳ ಬಿಲ್ ಪಾವತಿಯಲ್ಲಿ ಆಗುತ್ತಿರುವ ವಿಳಂಬಕ್ಕೆ ಕಡಿವಾಣ ಹಾಕಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಸಮಗ್ರ ಡಿಜಿಟಲ್ ವ್ಯವಸ್ಥೆ ಜಾರಿಗೆ ಮುಂದಾಗಿದೆ. ಗುತ್ತಿಗೆದಾರರ ಬಿಲ್ ಪರಿಶೀಲನೆಯಿಂದ ಕಾಮಗಾರಿ ಗುಣಮಟ್ಟದ ದೃಢೀಕರಣ ಹಾಗೂ ಅಂತಿಮ ಪಾವತಿಯವರೆಗೆ ಸಂಪೂರ್ಣ ಪ್ರಕ್ರಿಯೆಯನ್ನು ಡಿಜಿಟಲೀಕರಣಗೊಳಿಸಲು ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಸರ್ಕಾರಿ ಅನುದಾನ ಹಾಗೂ 5 ನಗರಪಾಲಿಕೆಗಳ ಸ್ವಂತ ಅನುದಾನದಲ್ಲಿ ಕೈಗೊಳ್ಳುವ ಕಾಮಗಾರಿಗೂ ಈ ವ್ಯವಸ್ಥೆ ಅನ್ವಯವಾಗಲಿದೆ. ಕಾಗದದ ಕಡತಗಳ ಓಡಾಟಕ್ಕೆ ಬದಲಾಗಿ ಐಎಫ್‌ಎಂಎಸ್ ತಂತ್ರಾಂಶದ ಮೂಲಕ ಬಿಲ್ ನಿರ್ವಹಣೆ ನಡೆಯಲಿದ್ದು, ಪ್ರತಿ ಹಂತಕ್ಕೂ ನಿರ್ದಿಷ್ಟ ಕಾಲಮಿತಿ ನಿಗದಿಯಾಗಲಿದೆ.

**7 ದಿನದಲ್ಲಿ ಪರಿಶೀಲನೆ:**

ಹೊಸ ವ್ಯವಸ್ಥೆಯಲ್ಲಿ ಮೊದಲ ಹಂತದಲ್ಲಿ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕನ್ಸಲ್ಟೆಂಟ್ ಬಿಲ್ ಪರಿಶೀಲಿಸಲಿದೆ. ಬಳಿಕ ಸ್ಥಳೀಯ ಇಂಜಿನಿಯರ್‌ಗಳು ಕಾಮಗಾರಿ ಸ್ಥಳಕ್ಕೆ ತೆರಳಿ ಕಾಮಗಾರಿಯ ಪ್ರಮಾಣ ಹಾಗೂ ಗುಣಮಟ್ಟ ಪರಿಶೀಲಿಸಿ ವರದಿ ಸಲ್ಲಿಸಬೇಕು. ಈ ಸಂಪೂರ್ಣ ಪ್ರಕ್ರಿಯೆಗೆ ಗರಿಷ್ಠ 7 ದಿನಗಳ ಕಾಲಮಿತಿ ನಿಗದಿಪಡಿಸಲಾಗಿದೆ.

ನಿಗದಿತ ಅವಧಿಯಲ್ಲಿ ಪರಿಶೀಲನೆ ಅಥವಾ ಕ್ರಮ ನಡೆಯದಿದ್ದರೆ, ಬಿಲ್ ಅನ್ನು ಡೀಮ್ಡ್ ಅಪ್ರೂವ್ಡ್ ಎಂದು ಪರಿಗಣಿಸಿ ಮುಂದಿನ ಹಂತಕ್ಕೆ ಕಳುಹಿಸುವ ವ್ಯವಸ್ಥೆ ಇರಲಿದೆ. ಇದರಿಂದ ಅಧಿಕಾರಿಗಳ ಹಂತದಲ್ಲಿ ಬಿಲ್‌ಗಳು ಅನಗತ್ಯವಾಗಿ ಬಾಕಿ ಉಳಿಯುವುದನ್ನು ತಪ್ಪಿಸುವ ಉದ್ದೇಶ ಹೊಂದಲಾಗಿದೆ.

ಬಿಲ್ ತಡೆಹಿಡಿಯಲು ಅಥವಾ ತಿರಸ್ಕರಿಸಲು ನಿರ್ಧರಿಸಿದರೆ, ಅದಕ್ಕೆ ಕಾರಣವನ್ನು ಐಎಫ್‌ಎಂಎಸ್ ನಲ್ಲಿ ಕಡ್ಡಾಯವಾಗಿ ದಾಖಲಿಸಬೇಕು. ಹೀಗಾಗಿ ಗುತ್ತಿಗೆದಾರರು ತಮ್ಮ ಬಿಲ್ ಯಾವ ಹಂತದಲ್ಲಿದೆ ಮತ್ತು ಏಕೆ ತಡೆಹಿಡಿಯಲಾಗಿದೆ ಎಂಬುದನ್ನು ಆನ್‌ಲೈನ್‌ನಲ್ಲೇ ತಿಳಿದುಕೊಳ್ಳಬಹುದು.

**ಆರ್‌ಟಿಜಿಎಸ್ ಪ್ರಕ್ರಿಯೆಗೆ ತೆರೆ:**

ಗುತ್ತಿಗೆದಾರರಿಗೆ ಪಾವತಿಸಬೇಕಾದ ಮೊತ್ತವನ್ನು ಐಎಫ್‌ಎಂಎಸ್ ಮೂಲಕ ನೋಂದಾಯಿತ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡಲಾಗುತ್ತದೆ. ಪುಟ 2

## 254 ಔಷಧ ಕಂಪನಿಗಳ ಅಕ್ರಮ ಎಫ್‌ಡಿಎ ಬಯಲು

**ಬೆಂಗಳೂರು, ಸೆ.27–** ಬಡ ಹಾಗೂ ಕಷ್ಟದಲ್ಲಿರುವ ರೋಗಿಗಳನ್ನು ಗುರಿಯಾಗಿಸಿಕೊಂಡು ಔಷಧ, ವೈದ್ಯಕೀಯ ಉಪಕರಣಗಳು ಹಾಗೂ ಕನ್ಸ್ಯೂಮಬಲ್ಸ್‌ಗಳ ಮೇಲೆ ಭಾರಿ ದರ ವಿಧಿಸುತ್ತಿದ್ದ 254 ಔಷಧ ತಯಾರಿಕಾ ಕಂಪನಿಗಳ ಜಾಲವನ್ನು ಕರ್ನಾಟಕ ಆಹಾರ ಮತ್ತು ಔಷಧ ಆಡಳಿತ (ಎಫ್‌ಡಿಎ) ಇಲಾಖೆ ಬಯಲಿಗೆಳೆದಿದೆ.

ಕಡಿಮೆ ವೆಚ್ಚದಲ್ಲಿ ಔಷಧಗಳನ್ನು ತಯಾರಿಸಿ ಅಥವಾ ಆಸ್ಪತ್ರೆಗಳಿಗೆ ಪೂರೈಕೆ ಮಾಡಿದ ಬಳಿಕ, ರೋಗಿಗಳಿಗೆ ಮಾತ್ರ ಅತ್ಯಂತ ದುಬಾರಿ ದರದಲ್ಲಿ ಮಾರಾಟ ಮಾಡಲಾಗುತ್ತಿತ್ತು ಎನ್ನಲಾಗಿದೆ. ಈ ಕುರಿತು 254 ಕಂಪನಿಗಳ ಸಂಪೂರ್ಣ ಪಟ್ಟಿಯನ್ನು ಸಿದ್ಧಪಡಿಸಿರುವ ಎಫ್‌ಡಿಎ ಆಯುಕ್ತ ಕೆ. ಶ್ರೀನಿವಾಸ್, ಅತಿಯಾದ ದರಕ್ಕೆ ಕಡಿವಾಣ ಹಾಕುವಂತೆ ಕೇಂದ್ರದ ರಾಷ್ಟ್ರೀಯ ಔಷಧೀಯ ಬೆಲೆ ಪ್ರಾಧಿಕಾರಕ್ಕೆ (ಎನ್‌ಪಿಪಿಎ) ಪತ್ರ ಬರೆದಿದ್ದಾರೆ.

ಎಂಆರ್‌ಪಿಗೂ ಭಾರಿ ವ್ಯತ್ಯಾಸ:

ಔಷಧಗಳ ತಯಾರಿಕಾ ಅಥವಾ ಪೂರೈಕೆ ವೆಚ್ಚಕ್ಕೂ, ಆಸ್ಪತ್ರೆಗಳಲ್ಲಿ ವಿಧಿಸಲಾಗುತ್ತಿರುವ ಗರಿಷ್ಠ ಚಿಲ್ಲರೆ ದರ (ಎಂಆರ್‌ಪಿ)ಕ್ಕೂ ಅಸಹಜ ಪ್ರಮಾಣದ ವ್ಯತ್ಯಾಸ ಇರುವುದು ಪರಿಶೀಲನೆ ವೇಳೆ ಬೆಳಕಿಗೆ ಬಂದಿದೆ.

ರಾಜ್ಯದಲ್ಲಿ ಅತಿಯಾದ ಲಾಭಾಂಶದಲ್ಲಿ ಔಷಧಗಳನ್ನು ಮಾರಾಟ ಮಾಡುತ್ತಿರುವ 254 ಕಂಪನಿಗಳ ದರ ಏರಿಕೆ–ಯ ಸಮಗ್ರ ಪಟ್ಟಿಯನ್ನು ಪುಟ 2

- ***ಸಾಮಾನ್ಯ ಔಷಧ 1:** 86 ರೂ.ಗೆ ಖರೀದಿಸಿದ ಔಷಧಿಗೆ 4,528 ರೂ. ಎಂಆರ್‌ಪಿ ನಿಗದಿ ಮಾಡಲಾಗಿತ್ತು.
- ***ಸಾಮಾನ್ಯ ಔಷಧ 2:** 160 ರೂ. ವೆಚ್ಚದ ಔಷಧಿಗೆ 7,110 ರೂ. ಎಂಆರ್‌ಪಿ ನಿಗದಿ ಮಾಡಲಾಗಿತ್ತು.
- ***ಸೈಟ್ರ್ಯಾಕ್ಸ್ 100 ಎಂಜಿ (ಕ್ಯಾನ್ಸರ್ ಔಷಧ):** ಲ್ಯಾಂಡಿಂಗ್ ವೆಚ್ಚ 342 ರೂ. ಇದ್ದರೆ, ಎಂಆರ್‌ಪಿ 3,836 ರೂ. ನಿಗದಿಯಾಗಿತ್ತು.
- ***ನ್ಯೂಕೈನ್ 300ಎಂಸಿಜಿ:** ಲ್ಯಾಂಡಿಂಗ್ ವೆಚ್ಚ 112 ರೂ. ಇದ್ದರೆ, ಎಂಆರ್‌ಪಿ 1,239 ರೂ. ನಿಗದಿಯಾಗಿತ್ತು.
- ***ಬಿವಾಟಾಸ್ 400ಎಂಜಿ ಇಂಜೆಕ್ಷನ್:** ಲ್ಯಾಂಡಿಂಗ್ ವೆಚ್ಚ 5,850 ರೂ. ಇದ್ದರೆ, ಎಂಆರ್‌ಪಿ 62,690 ರೂ. ನಿಗದಿಯಾಗಿತ್ತು.
- ***ಕಾಸ್ಪೆಟ್ 3 ಎಂಐಜಿ ಇಂಜೆಕ್ಷನ್:** ಲ್ಯಾಂಡಿಂಗ್ ವೆಚ್ಚ 340 ರೂ. ಇದ್ದರೆ, ಎಂಆರ್‌ಪಿ 3,699 ರೂ. ನಿಗದಿಯಾಗಿತ್ತು.

ಸಂಜೆವಾಣಿ

ಬೆಂಗಳೂರು । ಜಾಹೀರಾತಿಗಾಗಿ ಸಂಪರ್ಕಿಸಿ - 94498 71825
contact@sanjevani.com

(ಒಂದನೇ ಪುಟದಿಂದ)

# ಕಾಮಗಾರಿ ಬಿಲ್ ಪಾವತಿಗೆ ಡಿಜಿಟಲ್ ಟಚ್ ವಿಳಂಬಕ್ಕೆ ಬ್ರೇಕ್; 7 ದಿನದಲ್ಲಿ ಪರಿಶೀಲನೆ

ಓಟಿಪಿ ಆಧಾರಿತ ದೃಢೀಕರಣದೊಂದಿಗೆ ಪಾವತಿ ನಡೆಯಲಿದ್ದು, ಮ್ಯಾನುವಲ್ ಓಟಿಪಿ ಪ್ರಕ್ರಿಯೆಗೆ ಬದಲಾಗಿ ಡಿಜಿಟಲ್ ವ್ಯವಸ್ಥೆ ಜಾರಿಗೆ ಬರಲಿದೆ. ಇದರಿಂದ ಮಧ್ಯವರ್ತಿಗಳ ಹಸ್ತಕ್ಷೇಪ ಕಡಿಮೆಯಾಗುವುದರ ಜೊತೆಗೆ ಪಾವತಿಯಲ್ಲಿ ಪಾರದರ್ಶಕತೆ ಹೆಚ್ಚಲಿದೆ.

**ಕಾಮಗಾರಿ ಎಷ್ಟು, ಬಿಲ್ ಅಷ್ಟೇ:**

ಕಾಮಗಾರಿ ಟೆಂಡರ್ ಹಂಚಿಕೆಯಿಂದ ಅಂತಿಮ ಪಾವತಿಯವರೆಗಿನ ಪ್ರಕ್ರಿಯೆಯನ್ನು ಐಎಫ್‌ಎಂಎಸ್ ವ್ಯಾಪ್ತಿಗೆ ತರಲಾಗುತ್ತಿದೆ. ಕಾಮಗಾರಿ ಸ್ಥಳದಲ್ಲಿನ ನೈಜ ಪ್ರಗತಿಯನ್ನು ಇಂಜಿನಿಯರ್‌ಗಳು ಆರ್‌ಐಎಂಎಸ್‌ನಲ್ಲಿ ದಾಖಲಿಸುವುದು ಕಡ್ಡಾಯವಾಗಲಿದೆ.

ಸ್ಥಳದಲ್ಲಿ ವಾಸ್ತವವಾಗಿ ನಡೆದಿರುವ ಕಾಮಗಾರಿಯ ಪ್ರಮಾಣ ಮತ್ತು ಗುಣಮಟ್ಟದ ಆಧಾರದ ಮೇಲೆಯೇ ಬಿಲ್ ಪಾವತಿಯಾಗಲಿದೆ. ಪಿಎಂಎಸ್ ಪರಿಶೀಲನೆಯ ಬಳಿಕ ಇಂಜಿನಿಯರ್‌ಗಳು ಕಾಮಗಾರಿ ಗುಣಮಟ್ಟ ಹಾಗೂ ನಿಯಮಗಳ ಪಾಲನೆಯನ್ನು ದೃಢೀಕರಿಸಲಿದ್ದಾರೆ.

**ಲೋಪ ಕಂಡುಬಂದರೆ ಅಧಿಕಾರಿಯೇ ಹೊಣೆ:**

ನಿಗದಿತ ಅವಧಿಯಲ್ಲಿ ಬಿಲ್ ಪರಿಶೀಲಿಸದೆ ಬಿಟ್ಟು, ನಂತರ ಕಾಮಗಾರಿಯಲ್ಲಿ ಲೋಪ ಕಂಡುಬಂದರೆ ಸಂಬಂಧಿಸಿದ ಅಧಿಕಾರಿಯನ್ನೇ ಹೊಣೆಗಾರರನ್ನಾಗಿ ಮಾಡುವ ವ್ಯವಸ್ಥೆ ಜಾರಿಗೆ ಬರಲಿದೆ. ಇದರಿಂದ ಬಿಲ್ ಪರಿಶೀಲನೆ ಹಾಗೂ ಕಾಮಗಾರಿ ಗುಣಮಟ್ಟದ ಮೇಲ್ವಿಚಾರಣೆಯಲ್ಲಿ ಅಧಿಕಾರಿಗಳ ಜವಾಬ್ದಾರಿ ಹೆಚ್ಚಲಿದೆ.

ಅಂತಿಮ ಭದ್ರತಾ ಠೇವಣಿ ಬಿಡುಗಡೆ ಪ್ರಕ್ರಿಯೆಯನ್ನೂ ಸರಳಗೊಳಿಸಲಾಗಿದ್ದು, ಆಯಾ ವಿಭಾಗದ ಎಕ್ಸಿಕ್ಯೂಟಿವ್ ಎಂಜಿನಿಯರ್ ಹಂತದಲ್ಲೇ ಪ್ರಕ್ರಿಯೆ ಪೂರ್ಣಗೊಳಿಸಲು ಅವಕಾಶ ಕಲ್ಪಿಸಲಾಗಿದೆ. ಇದರಿಂದ ಆಅಈ ಅಥವಾ ಆಯುಕ್ತರ ಕಚೇರಿಗೆ ಕಡತ ಕಳುಹಿಸುವ ಅಗತ್ಯ ಇರುವುದಿಲ್ಲ.

**ಕಾಮಗಾರಿ ಸ್ಥಳದಲ್ಲೇ ಅಧಿಕಾರಿಗಳ ಮಾಹಿತಿ:**

ಪ್ರತಿಯೊಂದು ಕಾಮಗಾರಿ ಸ್ಥಳದಲ್ಲೂ ಜವಾಬ್ದಾರಿ ಹೊಂದಿರುವ ಇಂಜಿನಿಯರ್ ಹಾಗೂ ಗುತ್ತಿಗೆದಾರರ ಹೆಸರು ಮತ್ತು ವಿವರಗಳನ್ನು ಪ್ರದರ್ಶಿಸುವುದು ಕಡ್ಡಾಯವಾಗಲಿದೆ. ಇದರ ಜತೆಗೆ ಸಾರ್ವಜನಿಕರಿಗಾಗಿ ಆನ್‌ಲೈನ್ ಡ್ಯಾಶ್‌ಬೋರ್ಡ್ ರೂಪಿಸಲಾಗುತ್ತಿದ್ದು, ಬೆಂಗಳೂರಿನಲ್ಲಿ ನಡೆಯುತ್ತಿರುವ ಹಾಗೂ ಪೂರ್ಣಗೊಂಡಿರುವ ಕಾಮಗಾರಿಗಳ ಪ್ರಗತಿಯನ್ನು ಸಾರ್ವಜನಿಕರು ವೀಕ್ಷಿಸಲು ಸಾಧ್ಯವಾಗಲಿದೆ.

**ಪ್ರತ್ಯೇಕ ಆಂತರಿಕ ಆಡಿಟ್ ವಿಭಾಗ:**

ಆರ್ಥಿಕ ಶಿಸ್ತನ್ನು ಬಲಪಡಿಸಲು ಜಿಬಿಎ ಹಾಗೂ ನಗರ ಪಾಲಿಕೆಗಳಲ್ಲಿ ಪ್ರತ್ಯೇಕ ಆಂತರಿಕ ಲೆಕ್ಕಪರಿಶೋಧನಾ ವಿಭಾಗ ಸ್ಥಾಪಿಸಲಾಗುತ್ತಿದೆ. ಮುಖ್ಯ ಲೆಕ್ಕಪರಿಶೋಧಕರ ವಾರ್ಷಿಕ ಆಡಿಟ್‌ಗೆ ಪೂರಕವಾಗಿ ಈ ವಿಭಾಗ ನಿಯಮಿತವಾಗಿ ಆಂತರಿಕ ತಪಾಸಣೆ ನಡೆಸಲಿದೆ.

**ಐದೂ ಪಾಲಿಕೆಗಳಿಗೆ ಒಂದೇ ವ್ಯವಸ್ಥೆ:**

ಬಿಲ್ ನಿರ್ವಹಣೆ, ಕಾಮಗಾರಿ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ, ಪಾವತಿ ಮತ್ತು ಆಡಿಟ್ ಪ್ರಕ್ರಿಯೆಗಳಿಗೆ ಐದೂ ನಗರ ಪಾಲಿಕೆಗಳಲ್ಲಿ ಏಕರೂಪದ ವ್ಯವಸ್ಥೆ ಜಾರಿಗೆ ಬರಲಿದೆ. ಕಾಮಗಾರಿ ಆರಂಭದಿಂದ ಅಂತಿಮ ಪಾವತಿಯವರೆಗೆ ಡಿಜಿಟಲ್ ಕಣ್ಗಾವಲು ಇರುವುದರಿಂದ ಆಡಳಿತಾತ್ಮಕ ವಿಳಂಬ ಕಡಿಮೆಯಾಗುವ ನಿರೀಕ್ಷೆಯಿದೆ.

ಪ್ರಾಮಾಣಿಕವಾಗಿ ಕೆಲಸ ಮಾಡುವ ಗುತ್ತಿಗೆದಾರರಿಗೆ ಅನಗತ್ಯ ಅಲೆದಾಟ ತಪ್ಪಿಸಿ, ಕಾಮಗಾರಿಗಳನ್ನು ಸಮಯಕ್ಕೆ ಸರಿಯಾಗಿ ಹಾಗೂ ಗುಣಮಟ್ಟದೊಂದಿಗೆ ಪೂರ್ಣಗೊಳಿಸಲು ಅನುಕೂಲ ಕಲ್ಪಿಸುವುದು ಈ ಸುಧಾರಣೆಯ ಪ್ರಮುಖ ಉದ್ದೇಶವಾಗಿದೆ.

# ಭಯೋತ್ಪಾದನೆ ಸಮರ್ಥನೆಗೆ ಅವಕಾಶವಿಲ್ಲ

ರಾಷ್ಟ್ರಗಳು ಜಾಗತಿಕ ಸವಾಲುಗಳನ್ನು ಎದುರಿಸಲು ತಮ್ಮಿಂದ ಸಾಧ್ಯವಾದ ಕೊಡುಗೆ ನೀಡಬೇಕು ಎಂದು ಅವರು ಕರೆ ನೀಡಿದರು.

ಅಂತರರಾಷ್ಟ್ರೀಯ ಜಲಮಾರ್ಗಗಳಲ್ಲಿ ಸಂಚರಿಸುವ ವಾಣಿಜ್ಯ ಹಡಗುಗಳು ಹಾಗೂ ನಾವಿಕರ ಮೇಲೆ ನಡೆಯುತ್ತಿರುವ ದಾಳಿಗಳನ್ನು ಜೈಶಂಕರ್ ತೀವ್ರವಾಗಿ ಖಂಡಿಸಿದರು. ವಾಣಿಜ್ಯ ಸಾಗಣೆಯನ್ನು ಗುರಿಯಾಗಿಸುವುದು ಯಾವುದೇ ಕಾರಣಕ್ಕೂ ಒಪ್ಪಲಾಗದು ಎಂದರು.

ಎಲ್ಲಾ ಸಂಘರ್ಷ ಪಕ್ಷಗಳು ಸಂಯಮ ವಹಿಸಿ ಉದ್ವಿಗ್ನತೆ ಕಡಿಮೆ ಮಾಡಬೇಕು. ನಾಗರಿಕರ ಸುರಕ್ಷತೆ ಹಾಗೂ ಇಂಧನ ಮತ್ತು ವಾಣಿಜ್ಯದ ನಿರಂತರ ಹರಿವಿಗೆ ಅಡ್ಡಿಯಾಗದಂತೆ ನೋಡಿಕೊಳ್ಳಬೇಕು ಸಂಘರ್ಷದ ಪರಿಣಾಮ ಜಾಗತಿಕ ವ್ಯಾಪಾರ, ಇಂಧನ ಪೂರೈಕೆ ಹಾಗೂ ಪ್ರಮುಖ ಜಲಮಾರ್ಗಗಳಲ್ಲಿನ ವಾಣಿಜ್ಯ ಸಾಗಣೆಯ ಮೇಲೆ ಬೀರುತ್ತಿರುವ ಹಿನ್ನೆಲೆಯಲ್ಲಿ ಜೈಶಂಕರ್ ಈ ವಿಚಾರವನ್ನು ಪ್ರಸ್ತಾಪಿಸಿದರು.

**ಉಕ್ರೇನ್ ಯುದ್ಧ ಅಂತ್ಯಗೊಳ್ಳಲಿ**

ಐದನೇ ವರ್ಷಕ್ಕೆ ಕಾಲಿಟ್ಟಿರುವ ಉಕ್ರೇನ್ ಸಂಘರ್ಷವೂ ಗಂಭೀರ ಕಳವಳದ ವಿಷಯವಾಗಿದೆ ಎಂದು ಜೈಶಂಕರ್ ಹೇಳಿದರು. ದೀರ್ಘಕಾಲದ ಯುದ್ಧಗಳಿಗೆ ಅಂತ್ಯ ಹಾಡಬೇಕು ಎಂಬ ಪ್ರಧಾನಿ ನರೇಂದ್ರ ಮೋದಿ ಅವರ ನಿಲುವನ್ನು ಉಲ್ಲೇಖಿಸಿದ ಅವರು, "ಅಂತ್ಯವಿಲ್ಲದ ಯುದ್ಧ ಕೊನೆಗೊಂಡು, ಯುದ್ಧಕ್ಕೇ ಅಂತ್ಯ ಬರಬೇಕಾಗಿದೆ" ಎಂಬ ಸಂದೇಶ ನೀಡಿದರು.

ಉಕ್ರೇನ್‌ನಲ್ಲಿ ಶಾಂತಿ ಸ್ಥಾಪನೆಗೆ ನಡೆಯುತ್ತಿರುವ ಪ್ರಯತ್ನಗಳಿಗೆ ಭಾರತ ಬೆಂಬಲ ನೀಡುತ್ತದೆ ಎಂದ ಅವರು, ಶಾಂತಿ ಪ್ರಕ್ರಿಯೆ ಮುಂದುವರಿಯುತ್ತಿರುವ ಸಂದರ್ಭದಲ್ಲಿ ನಾವಿಕರ ಸುರಕ್ಷತೆ, ಆಹಾರ ಧಾನ್ಯಗಳ ನಿರಂತರ ಪೂರೈಕೆ ಹಾಗೂ ಇಂಧನದ ಸುಗಮ ಹರಿವನ್ನು ಖಚಿತಪಡಿಸಿಕೊಳ್ಳುವುದು ಅಗತ್ಯ ಎಂದು ಹೇಳಿದರು.

ಭಾರತದ ಅಭಿವೃದ್ಧಿಯನ್ನೂ ಜೈಶಂಕರ್ ವಿಶ್ವಸಂಸ್ಥೆಯ ವೇದಿಕೆಯಲ್ಲಿ ಪ್ರಸ್ತಾಪಿಸಿದರು. ಆರೋಗ್ಯ, ಪೌಷ್ಟಿಕತೆ, ಶಿಕ್ಷಣ, ಕುಡಿಯುವ ನೀರು, ವಿದ್ಯುತ್, ರಸ್ತೆ ಹಾಗೂ ವಸತಿ ಕ್ಷೇತ್ರಗಳಲ್ಲಿನ ಪ್ರಗತಿ ದೇಶದ ಜನರ ಜೀವನಮಟ್ಟವನ್ನು ಸುಧಾರಿಸಿದೆ ಎಂದು ಹೇಳಿದರು.

ವಿಶ್ವದ ಒಟ್ಟು ಜನಸಂಖ್ಯೆಯ ಸುಮಾರು ಆರನೇ ಒಂದು ಭಾಗದ ಜನರನ್ನು ಒಳಗೊಂಡಿರುವ ಭಾರತದ ಅಭಿವೃದ್ಧಿಯ ಅನುಭವವು ಸುಸ್ಥಿರ ಅಭಿವೃದ್ಧಿ ಗುರಿಗಳ ಜಾಗತಿಕ ಪ್ರಗತಿಗೂ ಕೊಡುಗೆ ನೀಡುತ್ತಿದೆ ಎಂದು ಅವರು ವಿವರಿಸಿದರು.

# ಉಗ್ರವಾದಕ್ಕೆ ಶೂನ್ಯ ಸಹಿಷ್ಣುತೆ: ಪ್ರಧಾನಿ ಮೋದಿ

ಗುರಿಯಾಗಿಸಿಕೊಂಡು ಕಾರ್ಯಾಚರಣೆ ನಡೆಸಲಾಗಿತ್ತು ಎಂದು ಕೇಂದ್ರ ಸರ್ಕಾರ ಹೇಳಿದೆ.

2019ರ ಬಾಲಾಕೋಟ್ ವೈಮಾನಿಕ ದಾಳಿ: ಪುಲ್ವಾಮಾ ಉಗ್ರ ದಾಳಿಯ ಬಳಿಕ ಫೆಬ್ರವರಿ 2019ರಲ್ಲಿ ಬಾಲಾಕೋಟ್‌ನಲ್ಲಿದ್ದ ಜೈಶ್-ಎ-ಮೊಹಮ್ಮದ್ ತರಬೇತಿ ಕೇಂದ್ರವನ್ನು ಗುರಿಯಾಗಿಸಿಕೊಂಡು ವೈಮಾನಿಕ ದಾಳಿ ನಡೆಸಲಾಗಿತ್ತು ಎಂದು ಸರ್ಕಾರ ತಿಳಿಸಿತ್ತು.

ಆಪರೇಷನ್ ಸಿಂಧೂರ್: 2025ರ ಪಹಲ್ಗಾಮ್ ಉಗ್ರದಾಳಿಯ ನಂತರ ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಜಮ್ಮು-ಕಾಶ್ಮೀರದಲ್ಲಿನ ಉಗ್ರ ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು ಕಾರ್ಯಾಚರಣೆ ನಡೆಸಲಾಯಿತು ಎಂದು ಸರ್ಕಾರ ವಿವರಿಸಿದೆ.

ಈ ಕಾರ್ಯಾಚರಣೆಗಳನ್ನು ಉಲ್ಲೇಖಿಸಿದ ಮೋದಿ, ಉಗ್ರ ದಾಳಿಗಳಿಗೆ ಭಾರತದಿಂದ ಪ್ರತಿಕ್ರಿಯೆ ಇರುವುದಿಲ್ಲ ಎಂಬ ಭಾವನೆಗೆ ಅವಕಾಶವಿಲ್ಲ ಎಂಬ ಸಂದೇಶವನ್ನು ನೀಡಿದರು.

'ಮನ್ ಕಿ ಬಾತ್'ನಲ್ಲಿ ರಾಷ್ಟ್ರೀಯ ಭದ್ರತೆ ಕುರಿತ ಚರ್ಚೆಯ ವೇಳೆ ಪ್ರಧಾನಿ, ಉಗ್ರವಾದವನ್ನು ಎದುರಿಸುವಲ್ಲಿ ದೇಶದ ನೀತಿಯನ್ನು ಮತ್ತೊಮ್ಮೆ ಸ್ಪಷ್ಟಪಡಿಸಿದರು. ಉಗ್ರದಾಳಿಗಳನ್ನು ತಡೆಯುವುದು ಮತ್ತು ದೇಶದ ನಾಗರಿಕರ ಸುರಕ್ಷತೆಯನ್ನು ಖಾತರಿಪಡಿಸುವುದು ಸರ್ಕಾರದ ಪ್ರಮುಖ ಆದ್ಯತೆಗಳಲ್ಲಿ ಒಂದಾಗಿದೆ ಎಂಬ ಸಂದೇಶವನ್ನು ನೀಡಿದರು.

ಈ ಹಿಂದೆ ಆಪರೇಷನ್ ಸಿಂಧೂರ್ ಕುರಿತು ಮಾತನಾಡಿದ್ದ ಮೋದಿ, ಉಗ್ರವಾದಕ್ಕೆ ಶೂನ್ಯ ಸಹಿಷ್ಣುತೆ ಸುರಕ್ಷಿತ ಮತ್ತು ಉತ್ತಮ ಜಗತ್ತಿಗೆ ಅಗತ್ಯ ಎಂದು ಪ್ರತಿಪಾದಿಸಿದ್ದರು.

ಪ್ರಧಾನಿ ಮೋದಿ ಅವರು ಭಾನುವಾರ ಬೆಳಗ್ಗೆ 11 ಗಂಟೆಗೆ 'ಮನ್ ಕಿ ಬಾತ್'ನ 138ನೇ ಸಂಚಿಕೆಯಲ್ಲಿ ದೇಶವನ್ನುದ್ದೇಶಿಸಿ ಮಾತನಾಡಿದರು. ಕಾರ್ಯಕ್ರಮಕ್ಕೂ ಮುನ್ನ ಸಾರ್ವಜನಿಕರಿಂದ ಸ್ಫೂರ್ತಿದಾಯಕ ಘಟನೆಗಳು, ಹೊಸ ಆಲೋಚನೆಗಳು, ನವೀನ ಪ್ರಯತ್ನಗಳು ಮತ್ತು ಸಮಾಜದ ಮೇಲೆ ಸಕಾರಾತ್ಮಕ ಪರಿಣಾಮ ಬೀರುವ ಉಪಕ್ರಮಗಳ ಕುರಿತು ಮಾಹಿತಿ ಹಾಗೂ ಸಲಹೆಗಳನ್ನು ಆಹ್ವಾನಿಸಲಾಗಿತ್ತು. ಜನರು ತಮ್ಮ ಕಥೆಗಳು ಮತ್ತು ಸಲಹೆಗಳನ್ನು ಒಥಿಉಂತ ಹಾಗೂ ಆಪ್‌ಗಳ ಮೂಲಕ ಕಳುಹಿಸುವಂತೆ ಮನವಿ ಮಾಡಲಾಗಿತ್ತು.

ಒಟ್ಟಿನಲ್ಲಿ, 138ನೇ 'ಮನ್ ಕಿ ಬಾತ್' ಸಂಚಿಕೆಯಲ್ಲಿ ಪ್ರಧಾನಿ ಮೋದಿ ಅವರು ಉಗ್ರವಾದದ ವಿರುದ್ಧ ಭಾರತದ ಕಠಿಣ ನಿಲುವನ್ನು ಪುನರುಚ್ಚರಿಸುವ ಜತೆಗೆ, ಕಳೆದ ದಶಕದಲ್ಲಿ ನಡೆದ ಪ್ರಮುಖ ಭಯೋತ್ಪಾದನೆ ವಿರೋಧಿ ಕಾರ್ಯಾಚರಣೆಗಳನ್ನು ಪ್ರಸ್ತಾಪಿಸಿದರು. ಸರ್ಜಿಕಲ್ ಸ್ಟ್ರೈಕ್, ಬಾಲಾಕೋಟ್ ದಾಳಿ ಮತ್ತು ಆಪರೇಷನ್ ಸಿಂಧೂರ್‌ಗಳನ್ನು ಭಾರತದ ಉಗ್ರವಾದ ವಿರೋಧಿ ಕ್ರಮಗಳ ಪ್ರಮುಖ ಉದಾಹರಣೆಗಳಾಗಿ ಅವರು ಮುಂದಿಟ್ಟರು.

# ಹತಾಶೆಯಿಂದ ರಾಹುಲ್ ಚು.ಆಯೋಗದ ವಿರುದ್ಧ ಆರೋಪ-ಆಶೋಕ್

ಇಡುತ್ತಿಲ್ಲ ಎಂದು ಪ್ರಶ್ನಿಸಿದರು. "ಬಾಂಗ್ಲಾದೇಶದ ಎರಡು ಕೋಟಿ ಜನ ನಮಗೆ ವೋಟ್ ಹಾಕಿ ಗೆಲ್ಲಿಸುತ್ತಿದ್ದರು ಅವರನ್ನು ಕಳುಹಿಸಿದ್ದು ಏಕೆ ಎಂದು ಕಾಂಗ್ರೆಸ್ ಕೇಳಲಿ ಎಂದರು ಕಾಂಗ್ರೆಸ್ ನ ಚುನಾವಣಾ ಗಿಮಿಕ್ಸ್ ಗೆ ನಾವು ಹೆದರಲ್ಲ.ಮುಂದಿನ ಯಾವ ಚುನಾವಣೆಯೂ ಕಾಂಗ್ರೆಸ್ ಪರ ಇಲ್ಲ.

ಅವಮಾನ ಆಗಬಾರದು ಎಂದು ಈಗ ನಿರೀಕ್ಷಣಾ ಜಾಮೀನು ತಗೋತಿದ್ದಾರೆ.

ಕಾಂಗ್ರೆಸ್ ದೇಶದಲ್ಲಿ ಮುಳುಗುವ ಹಡಗು. ಎಂದು ಗೇಲಿ ಮಾಡಿದರು ಇದಲ್ಲದೆ, ಸರ್ಜಿಕಲ್ ಸ್ಟ್ರೈಕ್ ಅನ್ನು ಬೋಗಸ್ ಎಂದು ಹೇಳುವ ಮೂಲಕ ದೇಶದ ಸೈನಿಕರಿಗೆ ಕಾಂಗ್ರೆಸ್ ಅವಮಾನ ಮಾಡುತ್ತಿದೆ ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಎಸ್‌ಐಟಿ ರಚನೆ ಮಾಡಿದರೂ ಕಾಂಗ್ರೆಸ್ ವಿರೋಧಿಸುತ್ತದೆ. ಆರ್ಟಿಕಲ್ 370, ತ್ರಿಬಲ್ ತಲಾಖ್ ರದ್ದು, ರಾಮಮಂದಿರ, ವಂದೇ ಮಾತರಂ ಎಲ್ಲದಕ್ಕೂ ಕಾಂಗ್ರೆಸ್ ವಿರೋಧ ಮಾಡುತ್ತದೆ ಎಂದು ಆರೋಪಿಸಿದ ಅವರು, "ಸಲ್ಮಾನ್ ಖಾನ್, ಶಾರುಖ್ ಖಾನ್, ಆಮೀರ್ ಖಾನ್ ಅವರೆಲ್ಲ ಗಣೇಶ ಪೂಜೆ ಮಾಡುತ್ತಾರೆ. ರಾಹುಲ್ ಗಾಂಧಿಗೆ ದೇಶದ ಒಳ್ಳೆಯ ಮುಸ್ಲಿಮರಿಂದ ಅವರು ಕಲಿಯಬೇಕು" ಎಂದು ಹೇಳಿದರು.

ರಾಜ್ಯದಲ್ಲಿ ಹಣಕಾಸು ಇಲಾಖೆಯ ದಾಖಲೆಗಳು ಸೋರಿಕೆ ಆಗಿರುವ ವಿಚಾರವಾಗಿ ಮಾತನಾಡಿದ ಅಶೋಕ್, "ಫೈನಾನ್ಸ್ ದಾಖಲೆ ಲೀಕ್ ಆಗಿದ್ದರೆ ಡಿ.ಕೆ. ಶಿವಕುಮಾರ್ ಗೆಟ್ ಔಟ್ ಆಗಬೇಕು. ಚುನಾವಣಾ ಆಯೋಗಕ್ಕೆ ಗೋ ಅವೇ ಎಂದು ಹೇಳುವವರು, ಇಲ್ಲಿ ಸಿಎಂ ಕೂಡ ಗೋ ಅವೇ ಆಗಬೇಕು" ಎಂದು ಪರೋಕ್ಷವಾಗಿ ಡಿಕೆಶಿ ವಿರುದ್ಧ ಟೀಕೆ ಮಾಡಿದರು.

ಸಚಿವ ಬಾಲಕೃಷ್ಣ ಅವರು 'ಗ್ಯಾರಂಟಿಯಿಂದ ಪಿಂಚಣಿ ಕೊಡಲು ಕಷ್ಟವಾಗಿದೆ' ಎಂಬ ಹೇಳಿಕೆಗೆ ಪ್ರತಿಕ್ರಿಯಿಸಿದ ಅಶೋಕ್, ಗ್ಯಾರಂಟಿ ಯೋಜನೆಗಳ ಬಗ್ಗೆ ಕಾಂಗ್ರೆಸ್ ಸ್ಪಷ್ಟ ತೀರ್ಮಾನ ತೆಗೆದುಕೊಳ್ಳಬೇಕು. ಈಗಾಗಲೇ ಅರ್ಧದಷ್ಟು ಗ್ಯಾರಂಟಿ ಕಡಿತಗೊಳಿಸುವ ಯೋಜನೆ ಇದೆ. ಕಾಂಗ್ರೆಸ್ ಶಾಸಕರೇ ಗ್ಯಾರಂಟಿ ಬೇಡ ಎಂದು ಹೇಳುತ್ತಿದ್ದಾರೆ. ಹಣಕಾಸು ಇಲಾಖೆ ಮೇಲೆ 'ದಿವಾಳಿ' ಎಂದು ಬೋರ್ಡ್ ಹಾಕಬೇಕು ಎಂದು ಅಶೋಕ್ ಹೇಳಿದರು

ಸರ್ವಪಕ್ಷ ನಿಯೋಗದ ಭೇಟಿ: ಕಸ್ತೂರಿರಂಗನ್ ವರದಿ ವಿಚಾರದಲ್ಲಿ ಸರ್ವಪಕ್ಷ ನಿಯೋಗದ ಜೊತೆ ನಾವು ಕೇಂದ್ರ ಸಚಿವರನ್ನು ಭೇಟಿ ಮಾಡುತ್ತಿದ್ದೇವೆ ಹೊರತು ಬರದ ವಿಚಾರದಲ್ಲಿ ಅಲ್ಲ ಎಂದು ಆರ್ ಅಶೋಕ್ ಸ್ಪಷ್ಟಪಡಿಸಿದರು ಬರದ ವಿಚಾರದಲ್ಲಿ ರೈತರಿಗೆ ಮೋಸ ಮಾಡಿದ್ದಾರೆ..ಹಾಗಾಗಿ ನಾವು ಬರದ ವಿಚಾರಕ್ಕೆ ನಿಯೋಗದ ಜೊತೆ ಹೋಗಲ್ಲ. ಎಂದು ಹೇಳಿದರು

ಬಿಡದಿ ಟೌನ್ ಶಿಪ್ ಹೋರಾಟ ವಿಚಾರದ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು ರೈತರ ಹೋರಾಟ ಸತ್ಯ ಇದೆರಿಯಲ್ ಎಸ್ಟೇಟ್ ಮಾಡಲು ಡಿಕೆಶಿ ಹೊರಟಿದ್ದು ಖಂಡನೀಯ ಬಿಜೆಪಿ ಸರ್ಕಾರ ಬಂದ್ರೆ ಬಿಡದಿ ಟೌನ್ ಶಿಪ್ ಯೋಜನೆ ರದ್ದು ಮಾಡುತ್ತೇವೆ ಇನ್ನೊಂದು ವರ್ಷ ಕಾಯೋಣ ರೈತರ ಜೊತೆ ನಮ್ಮನ್ನೂ ಜೈಲಿಗೆ ಕಳಿಸಿ, ನಾವು ಸಿದ್ದರಿದ್ದೇವೆ. ಎಂದರು ಚಲವಾದಿ ಹೇಳಿಕೆ ಇದೇ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿಧಾನ ಪರಿಷತ್ತಿನ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ರಾಹುಲ್ ಗಾಂಧಿ ಅವರ ಗ್ರಾಫ್ ಮೇಲೇಳ್ತಿಲ್ಲ ಅದಕ್ಕಾಗಿ ಎಸ್‌ಐಆರ್ ಬಗ್ಗೆ ತಲೆಕೆಡಿಸಿಕೊಂಡಿದ್ದಾರೆ ಕೇರಳದಲ್ಲಿ ಕಮ್ಯುನಿಷ್ಟ್‌ನವರು ಬೋಗಸ್ ಓಟ್ ಹಾಕ್ತಿದ್ರು ಎಸ್‌ಐಆರ್ ಆದಮೇಲೆ ಕಾಂಗ್ರೆಸ್ ಗೆದ್ದಿದೆ ಎಂದು ಅಲ್ಲಿನ ಕೈ ನಾಯಕರು ಹೇಳ್ತಿದಾರೆ

ರಾಹುಲ್ ಗಾಂಧಿ ಯಾವ ದೇಶದವರು ಎಂದು ಗೂಗಲ್ ಮಾಡಿದೆ ರಾಹುಲ್ ಗಾಂಧಿ ಭಾರತದವರು, ಆದ್ರೆ ನೆಹರು, ಗಾಂಧಿ ಫ್ಯಾಮಿಲಿ ರಾಜಕೀಯ ಹಿನ್ನೆಲೆ ಎಂದು ಗೂಗಲ್ ಹೇಳತ್ತೆ ಆದ್ರೆ ರಾಹುಲ್ ಗಾಂಧಿ ಎಂದಿಗೂ ನೆಹರೂ ಫ್ಯಾಮಿಲಿ ಎನ್ನಲ್ಲ ಎಂದರು ಮತಪಟ್ಟಿಯಿಂದ ಹೆಸರು ತೆಗೆದ್ರೂ

ದಾಖಲಾತಿ ಕೊಟ್ಟು ಸೇರಿಸಿ ದಾಖಲೆ ಇಲ್ಲದಿದ್ದರೆ ಹೋಗತ್ತೆ ಅಷ್ಟೆಾಂಗ್ರೆಸ್ ಮತದಾರರು ಹೊರದೇಶದವರು ಅವರು ದಾಖಲೆ ಇಲ್ಲದ ಕಾರಣ ಮತ ಪಟ್ಟಿಯಿಂದ ಹೋದರು ಇದೇ ಹತಾಶೆಯಿಂದ ಕಾಂಗ್ರೆಸ್ ವಿರೋಧ ಮಾಡುತ್ತಿದೆ ಎಂದು ದೂರಿದರು

ಚುನಾವಣಾ ಆಯೋಗದ ಹೆಸರಲ್ಲಿ ಬಿಜೆಪಿಗೆ ಟಾರ್ಗೆಟ್ ಮಾಡ್ತಿದ್ದಾರೆ ಹಾಗಾಗಿ ಬಿಜೆಪಿ ಈ ಬಗ್ಗೆ ಮಾತಾಡ್ತಿದೆ ಎಲೆಕ್ಷನ್ ಕಮಿಷನ್ ಯಾರ ಗುಲಾಮರು ಅಲ್ಲ

ಸೋನಿಯಾಗಾಂಧಿ ಭಾರತದ ಪ್ರಜೆಯಾಗುವ ಮುನ್ನ ಇಲ್ಲಿನ ಮತದಾರರಾಗಿದ್ದರು ರಾಹುಲ್ ಗಾಂಧಿ ಇದನ್ನ ಯಾವಾಗ ವಿರೋಧ ಮಾಡ್ತೀರಿ

ಓಟ್ ಚೋರಿ ಆಗ್ತಿಲ್ಲ, ಕಳ್ಳರ ಮತ ಕಾಂಗ್ರೆಸ್ ಕೈ ತಪ್ಪಿದೆ ಇನ್ನೂ 30 ವರ್ಷ ಹೋದರು ರಾಹುಲ್ ಗಾಂಧಿ, ಕಾಂಗ್ರೆಸ್ ಗೆ ಯಂಗ್ ಮ್ಯಾನ್ ರಾಹುಲ್ ಗಾಂಧಿ ದೇಶಕ್ಕೇ ಕಳಂಕ ಆದರೂ ಬಿಜೆಪಿಗೆ ಒಳ್ಳೆಯದಾಗುತ್ತಿದೆ ಅವರು ಹಾದು ಹೋದ ಜಾಗದಲ್ಲೆಲ್ಲ ಬಿಜೆಪಿ ಗೆಲ್ಲತ್ತೆ

ರಾಹುಲ್ ಗಾಂಧಿಯವರಿಗೆ ದಯವಿಟ್ಟು ಮದುವೆ ಮಾಡಿ ಆಗಲಾದ್ರು ಹುಚ್ಚು ಬಿಡಬಹುದು ಎಂದು ಲೇವಡಿ ಮಾಡಿದರು

ಮೇರಾ ನಾಮ್ ಜೋಕರ್ ಸಿನಿಮಾ ರಿಲೀಸ್ ಆದ ದಿನವೇ ರಾಹುಲ್ ಗಾಂಧಿ ಹುಟ್ಟಿದ್ದು ಹಾಗಾಗಿ ರಾಹುಲ್ ಗಾಂಧಿ ಜೋಕರ್ ಆಗ್ಬಿಟ್ಟಿದ್ದಾರೆ

ದೇಶ ಒಡೆಯುವ ಕೆಲಸಕ್ಕೆ ಈಗ ಅವಕಾಶವೇ ಸಿಕ್ತಿಲ್ಲ ಅಜಿತ್ ದೋವಲ್ ಅವರನ್ನೂ ವಿರೋಧ ಮಾಡ್ತಿದಾರೆ ದುಷ್ಕೃತ್ಯ ನಡೆಯಲು ಅಜಿತ್ ದೋವಲ್ ಬಿಡ್ತಿಲ್ಲ. ಹಾಗಾಗಿ ಅವರನ್ನು ವಿರೋಧ ಮಾಡುತ್ತಿದ್ದಾರೆ ಎಂದು ಛಲವಾದಿ ನಾರಾಯಣಸ್ವಾಮಿ ಹೇಳಿದರು ಸುದ್ದಿಗೋಷ್ಠಿಯಲ್ಲಿ ಬಿಜೆಪಿ ವಕ್ತಾರ ಎಸ್ ಪ್ರಕಾಶ್ ಉಪಸ್ಥಿತರಿದ್ದರು

# ಅಕ್ಟೋಬರ್ ಮೊದಲ ವಾರದಲ್ಲಿ ರಾಜ್ಯಕ್ಕೆ ಕೇಂದ್ರ ಬರ ಅಧ್ಯಯನ ತಂಡ

ಪರಿಶೀಲಿಸಲಿದ್ದಾರೆ.

ಕೇಂದ್ರದ ಅಧ್ಯಯನ ತಂಡವು ಶೀಘ್ರದಲ್ಲೇ ರಾಜ್ಯದ ಬರಪೀಡಿತ ಪ್ರದೇಶಗಳಿಗೆ ಖುದ್ದಾಗಿ ಭೇಟಿ ನೀಡಿ, ಬೆಳೆ ನಷ್ಟದ ವಾಸ್ತವ ಸ್ಥಿತಿಯನ್ನು ಪರಿಶೀಲಿಸಲಿದೆ. ಈ ತಂಡ ನೀಡುವ ವರದಿಯ ಆಧಾರದ ಮೇಲೆ ಕೇಂದ್ರ ಸರ್ಕಾರವು ಅಂತಿಮ ಎನ್‌ಡಿಆರ್‌ಎಫ್ ಅನುದಾನವನ್ನು ಬಿಡುಗಡೆ ಮಾಡಲಿದೆ

ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಅಧಿಕಾರಿಗಳು ಹಾಗೂ ಕಂದಾಯ ಇಲಾಖೆ ಅಧಿಕಾರಿಗಳ ಸಹಯೋಗದಲ್ಲಿ ಗ್ರೌಂಡ್ ಟ್ರೂಥಿಂಗ್ ನಡೆಸಲಾಗುತ್ತಿದ್ದು, ಬೆಳೆ ಹಾನಿ, ಮಳೆ ಕೊರತೆ ಸೇರಿದಂತೆ ಬರ ಪರಿಸ್ಥಿತಿಯ ವಿವಿಧ ಅಂಶಗಳನ್ನು ಪರಿಶೀಲಿಸಲಾಗುತ್ತಿದೆ.

ಈಗಾಗಲೇ ರಾಜ್ಯ ಸರ್ಕಾರ 177 ತಾಲೂಕುಗಳನ್ನು ಬರಪೀಡಿತ ತಾಲೂಕುಗಳ ಪಟ್ಟಿಗೆ ಸೇರಿಸಿದೆ. ತಿಂಗಳಾಂತ್ಯದಲ್ಲಿ ನಡೆಯಲಿರುವ ಗ್ರೌಂಡ್ ಟ್ರೂಥಿಂಗ್ ಬಳಿಕ ಮತ್ತಷ್ಟು ತಾಲೂಕುಗಳನ್ನು ಪಟ್ಟಿಗೆ ಸೇರಿಸುವ ಸಾಧ್ಯತೆ ಇದ್ದು, ಒಟ್ಟು ಸುಮಾರು 220 ತಾಲೂಕುಗಳು ಬರಪೀಡಿತ ಎಂದು ಘೋಷಣೆಯಾಗುವ ಸಾಧ್ಯತೆ ಇದೆ.

ಬರ ಪರಿಹಾರವಾಗಿ ಕೇಂದ್ರ ಸರ್ಕಾರದಿಂದ ಸುಮಾರು ?3,705 ಕೋಟಿ ನೆರವು ನೀಡುವಂತೆ ರಾಜ್ಯ ಸರ್ಕಾರ ಒತ್ತಾಯಿಸಿದೆ. ಕೇಂದ್ರ ಬರ ಅಧ್ಯಯನ ತಂಡದ ಸ್ಥಳ ಪರಿಶೀಲನೆಯ ಬಳಿಕ ವರದಿ ಸಲ್ಲಿಕೆಯಾಗಲಿದ್ದು, ಅದರ ಆಧಾರದ ಮೇಲೆ ಕೇಂದ್ರದಿಂದ ಪರಿಹಾರ ಕುರಿತು ಮುಂದಿನ ಕ್ರಮ ಕೈಗೊಳ್ಳುವ ನಿರೀಕ್ಷೆಯಿದೆ.

**ರಾಜ್ಯ ಸರ್ಕಾರದ ತಕ್ಷಣದ ಪರಿಹಾರ ಘೋಷಣೆ:**

ಪ್ರಸ್ತುತ, ಕರ್ನಾಟಕದಲ್ಲಿ ತೀವ್ರ ಬರ ಪರಿಸ್ಥಿತಿ ಎದುರಾಗಿದ್ದು, ರಾಜ್ಯ ಸರ್ಕಾರವು ಕೇಂದ್ರದ ಹಣಕ್ಕಾಗಿ ಕಾಯದೆ ತನ್ನದೇ ಬೊಕ್ಕಸದಿಂದ ತಕ್ಷಣದ ಮೊದಲ ಹಂತದ ಪರಿಹಾರವನ್ನು ಘೋಷಿಸಿದೆ. ಬರದಿಂದ ತತ್ತರಿಸಿರುವ ರಾಜ್ಯದ ಸುಮಾರು 45 ರಿಂದ 50 ಲಕ್ಷ ರೈತರಿಗೆ ತಲಾ 2,500 ರೂ. ಗಳ ತುರ್ತು ಇನ್‌ಪುಟ್ ಸಬ್ಸಿಡಿಯನ್ನು ಘೋಷಿಸಲಾಗಿದೆ.

**ಬೊಕ್ಕಸಕ್ಕೆ ಹೊರೆ:**

ಈ ತಕ್ಷಣದ ನೆರವಿಗಾಗಿ ರಾಜ್ಯ ಸರ್ಕಾರವು ಒಟ್ಟು 1,250 ಕೋಟಿ ರೂ. ಗಳನ್ನು ಮೀಸಲಿಟ್ಟಿದೆ.

**ಸಾಲ ಮರುಪಾವತಿಗೆ ಅವಧಿ ವಿಸ್ತರಣೆ:**

ಬರಪೀಡಿತ ತಾಲೂಕುಗಳ ರೈತರಿಗೆ ಕೃಷಿ ಸಾಲ ಮರುಪಾವತಿಗೆ 12 ತಿಂಗಳ ಮೊರಟೋರಿಯಂ (ಅವಧಿ ವಿಸ್ತರಣೆ) ನೀಡಲು ಬ್ಯಾಂಕುಗಳು ಒಪ್ಪಿಕೊಂಡಿವೆ. ತೀವ್ರ ಬಾಧಿತ ಪ್ರದೇಶಗಳಲ್ಲಿ ಈ ಅವಧಿಯನ್ನು 60 ತಿಂಗಳವರೆಗೆ ಮರುಹೊಂದಾಣಿಕೆ ಮಾಡಬಹುದಾಗಿದೆ

**ಬರಪೀಡಿತ ತಾಲೂಕುಗಳು:**

ರಾಜ್ಯದಲ್ಲಿ ಈಗಾಗಲೇ 177 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದ್ದು, ಈ ಸಂಖ್ಯೆ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ.

**ಮಧ್ಯಂತರ ಪರಿಹಾರಕ್ಕೆ ಒತ್ತಾಯ:**

ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಕರಡು ಮನವಿ ಸಲ್ಲಿಸಿದ್ದು, ಹಾನಿಯ ಮೌಲ್ಯಮಾಪನ ಮುಗಿಯುವವರೆಗೆ ಶೇ. 50 ರಷ್ಟು ಮೊತ್ತವನ್ನು ಅಂದರೆ 1,852 ಕೋಟಿ ರೂ.ಗಳನ್ನು ಮಧ್ಯಂತರ ಹಣಕಾಸು ನೆರವು ಆಗಿ ತಕ್ಷಣ ಬಿಡುಗಡೆ ಮಾಡುವಂತೆ ಕೋರಿದೆ.

# ರೈತರ ಪರವಾಗಿ ನಾವು ನಿಲ್ಲುತ್ತೇವೆ

ತಲುಪಿದ್ದೀರಿ, ಇನ್ನೇನು ಕೊನೆಯಾಗುತ್ತದೆ. ಕಾಯುತ್ತಿರಿ. ನನ್ನ ಬಳಿ ಇರುವ ವಿಚಾರಗಳನ್ನು ಕೊಟ್ಟರೆ ದಿನಕ್ಕೊಂದು ಸುದ್ದಿಯಾಗುತ್ತದೆ" ಎಂದು ಕುಮಾರಸ್ವಾಮಿ ಎಚ್ಚರಿಕೆ ನೀಡಿದರು.

**ರೈತರಿಗೆ 2500 ರೂ. ಸಬ್ಸಿಡಿ ಕುರಿತು ಕುಮಾರಸ್ವಾಮಿ ಟೀಕೆ:**

ಕೇಂದ್ರ ಸರ್ಕಾರವು ರೈತರಿಗೆ ನೀಡುತ್ತಿರುವ 2500 ರೂ. ಸಬ್ಸಿಡಿ ಬಗ್ಗೆ ಮಾತನಾಡಿದ ಅವರು, "ನಾನು ಎರಡು ಬಾರಿ ಸಿಎಂ ಆಗಿದ್ದಾಗಲೂ ಕೇಂದ್ರದ ಮುಂದೆ ಕೈ ಚಾಚಲಿಲ್ಲ. ಈಗ ರೈತರಿಗೆ ಎರಡೂವರೆ ಸಾವಿರ ಸಬ್ಸಿಡಿ ಕೊಟ್ಟು ಕೇಂದ್ರದ ಮುಂದೆ ಕೈ ಚಾಚುತ್ತಿದ್ದಾರೆ. ನನ್ನ ಸರ್ಕಾರದಲ್ಲಿಯೇ ಕಬ್ಬು ಬೆಳೆಗಾರರಿಗೆ 28 ಸಾವಿರ ಕೋಟಿ ಪರಿಹಾರ ನೀಡಲಾಗಿತ್ತು. ಆಗಲೇ ಎರಡೂವರೆ ಸಾವಿರ ಕೋಟಿ ಸಾಲ ಮನ್ನಾ ಮಾಡಲಾಗಿತ್ತು. ನಾನು ಈ ಪಾಪಿಗಳ ಜೊತೆ ಸೇರಿದ್ದು ರೈತರಿಗೆ ಸಹಾಯ ಮಾಡಲು ಮಾತ್ರ" ಎಂದು ಪ್ರತಿಪಾದಿಸಿದರು.

ನಾನು 14 ತಿಂಗಳಲ್ಲಿ ಮೈಕ್ರೋ ಫೈನಾನ್ಸ್ ಹಾವಳಿಯಿಂದ ತಪ್ಪಿಸಲು ಸಾಲ ಮನ್ನಾ ಮಾಡಿದ್ದೆ. ಈಗ ರೈತರು ಸಾಲ ಮಾಡಿ ಬಿತ್ತನೆ ಮಾಡಿದ್ದಾರೆ. 2500 ರೂ.ನಲ್ಲಿ ಏನು ಮಾಡಲು ಸಾಧ್ಯ ನೀವು ಕಾಫಿ ತಿಂಡಿಗೆ 200 ಕೋಟಿ ಖರ್ಚು ಮಾಡುತ್ತೀರಿ, ರೈತರಿಗೆ 2500 ಕೊಟ್ಟರೆ ಏನು ಮಾಡಲು ಸಾಧ್ಯ ಯಾವ ಭಾಗದಲ್ಲಿ ಎಷ್ಟು ನಷ್ಟವಾಗಿದೆ ಎಂದು ವೈಜ್ಞಾನಿಕವಾಗಿ ತೀರ್ಮಾನ ಮಾಡಿ ಪರಿಹಾರ ನೀಡಬೇಕು" ಎಂದು ಕುಮಾರಸ್ವಾಮಿ ಸರ್ಕಾರಕ್ಕೆ ಸೂಚಿಸಿದರು.

ನಂದಿನಿ ಹಾಲು ದರ ಏರಿಕೆಗೆ ವಿರೋಧ ವ್ಯಕ್ತಪಡಿಸಿದ ಅವರು, ದರ ಏರಿಕೆ ಮಾಡಿ ಗ್ರಾಹಕರಿಗೆ ಬರೆ ಹಾಕುವುದು ಸರಿಯಲ್ಲ. ಅದರ ಬದಲು ಸರ್ಕಾರದಿಂದಲೇ ಹಾಲು ಉತ್ಪಾದಕರಿಗೆ 5 ರೂ. ಪ್ರೋತ್ಸಾಹ ಧನ ನೀಡಿ ಎಂದು ಕುಮಾರಸ್ವಾಮಿ ಒತ್ತಾಯಿಸಿದರು.

**ಸರ್ವಪಕ್ಷ ನಿಯೋಗ ದೆಹಲಿಗೆ: ಕುಮಾರಸ್ವಾಮಿ ವ್ಯಂಗ್ಯ:**

ಸರ್ವಪಕ್ಷ ನಿಯೋಗವನ್ನು ದೆಹಲಿಗೆ ಕರೆದುಕೊಂಡು ಹೋಗುವ ವಿಚಾರವಾಗಿ ಕುಮಾರಸ್ವಾಮಿ ವ್ಯಂಗ್ಯವಾಡಿದರು. ಸರ್ವಪಕ್ಷ ನಿಯೋಗ ಹೋಗಿ ಏನು ಮಾಡುತ್ತೀರಿ ಅದೊಂದು ಖರ್ಚು. ವಿಮಾನ, ಫೈವ್ ಸ್ಟಾರ್ ಹೋಟೆಲ್ ಎಲ್ಲಾ ಖರ್ಚು. ನೀವೇ ಯಾರಾದರೂ ಹೋಗಿ ಮಾತಾಡಿಕೊಂಡು ಬರಲು ಆಗಲ್ವಾ ರಾಜ್ಯದ ಖಜಾನೆ ಖಾಲಿಯಾಗಿದೆ ಎಂದು ನಾನು ಹೇಳುವುದಿಲ್ಲ, ಖಾಲಿ ಮಾಡಿಕೊಂಡು ಕುಳಿತಿರುವವರು ನೀವು ಎಂದು ತಿರುಗೇಟು ನೀಡಿದರು.

# ಸ್ಕ್ವಾಷ್ ಸಿಂಗಲ್ಸ್: ಅಭಯ್ ಗೆ ಬೆಳ್ಳಿ ಪದಕ

ನಗೋಯಾ, ಸೆ.27 : ಅಭಯ್ ಸಿಂಗ್ ಏಷ್ಯನ್ ಗೇಮ್ಸ್‌ನ ಸ್ಕ್ವಾಷ್ ಸ್ಪರ್ಧೆಯ ಸಿಂಗಲ್ಸ್ ವಿಭಾಗದಲ್ಲಿ ಕಂಚಿನ ಪದಕ ಗೆಲ್ಲುವ ಮೂಲಕ ಭಾರತದ ಪದಕ ಸಂಖ್ಯೆಯನ್ನು 31ಕ್ಕೆ ವಿಸ್ತರಿಸಿದ್ದಾರೆ.

ಭಾನುವಾರ ಬ್ಯಾಡ್ಮಿಂಟನ್ ಕ್ರೀಡೆಯಲ್ಲಿನ ತೀವ್ರ ನಿರಾಸೆಯ ನಡುವೆಯೂ ಅಭಯ್ ಬೆಳ್ಳಿ ಬೆಳಕು ಮೂಡಿಸಿದರು. ಫೈನಲ್ ಪ್ರವೇಶಿಸಿ ಇತಿಹಾಸ ನಿರ್ಮಿಸಿದ್ದ ಅಭಯ್, 0-3 ಅಂತರದಲ್ಲಿ ಮಲೇಷ್ಯಾದ ಈನ್ ಯೋವ್ ಎನ್ಗ್ ವಿರುದ್ಧ ಪರಾಭವಗೊಂಡು ಸ್ವರ್ಣ ಗೆಲ್ಲುವ ಅವಕಾಶವನ್ನು ಕೈಚೆಲ್ಲಿದರು.

ಭಾರತ ಸದ್ಯ 4 ಚಿನ್ನ, 12 ಬೆಳ್ಳಿ, 14 ಕಂಚು ಸೇರಿದಂತೆ ಒಟ್ಟು 31 ಪದಕಗಳನ್ನು ಗೆದ್ದು ಪದಕ ಪಟ್ಟಿಯಲ್ಲಿ 12ನೇ ಸ್ಥಾನದಲ್ಲಿದೆ.

# 254 ಔಷಧ ಕಂಪನಿಗಳ ಅಕ್ರಮ ಎಫ್‌ಡಿಎ ಬಯಲು

ಕೆಯ ಸಮಗ್ರ ಪಟ್ಟಿಯನ್ನು ಎನ್‌ಪಿಪಿಎಗೆ ಸಲ್ಲಿಸಲಾಗಿದೆ ಎಂದು ಎಫ್‌ಡಿಎ ಆಯುಕ್ತ ಕೆ. ಶ್ರೀನಿವಾಸ್ ಪತ್ರದಲ್ಲಿ ತಿಳಿಸಿದ್ದಾರೆ.

**ಸೂಕ್ತ ಬೆಲೆ ನಿಗದಿಪಡಿಸಿ:**

ಡ್ರಗ್ಸ್ ಪ್ರೈಸಸ್ ಕಂಟ್ರೋಲ್ ಆರ್ಡರ್ 2013ರ ನಿಯಮಗಳ ಅಡಿಯಲ್ಲಿ ಈ ದರಗಳನ್ನು ತುರ್ತಾಗಿ ನಿಯಂತ್ರಣಕ್ಕೆ ತರಬೇಕು ಎಂದು ಅವರು ಒತ್ತಾಯಿಸಿದ್ದಾರೆ. ಆಸ್ಪತ್ರೆಗಳಲ್ಲಿ ವಿಧಿಸಲಾಗುತ್ತಿರುವ ಅತಿಯಾದ ಟ್ರೇಡ್ ಮಾರ್ಜಿನ್‌ಗೆ ಗರಿಷ್ಠ ಮಿತಿ ನಿಗದಿಪಡಿಸಬೇಕು. ಅಲ್ಲದೆ, ಔಷಧಗಳು, ವೈದ್ಯಕೀಯ ಉಪಕರಣಗಳು ಹಾಗೂ ಕನ್ಸ್ಯೂಮಬಲ್ಸ್‌ಗಳ ಉತ್ಪಾದನಾ ಅಥವಾ ಲ್ಯಾಂಡಿಂಗ್ ವೆಚ್ಚಕ್ಕೆ ಅನುಗುಣವಾಗಿ ಸೂಕ್ತ ಬೆಲೆ ನಿಗದಿಪಡಿಸಿ, ಬಡ ಹಾಗೂ ಸಂಕಷ್ಟದಲ್ಲಿರುವ ರೋಗಿಗಳ ಮೇಲಿನ ಆರ್ಥಿಕ ಹೊರೆ ಕಡಿಮೆ ಮಾಡಬೇಕು ಎಂದು ಮನವಿ ಮಾಡಿದ್ದಾರೆ.

# ರಾಪಿಡೋ ಪಾರ್ಟನರ್ ವಿರುದ್ಧ ಅಸಭ್ಯ ವರ್ತನೆ ಆರೋಪ

ಬೆಂಗಳೂರು, ಸೆ.27 – ರಾಪಿಡೋ ಪಾರ್ಟನರ್ ಶಿವ ರೆಡ್ಡಿ ಎಂಬಾತನ ವಿರುದ್ಧ ಮಹಿಳೆಯೊಬ್ಬರು ಅಸಭ್ಯ ವರ್ತನೆ ಆರೋಪ ಮಾಡಿದ್ದಾರೆ.

ಮನೆಯ ಗೇಟ್ ಬಳಿ ಮೂತ್ರ ವಿಸರ್ಜನೆ ಮಾಡಿ ಅಸಭ್ಯವಾಗಿ ವರ್ತಿಸಿರುವುದಾಗಿ ಮಹಿಳೆ ಆರೋಪಿಸಿದ್ದಾರೆ. ಘಟನೆಗೆ ಸಂಬಂಧಿಸಿದ ಸಿಸಿಟಿವಿ ದೃಶ್ಯಗಳನ್ನು ಟ್ಯಾಗ್ ಮಾಡಿ ಪೊಲೀಸರಿಗೆ ದೂರು ನೀಡಿರುವುದಾಗಿ ತಿಳಿಸಿದ್ದಾರೆ.

ಇದೇ ವೇಳೆ, ಗೇಟ್ ಬಳಿ ಮೂತ್ರ ವಿಸರ್ಜನೆ ಮಾಡಿರುವುದಾಗಿ ಶಿವ ರೆಡ್ಡಿ ಆಡಿಯೋ ನೋಟ್ ಕಳುಹಿಸಿದ್ದಾನೆ ಎಂದು ಮಹಿಳೆ ಆರೋಪಿಸಿದ್ದಾರೆ. ಆ ಆಡಿಯೋ ನೋಟ್‌ನ್ನು ಮೀಡಿಯಾ ಪೋಸ್ಟ್ ಮಾಡಿ, ಕೈಗೊಳ್ಳುವಂತೆ ಪೊಲೀಸರಿಗೆ ಮನವಿ ಮಾಡಿದ್ದಾರೆ.

ಬಾಟಲ್‌ನಲ್ಲಿ ಮೂತ್ರ ತಂದು ಗೇಟ್‌ಗೆ ಚೆಲ್ಲಿರುವುದಾಗಿ ಆಡಿಯೋ ನೋಟ್‌ನಲ್ಲಿ ಹೇಳಿರುವುದಾಗಿ ಮಹಿಳೆ ತಿಳಿಸಿದ್ದಾರೆ. ಪ್ರಕರಣದ ಕುರಿತು ಪೊಲೀಸರು ಪರಿಶೀಲನೆ ನಡೆಸಿ, ಸೂಕ್ತ ಕ್ರಮ ಕೈಗೊಳ್ಳುವಂತೆ ಮಹಿಳೆ ಮನವಿ ಮಾಡಿದ್ದಾರೆ.

# ಬಿಡದಿ ಟೌನ್ ಶಿಪ್‌ಗಾಗಿ ಬಲವಂತದಿಂದ ಜಮೀನು ಪಡೆಯುವುದಿಲ್ಲ

ರಾಜಕೀಯ ಪ್ರೇರಿತ ಹೋರಾಟ ಎಂದು ಟೀಕಿಸಿರುವ ಕುರಿತು ಸಿಎಂ ಪ್ರತಿಕ್ರಿಯಿಸಿ, ನಾವು ಏನು ಹೇಳಿದ್ದೇವೋ ಅದನ್ನೇ ಚುನಾವಣಾ ಆಯೋಗದವರೇ ಹೇಳಿದ್ದಾರೆ. ನೀವು ಮಾಡುತ್ತಿರುವುದು ಸರಿಯಲ್ಲ ಎಂದು ಇಬ್ಬರು ಚುನಾವಣಾ ಆಯೋಗದ ಸದಸ್ಯರು ಹೇಳಿದ್ದಾರೆ. ಪ್ರಜಾಪ್ರಭುತ್ವ ಅಂದರೆ ಬಹುಮತ. ಇಬ್ಬರೂ ಮಾಡುತ್ತಿರುವುದು ಸರಿಯಲ್ಲ ಎಂದು ಹೇಳಿದ್ದಾರೆ. ಥ್ಯಾಪೆಹಾಕಿ ಹೆದರಿಸಿ ಕುಳ್ಳಿರಿಸಿದ್ದಾರೆ ಎಂದು ದೂರಿದರು

**ಎಇಇ ಕಾಣೆಯಾಗಿರುವ ಪ್ರಕರಣ:**

ಎಇಇ ಬಗ್ಗೆ ಸಂಪೂರ್ಣ ತನಿಖೆಯಾಗಬೇಕು ಈ ಹಿಂದೆಯೂ ಅವನು ಇದೇ ರೀತಿ ಹೋಗಿದ್ದ, ಕೊನೆಯ ಬಾರಿ ಅಜ್ಮೀರ್‌ನಿಂದ ಪೊಲೀಸರು ಕರೆದುಕೊಂಡು ಬಂದಿದ್ದರು. ಕೆಲಸದ ವೀಡಿಯೋ ಮಾಡಬೇಕು ಎಂಬ ಕಾನೂನಿಗೆ ಅವನು ಸಹಕಾರ ನೀಡಿರಲಿಲ್ಲ. ಆಫೀಸರ್ ಗಳು ಕೇಳುತ್ತಿದ್ದಾರೆ. ನಾಯಕ್ ಎಂಬುವವರು ಗದಗನಲ್ಲಿ ಎರಡು ಮೂರು ಬಾರಿ ದೂರು ನೀಡಿದ್ದಾರೆ. ಸೈಟ್ಗಳನ್ನು ಭೇಟಿ ಮಾಡುತ್ತಿರಲಿಲ್ಲ. ಸಾಧ್ಯವಾದಷ್ಟು ಬೇಗ ಅವನನ್ನು ಪತ್ತೆ ಮಾಡುತ್ತೇವೆ ಎಂದು ಹೇಳಿದರು.

**ದೆಹಲಿ ಪ್ರವಾಸ ಮತ್ತು ಸಿಡಬ್ಲ್ಯುಸಿ ಸಭೆ:**

ನಾಳೆ ದೆಹಲಿಗೆ ತೆರಳುತ್ತಿರುವ ಕುರಿತು ಮಾತನಾಡಿದ ಅವರು, ವೋಟ್ ಚೋರಿ ವಿಚಾರವಾಗಿ ಸಿಡಬ್ಲ್ಯುಸಿ ಸಭೆ ಕರೆಯಲಾಗಿದೆ. ಅದರಲ್ಲಿ ನಮ್ಮ ರೂಪರೇಖೆ ಏನು ಎಂಬುದರ ಬಗ್ಗೆ ಚರ್ಚಿಸಲಾಗುವುದು. ಈಗಾಗಲೇ ನಮ್ಮ ನಾಯಕ ರಾಹುಲ್ ಗಾಂಧಿ ವೋಟ್ ಚೋರಿ ಬಗ್ಗೆ ಹೇಳಿದ್ದಾರೆ. ಅವೆಲ್ಲವೂ ಸತ್ಯ. ಯಾವ ರೀತಿಯಲ್ಲಿ ಮತಗಳ್ಳತನವಾಗಿದೆ, ಚುನಾವಣೆಯಲ್ಲಿ ಅಕ್ರಮ ನಡೆದ ಬಗ್ಗೆ ಚರ್ಚಿಸಲಾಗುವುದು. ತದನಂತರ ಸರ್ವಪಕ್ಷ ಸಭೆ ಕೂಡ ಇದೆ. ವಿರೋಧ ಪಕ್ಷಗಳನ್ನು ದೆಹಲಿಗೆ ಕರೆದಿದ್ದೇವೆ. ಸರ್ವಪಕ್ಷ ನಿಯೋಗ ಕೇಂದ್ರ ಸರ್ಕಾರವನ್ನು ಭೇಟಿ ಮಾಡಲಿದೆ" ಎಂದು ತಿಳಿಸಿದ್ದಾರೆ.

**ನಿಗಮ ಮಂಡಳಿ ಅಧ್ಯಕ್ಷರ ಆಯ್ಕೆ:**

ನಿಗಮ ಮಂಡಳಿ ಅಧ್ಯಕ್ಷರ ಆಯ್ಕೆ ಬಗ್ಗೆ ಚರ್ಚೆಯಾಗಿದೆ. ಹಿರಿಯ ಶಾಸಕರು ಮತ್ತು ಹಿರಿಯ ಕಾರ್ಯಕರ್ತರಿಗೆ ಸ್ಥಾನ ನೀಡಬೇಕಿದೆ. ಎಲ್ಲವೂ ದೆಹಲಿಗೆ ಹೋದಾಗ ಚರ್ಚೆಯಾಗುತ್ತದೆ.

# 'ಸೇವಾ ಸಂಕಲ್ಪ ಅಭಿಯಾನ' ಪೌಷ್ಟಿಕ ಆಹಾರ ಕಿಟ್ ವಿತರಣೆ



ಬೆಂಗಳೂರು.ಸೆ27: ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದ ಶಾಸಕರಾದ ಕೆ ಗೋಪಾಲಯ್ಯ ರವರ ವತಿಯಿಂದ ಗೌರವಾನ್ವಿತ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಜೀ ರವರ ಜನ್ಮದಿನಾಚರಣೆ ಹಾಗೂ ಸಾರ್ವಜನಿಕ ಸೇವೆ ಮತ್ತು ಸಮರ್ಪಣೆಯ 25 ವರ್ಷಗಳ ಸ್ಮರಣಾರ್ಥವಾಗಿ 'ಸೇವಾ ಸಂಕಲ್ಪ ಅಭಿಯಾನ' ಹಾಗೂ 'ಸ್ವಚ್ಛತಾ ಅಭಿಯಾನ'ವನ್ನು ಹಮ್ಮಿಕೊಳ್ಳಲಾಯಿತು.

ಈ ಕಾರ್ಯಕ್ರಮದ ಅಂಗವಾಗಿ ಶ್ರೀ ಮಹಾಲಕ್ಷ್ಮಿ ಎಜುಕೇಷನಲ್ ಟ್ರಸ್ಟ್ ವತಿಯಿಂದ ಪ್ರಧಾನಮಂತ್ರಿ ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮದಡಿ ಕ್ಷಯ (ಟಿ.ಬಿ.) ರೋಗಿಗಳಿಗೆ ಪೌಷ್ಟಿಕ ಆಹಾರದ ಕಿಟ್‌ಗಳನ್ನು ವಿತರಿಸಲಾಯಿತು.

ಮಾನ್ಯ ಶಾಸಕರ ಕಚೇರಿಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವರಾದ ಸುಶ್ರೀ ಶೋಭಾ ಕರಂದ್ಲಾಜೆ ಹಾಗೂ ಸ್ಥಳೀಯ ಶಾಸಕರಾದ ಶ್ರೀ ಕೆ. ಗೋಪಾಲಯ್ಯ ಅವರು ಉಪಸ್ಥಿತರಿದ್ದು, ರೋಗಿಗಳಿಗೆ ಪೌಷ್ಟಿಕಾಂಶದ ಆಹಾರ ಕಿಟ್‌ಗಳನ್ನು ವಿತರಣೆ ಮಾಡಿದರು. ದೇಶದಿಂದ ಕ್ಷಯರೋಗವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಸರ್ಕಾರದ ಸಂಕಲ್ಪಕ್ಕೆ ಕೈಜೋಡಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ರೋಗಿಗಳು ಶೀಘ್ರವಾಗಿ ಚೇತರಿಸಿಕೊಳ್ಳಲು ಪೌಷ್ಟಿಕ ಆಹಾರ ಅತ್ಯಗತ್ಯ ಎಂದು ತಿಳಿಸಲಾಯಿತು.

ಈ ಸಂದರ್ಭದಲ್ಲಿ ಮಂಡಲದ ಅಧ್ಯಕ್ಷರಾದ ಡಾ. ನಾಗೇಂದ್ರ, ಜಿಲ್ಲಾ ಅಧ್ಯಕ್ಷರಾದ ಎಸ್. ಹರೀಶ್, ಉಪಾಧ್ಯಕ್ಷರಾದ ಗಂಗಹನುಮಯ್ಯ ಹಾಗೂ ಜಯರಾಮ್, ಪ್ರಧಾನ ಕಾರ್ಯದರ್ಶಿಗಳಾದ ನಿಸರ್ಗ ಜಗದೀಶ್ ಮತ್ತು ಅವಿನ್ ಆರಾಧ್ಯ, ಮಾಜಿ ಬಿಬಿಎಂಪಿ ಸದಸ್ಯರಾದ ರಾಜೇಂದ್ರ ಕುಮಾರ್, ಶಿವಾನಂದ ಮೂರ್ತಿ, ವೆಂಕಟೇಶ್ ಮೂರ್ತಿ, ಹೇಮಂತ್ ಕುಮಾರ್, ವೆಂಕಟೇಶ್ ಸೇರಿದಂತೆ ಅನೇಕ ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

Edited. Printed and Published by B.T.Amuthan. 11/2, Queen's Road, Bangalore - 560052. For M/s KARNATAKA PUBLICATIONS (P) Ltd, 11/2, Queen's Road, Bangalore -560052. Printed at Dinasudar Printing Division, 11/2, Queen's Road, Bangalore - 560052. RNI No.36667/82

# ಹಾಲಿನ ದರ ಏರಿಕೆಗೆ ಹೋಟೆಲು ಸಂಘ ವಿರೋಧ

ಬೆಂಗಳೂರು.ಸೆ.27– ನಂದಿನಿ ಹಾಲಿನ ದರವನ್ನು ಪ್ರತಿ ಲೀಟರ್‌ಗೆ 8ರಿಂದ 10ರಷ್ಟು ಹೆಚ್ಚಿಸುವ ಪ್ರಸ್ತಾವನೆಗೆಬೆಂಗಳೂರುಹೋಟೆಲುಗಳ ಸಂಘ ವಿರೋಧ ವ್ಯಕ್ತಪಡಿಸಿದೆ. ದರ ಏರಿಕೆ ಅನಿವಾರ್ಯವಾದರೂ, ಹೆಚ್ಚಳದ ಪ್ರಮಾಣವನ್ನು 2ರಿಂದ 3ಕ್ಕೆ ಸೀಮಿತಗೊಳಿಸುವಂತೆ ಸಂಘ ಮನವಿ ಮಾಡಿದೆ.

ಹಾಲಿನ ದರದಲ್ಲಿ 8–10ರಷ್ಟು ಏಕಾಏಕಿ ಏರಿಕೆ ಮಾಡಿದರೆ ಹೋಟೆಲ್,ರೆಸ್ಟೋರೆಂಟ್,ಬೇಕರಿ, ಸಿಹಿತಿಂಡಿ ಹಾಗೂ ಐಸ್‌ಕ್ರೀಮ್ ಉದ್ಯಮಗಳ ಮೇಲೆ ಹೆಚ್ಚುವರಿ ವೆಚ್ಚದ ಹೊರೆ ಬೀಳಲಿದೆ ಎಂದು ಸಂಘ ತಿಳಿಸಿದೆ.

ಹಾಲಿನ ದರ ಹೆಚ್ಚಳದಿಂದ ಕಾಫಿ, ಟೀ ಸೇರಿದಂತೆ ಹಾಲು ಆಧಾರಿತ ಆಹಾರ ಮತ್ತು ಪಾನೀಯಗಳ ಬೆಲೆಯನ್ನೂಹೆಚ್ಚಿಸುವಅನಿವಾರ್ಯತೆ ಎದುರಾಗಲಿದೆ.ಇದರ ನೇರ ಹೊರೆ ಗ್ರಾಹಕರ ಮೇಲೆ ಬೀಳುವ ಸಾಧ್ಯತೆಯಿದೆ ಎಂದು ಸಂಘ ಆತಂಕ ವ್ಯಕ್ತಪಡಿಸಿದೆ.

ದರದಲ್ಲಿ ಹೆಚ್ಚಿನ ಪ್ರಮಾಣದ ಏರಿಕೆ ಮಾಡಿದರೆ ಹೊರ ರಾಜ್ಯಗಳಿಂದ ಪೂರೈಕೆಯಾಗುವ ಹಾಲಿಗೆ ಬೇಡಿಕೆ ಹೆಚ್ಚಾಗುವ ಸಾಧ್ಯತೆಯಿದ್ದು,ಇದರಿಂದ ನಂದಿನಿ ಹಾಲಿನ ಬಳಕೆಯ ಮೇಲೂ ಪರಿಣಾಮ ಬೀರಬಹುದು ಎಂದು ಸಂಘ ಹೇಳಿದೆ.

2–3ರಷ್ಟು ಸೀಮಿತ ದರ ಏರಿಕೆ ಮಾಡಿದರೆ ಅದರ ಹೆಚ್ಚುವರಿ ಭಾರವನ್ನು ಗ್ರಾಹಕರ ಮೇಲೆ ಹಾಕುವ ಅಗತ್ಯ ಇರುವುದಿಲ್ಲ. ಹೈನುಗಾರರ ಹೆಚ್ಚುವರಿ ಉತ್ಪಾದನಾ ವೆಚ್ಚವನ್ನು ಸರ್ಕಾರ ಅನುದಾನ ಅಥವಾ ಇತರ ಬೆಂಬಲ ಕ್ರಮಗಳ ಮೂಲಕ ಭರಿಸಬೇಕು ಎಂದು ಸಂಘ ಒತ್ತಾಯಿಸಿದೆ.

ಈ ಸಂಬಂಧ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಪಶುಸಂಗೋಪನೆ ಮತ್ತು ಹೈನುಗಾರಿಕಾ ಸಚಿವ ಸಿ. ಪುಟ್ಟರಂಗಶೆಟ್ಟಿ ಹಾಗೂ ಕೆಎಂಎಫ್ ನಿರ್ದೇಶಕರಿಗೆಸಂಘದಪದಾಧಿಕಾರಿಗಳು ಮನವಿ ಸಲ್ಲಿಸಿದ್ದಾರೆ.

ಬೆಂಗಳೂರು ಹೋಟೆಲುಗಳ ಸಂಘದ ಗೌರವಾಧ್ಯಕ್ಷ ಪಿ.ಸಿ. ರಾವ್, ಅಧ್ಯಕ್ಷ ಸುಬ್ರಮಣ್ಯ ಹೊಳ್ಳ ಎಸ್. ಹಾಗೂ ಗೌರವ ಕಾರ್ಯದರ್ಶಿ ವೀರೇಂದ್ರ ಎನ್. ಕಾಮತ್ ಮನವಿಗೆ ಸಹಿ ಮಾಡಿದ್ದಾರೆ.

# ಕನ್ನಡದ ಶಿವಮಣಿ ಎಂದೇ ಖ್ಯಾತಿ ಪಡೆದಿದ್ದ ಹಿರಿಯ ಡ್ರಮ್ಮರ್ ದೇವ ವಿಧಿವಶ



ಬೆಂಗಳೂರು,ಸೆ.27– ಕನ್ನಡ ಚಿತ್ರರಂಗದ ಪ್ರಸಿದ್ಧ ಡ್ರಮ್ ವಾದ್ಯ ಕಲಾವಿದ, ಕನ್ನಡದ ಶಿವಮಣಿ ಎಂದೇ ಗುರುತಿಸಿಕೊಂಡಿದ್ದ ಅಪಾರ ಅಭಿಮಾನಿಗಳನ್ನುಗಳಿಸಿದ್ದ ಹಿರಿಯ ಡ್ರಮ್ಮರ್ ದೇವ (64) ಅವರು ತೀವ್ರ ಅನಾರೋಗ್ಯದಿಂದ ಭಾನುವಾರ ಬೆಳಿಗ್ಗೆ ನಿಧನರಾಗಿದ್ದಾರೆ. ಕಳೆದ ಮೂರೂವರೆ ವರ್ಷಗಳಿಂದ ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ಅವರು, ಇತ್ತೀಚೆಗೆ ಗ್ಯಾಂಗ್ರಿನ್ ಸಮಸ್ಯೆಗೆ ತುತ್ತಾಗಿ ತಮ್ಮ ಒಂದು ಕಾಲನ್ನು ಕಳೆದುಕೊಂಡಿದ್ದರು. ಹೀಗಿದ್ದರೂ ಧೃತಿಗೆಡದ ಅವರು ಕೃತಕ ಕಾಲಿನ ನೆರವಿನಿಂದಲೇ ಡ್ರಮ್ಸ್ ನುಡಿಸುವುದನ್ನು ಮುಂದುವರಿಸಿ ತಮ್ಮ ವೃತ್ತಿಪರತೆಯನ್ನುಮೆರೆದಿದ್ದರು. ಕಳೆದ ಒಂದು ತಿಂಗಳಿನಿಂದ ನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಇತ್ತೀಚೆಗಷ್ಟೇ ಮನೆಗೆ ಮರಳಿದ್ದ ಅವರ ಆರೋಗ್ಯ ಸ್ಥಿತಿ ಕಳೆದ ಎರಡು ದಿನಗಳಿಂದ ದಿಢೀರ್ ಕ್ಷೀಣಿಸಿ ಕೊನೆಯುಸಿರೆಳೆದಿದ್ದಾರೆ.

ತಮ್ಮ ಸುದೀರ್ಘ ಸಂಗೀತ ಪಯಣದಲ್ಲಿ ಕನ್ನಡ ಚಿತ್ರರಂಗದ ಧುರೀಣರಾದ ಡಾ. ರಾಜ್‌ಕುಮಾರ್, ಡಾ. ವಿಷ್ಣುವರ್ಧನ್, ಅಂಬರೀಷ್, ಪುನೀತ್ ರಾಜ್‌ಕುಮಾರ್ ಸೇರಿದಂತೆ ಪ್ರಮುಖ ನಾಯಕರ ನಟನೆಯ 300ಕ್ಕೂ ಹೆಚ್ಚು ಜನಪ್ರಿಯ ಹಾಡುಗಳಿಗೆ ಅವರು ಡ್ರಮ್ಸ್ ಬಾರಿಸಿ ಸಂಗೀತಪ್ರಿಯರ ಮನ ಗೆದ್ದಿದ್ದರು. ಸಾಧುಕೋಕಿಲ,ಗುರುಕಿರಣ್ ಸೇರಿದಂತೆ ಗಂಧದಗುಡಿಯ ಪ್ರಖ್ಯಾತ ಸಂಗೀತ ನಿರ್ದೇಶಕರೊಂದಿಗೆ ನಿರಂತರವಾಗಿ ಕಾರ್ಯನಿರ್ವಹಿಸಿದ್ದ ಇವರು, '5 ಈಡಿಯಟ್ಸ್' ಹಾಗೂ 'ಪ್ರೀತಿ ನೀ ಹಿಂಗ್ಯಾಕೆ' ಚಿತ್ರಗಳಿಗೆ ಸ್ವತಃ ಸಂಗೀತ ನಿರ್ದೇಶನವನ್ನೂ ಮಾಡುವ ಮೂಲಕ ತಮ್ಮ ವೈವಿಧ್ಯಮಯ ಪ್ರತಿಭೆಯನ್ನು ಸಾಬೀತುಪಡಿಸಿದ್ದರು.

ತಂದೆಯ ನಿಧನದ ಕುರಿತು ಕಂಬನಿ ಮಿಡಿದ ಮಗಳು ರಿಶೋನಾ, ತಮ್ಮ ತಂದೆಗೆ ಡ್ರಮ್ಸ್ ಎಂದರೆ ಪ್ರಾಣವಾಗಿತ್ತು ಎಂದಿದ್ದಾರೆ. ಆಸ್ಪತ್ರೆಯ ಹಾಸಿಗೆಯಲ್ಲಿದ್ದಾಗಲೂ ಡ್ರಮ್ಸ್‌ಸ್ಟಿಕ್ಸ್ ನೀಡುವಂತೆ ಕೇಳುತ್ತಾ ಕೈಗಳಲ್ಲೇ ತಾಳ ಹಾಕುತ್ತಿದ್ದ ಅವರು, ಕೊನೆಯ ಕ್ಷಣದವರೆಗೂ ಸಂಗೀತವನ್ನೇ ಉಸಿರಾಗಿಸಿಕೊಂಡಿದ್ದರು ಎಂದು ಭಾವುಕವಾಗಿ ಸ್ಮರಿಸಿದ್ದಾರೆ. ಮೃತರ ಅಂತ್ಯಕ್ರಿಯೆಯು ಇಂದು ಮಧ್ಯಾಹ್ನ 3 ಗಂಟೆಗೆ ಕ್ರೈಸ್ತ ಸಂಪ್ರದಾಯದಂತೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದ್ದು, ಸ್ಯಾಂಡಲ್‌ವುಡ್‌ನ ಹಿರಿಯ ಹಾಗೂ ಕಿರಿಯ ಕಲಾವಿದರು, ತಂತ್ರಜ್ಞರು ಮತ್ತು ಅಪಾರ ಅಭಿಮಾನಿಗಳು ಹಿರಿಯ ಚೇತನದ ಅಗಲಿಕೆಗೆ ತೀವ್ರ ಸಂತಾಪ ಸೂಚಿಸಿದ್ದಾರೆ.

# ಹಾಲು ಉತ್ಪನ್ನಗಳ ಪರೀಕ್ಷೆಗೆ ಇಲಾಖೆ ಅಧಿಕಾರಿಗಳ ಸಿದ್ಧತೆ

ಬೆಂಗಳೂರು.ಸೆ.27–ರಾಜ್ಯಾದ್ಯಂತ ಹಾಲು ಮತ್ತು ಹಾಲಿನ ಉತ್ಪನ್ನಗಳ ಗುಣಮಟ್ಟ ಹಾಗೂ ಸುರಕ್ಷತೆಯನ್ನು ಪರಿಶೀಲಿಸಲು ಆಹಾರ ಸುರಕ್ಷತಾ ಅಧಿಕಾರಿಗಳು ಸಿದ್ಧತೆ ನಡೆಸಿದ್ದಾರೆ.

ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ಹಾಗೂ ಆಹಾರ ಸುರಕ್ಷತಾ ಅಧಿಕಾರಿಗಳ ನೇತೃತ್ವದಲ್ಲಿ ವಿವಿಧೆಡೆ ಪರಿಶೀಲನಾ ಕಾರ್ಯಾಚರಣೆ ಕೈಗೊಳ್ಳಲಾಗುತ್ತಿದೆ. ಗ್ರಾಹಕರಿಗೆ ಸರಬರಾಜಾಗುವ ಹಾಲು ಹಾಗೂ ಹಾಲಿನ ಉತ್ಪನ್ನಗಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವುದು ಇದರ ಪ್ರಮುಖ ಉದ್ದೇಶವಾಗಿದೆ.

ಹಾಲಿನ ಪೌಡರ್, ಪನ್ನೀರ್ ಸೇರಿದಂತೆ ವಿವಿಧ ಹಾಲಿನ ಉತ್ಪನ್ನಗಳ ಮಾದರಿಗಳನ್ನು ರಾಜ್ಯಾದ್ಯಂತ ಸಂಗ್ರಹಿಸಿ ಪ್ರಯೋಗಾಲಯಗಳಿಗೆ ಕಳುಹಿಸಿ ಪರೀಕ್ಷಿಸಲಾಗುತ್ತಿದೆ. ವಿಶೇಷವಾಗಿ ಪನ್ನೀರ್ ತಯಾರಿಕೆಯ ಹಂತಗಳು, ಹಾಲಿನ ಸಂಯೋಜನೆ, ನೈರ್ಮಲ್ಯ, ಪ್ಯಾಕೆಟ್‌ಗಳ ಮೇಲಿನ ಲೇಬಲಿಂಗ್ ಸೇರಿದಂತೆ ಅಗತ್ಯ ಸುರಕ್ಷತಾ ಮಾನದಂಡಗಳನ್ನು ಅಧಿಕಾರಿಗಳು ಪರಿಶೀಲಿಸುತ್ತಿದ್ದಾರೆ.

ರಾಜ್ಯಾದ್ಯಂತ ತಪಾಸಣಾ ಕಾರ್ಯಾಚರಣೆಯನ್ನು ಮತ್ತಷ್ಟು ಚುರುಕುಗೊಳಿಸುವ ಉದ್ದೇಶದಿಂದ ಒಟ್ಟು 23 ವಿಶೇಷ ತಂಡಗಳನ್ನು ರಚಿಸಲಾಗಿದೆ. ಕಲಬೆರಕೆ ಹಾಗೂ ಕಳಪೆ ಗುಣಮಟ್ಟದ ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟವನ್ನು ತಡೆಯಲು ಈ ತಂಡಗಳು ಕಾರ್ಯಾಚರಣೆ ನಡೆಸಲಿವೆ.

ಇದರ ಜೊತೆಗೆ,ಹೊರರಾಜ್ಯಗಳಿಂದ ಕರ್ನಾಟಕಕ್ಕೆ ಸರಬರಾಜಾಗುತ್ತಿರುವ ಹಾಲಿನ ಗುಣಮಟ್ಟದ ಮೇಲೂ ಅಧಿಕಾರಿಗಳು ನಿಗಾ ವಹಿಸಲು ಮುಂದಾಗಿದ್ದಾರೆ. ಈ ಹಿಂದೆ ನಡೆಸಿದ ತಪಾಸಣೆ ವೇಳೆ ಕೆಲವು ಹಾಲಿನ ಮಾದರಿಗಳಲ್ಲಿ ಯೂರಿಯಾ ಹಾಗೂ ಇತರ ರಾಸಾಯನಿಕಗಳ ಬಳಕೆ ಪತ್ತೆಯಾಗಿರುವ ಹಿನ್ನೆಲೆಯಲ್ಲಿ, ಯಾವುದೇ ಸಂಸ್ಥೆಯ ಹೆಸರು ಅಥವಾ ಸೂಕ್ತ ಲೇಬಲಿಂಗ್ ಇಲ್ಲದೆ ಮಾರಾಟವಾಗುತ್ತಿರುವ ಹಾಲಿನ ಬಗ್ಗೆಯೂ ಅಧಿಕಾರಿಗಳು ವಿಶೇಷ ಗಮನ ಹರಿಸಿದ್ದಾರೆ.

ಹಾಲು ಮತ್ತು ಹಾಲಿನ ಉತ್ಪನ್ನಗಳ ಗುಣಮಟ್ಟದಲ್ಲಿ ಯಾವುದೇ ರಾಜಿಯಾಗದಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಕರೂರು ಕಾಲ್ತುಳಿತ ದುರಂತಕ್ಕೆ ವರ್ಷ ಮೃತರ ಸ್ಮರಿಸಿ ಸಿಎಂ ವಿಜಯ್ ಸಂತಾಪ



ಚೆನ್ನೈ,ಸೆ.27– ತಮಿಳುನಾಡಿನ ಕರೂರಿನಲ್ಲಿ ನಡೆದ ದುರಂತ ಕಾಲ್ತುಳಿತ ಸಂಭವಿಸಿ ಒಂದು ವರ್ಷ ಪೂರ್ಣಗೊಂಡ ಸಂದರ್ಭದಲ್ಲಿ, ಮೃತರ ನೆನಪಿನಲ್ಲಿ ತಮಿಳುನಾಡು ಮುಖ್ಯಮಂತ್ರಿ ಹಾಗೂ ತಮಿಳಗ ವೆಟ್ರಿ ಕಳಗಂ ಪಕ್ಷದ ಅಧ್ಯಕ್ಷ ಸಿ ಜೋಷೆಫ್ ವಿಜಯ್ ಅವರು ಭಾವನಾತ್ಮಕವಾಗಿ ಸಂತಾಪ ಸೂಚಿಸಿದ್ದಾರೆ. ಈ ಘಟನೆಯನ್ನು ತಮ್ಮ ಜೀವನದಲ್ಲಿ, ಕರೂರಿನ ಜನರಲ್ಲಿ ಹಾಗೂ ಇಡೀ ತಮಿಳುನಾಡಿನ ಜನರ ಹೃದಯದಲ್ಲಿ ಎಂದಿಗೂ ಮಾಸದ ಗಾಯ ಮತ್ತು ತೀವ್ರ ನೋವು ಎಂದು ತಮ್ಮ ದುಃಖ ವ್ಯಕ್ತಪಡಿಸಿದ್ದಾರೆ.

?ಇದೇ ದಿನ, ಅಂದರೆ ಎರಡು ಸಾವಿರದ ಇಪ್ಪತ್ತೈದರ ಸೆಪ್ಟೆಂಬರ್ ಇಪ್ಪತ್ತೇಳರಂದು ಕರೂರಿನ ವೇಲುಸಾಮಿಪುರಂನಲ್ಲಿ ಎರಡು ಸಾವಿರದ ಇಪ್ಪತ್ತಾರರ ಶಾಸನಸಭಾ ಚುನಾವಣೆಯ ಪ್ರಚಾರಕ್ಕಾಗಿ ಈ ರಾಜಕೀಯ ಸಮಾವೇಶವನ್ನು ಆಯೋಜಿಸಲಾಗಿತ್ತು. ಸಮಾವೇಶದಲ್ಲಿ ಜನಸ್ತೋಮ ಮಿತಿಮೀರಿ ಹೆಚ್ಚಾಗಿದ್ದರಿಂದ ಹಾಗೂ ಮುಖ್ಯ ವೇದಿಕೆಯ ಸುತ್ತಲೂ ಸೂಕ್ತ ಸ್ಥಳಾವಕಾಶವಿಲ್ಲದ ಕಾರಣ ಹಠಾತ್ ತೂಕಾಟ ಮತ್ತು ಕಾಲ್ತುಳಿತ ಉಂಟಾಗಿತ್ತು. ಈ ಭೀಕರ ದುರಂತದಲ್ಲಿ ಮಕ್ಕಳು ಮತ್ತು ಮಹಿಳೆಯರು ಸೇರಿದಂತೆ ನಲವತ್ತೊಂದು ಜನರು ಪ್ರಾಣ ಕಳೆದುಕೊಂಡಿದ್ದರು ಹಾಗೂ ನೂರಕ್ಕೂ ಹೆಚ್ಚು ಜನರು ತೀವ್ರವಾಗಿ ಗಾಯಗೊಂಡಿದ್ದರು.

?ಈ ಘಟನೆಯ ಕುರಿತು ಕೇಂದ್ರೀಯ ತನಿಖಾ ದಳ ಅಂದರೆ ಸಿಬಿಐ ವಿಚಾರಣೆ ನಡೆಸುತ್ತಿದ್ದು, ನಾಯಕರ ತಡವಾದ ಆಗಮನ, ಸಮಾವೇಶದ ಭದ್ರತಾ ಲೋಪಗಳು ಹಾಗೂ ಅನುಮತಿಯ ನೀತಿ ನಿಯಮಗಳ ಕುರಿತು ತನಿಖೆ ಮುಂದುವರಿದಿದೆ. ದುರಂತದ ಪ್ರಥಮ ವರ್ಷದ ನೆನಪಿನಲ್ಲಿ ಸಾಮಾಜಿಕ ಮಾಧ್ಯಮದ ಮೂಲಕ ಸಂದೇಶ ಹಂಚಿಕೊಂಡಿರುವ ವಿಜಯ್ ಅವರು, ಪ್ರಾಣ ಕಳೆದುಕೊಂಡ ಬಂಧುಗಳ ಕುಟುಂಬಸ್ಥರಿಗೆ ತಮಿಳಗ ವೆಟ್ರಿ ಕಳಗಂ ಪಕ್ಷವು ಸದಾ ಬೆಂಬಲ, ಆಸರೆ ಮತ್ತು ಸಾಂತ್ವನವಾಗಿ ನಿಲ್ಲುತ್ತದೆ ಎಂದು ವಚನ ನೀಡಿದ್ದಾರೆ.

# ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸಿದ್ದ ಡೆಡ್ಲಿ ಸೋಮ ಬಂಧನ



ದೇವನಹಳ್ಳಿ.ಸೆ.27–ಪೊಲೀಸರಿಂದ ಕಳೆದ ನಾಲ್ಕು ವರ್ಷಗಳಿಂದ ತಲೆಮರೆಸಿಕೊಂಡಿದ್ದ ರೌಡಿ ಶೀಟರ್ ಸೋಮಶೇಖರ ಅಲಿಯಾಸ್ ಡೆಡ್ಲಿ ಸೋಮನನ್ನು ದೊಡ್ಡಬಳ್ಳಾಪುರ ನಗರ ಪೊಲೀಸರು ಬಂಧಿಸಿದ್ದಾರೆ.

ತಲೆಮರೆಸಿಕೊಂಡಿದ್ದ ಆರೋಪಿ ಡೆಡ್ಲಿ ಸೋಮ ಕಾಲೇಜುಗಳ ಸುತ್ತಮುತ್ತ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ.ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿದ ದೊಡ್ಡಬಳ್ಳಾಪುರ ನಗರ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

ಬಂಧಿತನಿಂದ ಸುಮಾರು 2 ಕೆಜಿ ಗಾಂಜಾ, ಅಂದಾಜು 1 ಲಕ್ಷ ಮೌಲ್ಯದ ಮಾದಕ ವಸ್ತು ವಶಪಡಿಸಿಕೊಳ್ಳಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯನ್ನು ವಿಚಾರಣೆ ನಡೆಸಲಾಗುತ್ತಿದೆ.

ಈ ಕುರಿತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

# ಅ.2ರವರೆಗೆ ದೇಶಾದ್ಯಂತ ವ್ಯಾಪಕ ಮಳೆ ಮುನ್ಸೂಚನೆ



ನವದೆಹಲಿ,ಸೆ.27–ದೇಶದ ವಿವಿಧ ಭಾಗಗಳಲ್ಲಿ ಮಾನ್ಸೂನ್ ಮಾರುತಗಳು ಮತ್ತೊಮ್ಮೆ ಸಕ್ರಿಯಗೊಂಡಿದ್ದು, ದೇಶಾದ್ಯಂತ ಅಕ್ಟೋಬರ್ ಎರಡು ರವರೆಗೆ ಭಾರಿ ಮಳೆ ಮತ್ತು ಗುಡುಗು ಸಹಿತ ಗಾಳಿ ಮುಂದುವರಿಯುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

ಈಶಾನ್ಯ ಮಧ್ಯಪ್ರದೇಶ ಹಾಗೂ ಅದಕ್ಕೆ ಹೊಂದಿಕೊಂಡಿರುವ ಉತ್ತರ ಛತ್ತೀಸ್‌ಗಢ ಭಾಗದಲ್ಲಿ ಉಂಟಾಗಿರುವ ವಾಯುಭಾರ ಕುಸಿತವು ಉತ್ತರ ಮತ್ತು ವಾಯುವ್ಯ ದಿಕ್ಕಿನತ್ತ ಚಲಿಸುತ್ತಿರುವ ಪರಿಣಾಮವಾಗಿ ದೇಶದ ಇಪ್ಪತ್ತೆರಡು ರಾಜ್ಯಗಳಲ್ಲಿ ಹವಾಮಾನ ವೈಪರೀತ್ಯ ಉಂಟಾಗಲಿದೆ. ಈ ವಾಯುಭಾರ ಕುಸಿತದ ವ್ಯವಸ್ಥೆಯು ಮುಂಬರುವ ಗಂಟೆಗಳಲ್ಲಿ ಕ್ರಮೇಣ ದುರ್ಬಲಗೊಂಡರೂ, ದೇಶದ ಪ್ರಮುಖ ಭಾಗಗಳಲ್ಲಿ ಪ್ರತಿಕೂಲ ಹವಾಮಾನ ವಾತಾವರಣ ಮುಂದುವರಿಯಲಿದೆ.

ಉತ್ತರ ಭಾರತದ ಪ್ರಮುಖ ರಾಜ್ಯಗಳಾದ ಉತ್ತರ ಪ್ರದೇಶ ಮತ್ತು ಉತ್ತರಾಖಂಡಗಳಲ್ಲಿ ಅತ್ಯಂತ ಭಾರಿ ಮಳೆಯಾಗುವ ಮುನ್ಸೂಚನೆ ನೀಡಲಾಗಿದೆ. ಈ ಪ್ರದೇಶಗಳಲ್ಲಿ ಹಠಾತ್ ಪ್ರವಾಹದ ಸ್ಥಿತಿ ನಿರ್ಮಾಣವಾಗುವ ಮತ್ತು ಗುಡ್ಡಗಾಡು ಭಾಗಗಳಲ್ಲಿ ಭೂಕುಸಿತ ಸಂಭವಿಸುವ ಅಪಾಯವಿದೆ. ಬಿರುಗಾಳಿಯ ವೇಗವು ಗಂಟೆಗೆ ನಲವತ್ತರಿಂದ ಎಪ್ಪತ್ತು ಕಿಲೋಮೀಟರ್ ತಲುಪುವ ಸಾಧ್ಯತೆ ಇರುವುದರಿಂದ ಸಾರ್ವಜನಿಕರು ಮತ್ತು ಪ್ರಯಾಣಿಕರು ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ಸೂಚಿಸಲಾಗಿದೆ. ದೆಹಲಿ, ಹರಿಯಾಣ, ಚಂಡೀಗಢ, ಪಂಜಾಬ್ ಮತ್ತು ಹಿಮಾಚಲ ಪ್ರದೇಶಗಳಲ್ಲೂ ಮಿಂಚು ಮತ್ತು ಗುಡುಗು ಸಹಿತ ಭಾರಿ ಮಳೆಯಾಗಲಿದೆ. ರಾಜಸ್ಥಾನದ ಪೂರ್ವ ಭಾಗಗಳಲ್ಲಿಯೂ ಮುಂದಿನ ಕೆಲವು ದಿನಗಳ ಕಾಲ ಮಳೆಯ ವಾತಾವರಣ ಇರಲಿದೆ.

ಮಧ್ಯ ಹಾಗೂ ಪೂರ್ವ ಭಾರತದ ರಾಜ್ಯಗಳಾದ ಮಧ್ಯಪ್ರದೇಶ, ಛತ್ತೀಸ್‌ಗಢ, ಬಿಹಾರ, ಜಾರ್ಖಂಡ್, ಒಡಿಶಾ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಮಳೆಯ ಆರ್ಭಟ ಮುಂದುವರಿಯಲಿದೆ. ಬಿಹಾರ ಮತ್ತು ಒಡಿಶಾದ ಕೆಲವು ಭಾಗಗಳಲ್ಲಿ ಗಂಟೆಗೆ ನಲವತ್ತರಿಂದ ಇಪ್ಪತ್ತು ಕಿಲೋಮೀಟರ್ ವೇಗದಲ್ಲಿ ಬಲವಾದ ಗಾಳಿ ಬೀಸಲಿದ್ದು, ವ್ಯಾಪಕ ಮಳೆಯಾಗುವ ನಿರೀಕ್ಷೆಯಿದೆ. ಈಶಾನ್ಯ ರಾಜ್ಯಗಳಾದ ಅಸ್ಸಾಂ, ಮೇಘಾಲಯ, ಅರುಣಾಚಲ ಪ್ರದೇಶ, ನಾಗಾಲ್ಯಾಂಡ್, ಮಣಿಪುರ, ಮಿಜೋರಾಂ ಮತ್ತು ತ್ರಿಪುರಾಗಳಲ್ಲೂ ಪ್ರತ್ಯೇಕ ಸ್ಥಳಗಳಲ್ಲಿ ಸುರಿಯುವ ಮಳೆ ಅಕ್ಟೋಬರ್ ಆರಂಭದವರೆಗೂ ಮುಂದುವರಿಯಲಿದೆ. ಪಶ್ಚಿಮ ಭಾರತದ ಮಹಾರಾಷ್ಟ್ರ, ಗುಜರಾತ್ ಹಾಗೂ ಕೊಂಕಣ–ಗೋವಾ ಪ್ರದೇಶಗಳಲ್ಲೂ ಗುಡುಗು ಸಹಿತ ಚದುರಿದ ಮಳೆಯಾಗುವ ಮುನ್ಸೂಚನೆ ನೀಡಲಾಗಿದೆ.

ದಕ್ಷಿಣ ಭಾರತದಲ್ಲೂ ಮಾನ್ಸೂನ್ ಪ್ರಭಾವ ಹೆಚ್ಚಿರಲಿದ್ದು, ಕರ್ನಾಟಕ, ತಮಿಳುನಾಡು, ತೆಲಂಗಾಣ, ಆಂಧ್ರಪ್ರದೇಶ, ರಾಯಲಸೀಮಾ, ಕೇರಳ, ಪುದುಚೇರಿ ಮತ್ತು ಮಾಹೆ ಪ್ರದೇಶಗಳಲ್ಲಿ ವ್ಯಾಪಕ ಮಳೆಯಾಗಲಿದೆ. ಕರ್ನಾಟಕದಲ್ಲಿ ವಿಶೇಷವಾಗಿ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಸೆಪ್ಟೆಂಬರ್ ಇಪ್ಪತ್ತೆಂಟರಿಂದ ಅಕ್ಟೋಬರ್ ಒಂದರವರೆಗೆ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, ಸೆಪ್ಟೆಂಬರ್ ಇಪ್ಪತ್ತೊಂಬತ್ತರಂದು ಅತ್ಯಂತ ಭಾರಿ ಮಳೆಯಾಗುವ ಎಚ್ಚರಿಕೆ ನೀಡಲಾಗಿದೆ. ಕರಾವಳಿ ಮತ್ತು ಉತ್ತರ ಒಳನಾಡಿನಲ್ಲೂ ವಿಪರೀತ ಗಾಳಿಯೊಂದಿಗೆ ಸಾಧಾರಣದಿಂದ ಭಾರಿ ಮಳೆಯಾಗಲಿದೆ.

ಇದೇ ವೇಳೆ ಸಮುದ್ರದಲ್ಲಿ ವಾತಾವರಣ ಕೊಂಚ ವಿಕೋಪಕ್ಕೆ ತಿರುಗುವ ಸಾಧ್ಯತೆ ಇರುವುದರಿಂದ ಹವಾಮಾನ ಇಲಾಖೆಯು ಮೀನುಗಾರರಿಗೆ ಸ್ಪಷ್ಟ ಸೂಚನೆಗಳನ್ನು ರವಾನಿಸಿದೆ. ನೈರುತ್ಯ ಅರೇಬಿಯನ್ ಸಮುದ್ರ ಹಾಗೂ ಸೊಮಾಲಿಯಾ ಕರಾವಳಿಯ ಭಾಗಗಳಲ್ಲಿ ಸಮುದ್ರ ಕ್ಷುಬ್ಧವಾಗಿರಲಿದ್ದು, ಭಾರಿ ಅಲೆಗಳು ಮತ್ತು ಬಿರುಗಾಳಿ ಬೀಸುವ ಕಾರಣ ಮೀನುಗಾರರು ಈ ಅವಧಿಯಲ್ಲಿ ಸಮುದ್ರಕ್ಕೆ ಇಳಿಯದಂತೆ ಎಚ್ಚರಿಸಲಾಗಿದೆ. ಅಕ್ಟೋಬರ್ ಎರಡರ ನಂತರವಷ್ಟೇ ದೇಶದ ಬಹುತೇಕ ಭಾಗಗಳಲ್ಲಿ ಮಳೆಯ ಪ್ರಮಾಣ ತಗ್ಗುವ ಸಾಧ್ಯತೆಯಿದೆ.

# ಕಲ್ಲು ತುಂಬಿದ್ದ ಲಾರಿ ಪಲ್ಟಿ, ಚಾಲಕ ಸಾವು

ಕೋಲಾರ.ಸೆ.27–ಕಲ್ಲು ಕ್ವಾರಿ ಬಳಿ ಕಲ್ಲು ತುಂಬಿದ್ದ ಲಾರಿ ಪಲ್ಟಿಯಾಗಿ ಚಾಲಕ ಮೃತಪಟ್ಟಿರುವ ಘಟನೆ ಕೋಲಾರ ಜಿಲ್ಲೆಯ ನರಸಾಪುರ ಸಮೀಪದ ಕೆ.ಬಿ. ಹೊಸಹಳ್ಳಿ ಗ್ರಾಮದ ನಡೆದಿದೆ.

ಚಾಕ್ಲೇಟ್ ಬಾಗಲೂರು ಗ್ರಾಮದ ರಮೇಶ್ (50) ಮೃತಪಟ್ಟಿದ್ದು,ಕ್ವಾರಿಯಿಂದ ಜಲ್ಲಿ ಕ್ರಷರ್‌ಗೆ ಕಲ್ಲು ಸಾಗಿಸುತ್ತಿದ್ದ ವೇಳೆ ಲಾರಿ ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾಗಿದೆ.

ಲಾರಿಯಲ್ಲಿ ನಿಯಮಬಾಹಿರವಾಗಿ ಅತಿಯಾದ ಪ್ರಮಾಣದಲ್ಲಿ ಕಲ್ಲು ತುಂಬಿ ಸಾಗಿಸಲಾಗುತ್ತಿತ್ತು ಎಂಬ ಆರೋಪ ಕೇಳಿಬಂದಿದೆ.

ಮಾಹಿತಿ ತಿಳಿದು ಸ್ಥಳಕ್ಕೆ ಆಗಮಿಸಿದ ಪೊಲೀಸರು ಪರಿಶೀಲನೆ ನಡೆಸಿದ್ದಾರೆ. ವೇಮಗಲ್ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

# ಪಂಚಮಸಾಲಿ ಮಠದ ಅವ್ಯವಹಾರ: ತನಿಖೆಗೆ ರಾಜ್ಯಪಾಲ ಆದೇಶ

ದಾವಣಗೆರೆ.ಸೆ.27– ಹರಿಹರ ತಾಲೂಕಿನ ಹನಗವಾಡಿ ಬಳಿ ಇರುವ ವೀರಶೈವ ಪಂಚಮಸಾಲಿ ಮಠದ ಟ್ರಸ್ಟ್‌ನಿಂದ 10 ಕೋಟಿ ರೂಪಾಯಿ ಅವ್ಯವಹಾರ ಪ್ರಕರಣದ ತನಿಖೆ ನಡೆಸುವಂತೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಸೂಚಿಸಿದ್ದಾರೆ.

ಕೋಟ್ಯಂತರ ರೂಪಾಯಿ ಅವ್ಯವಹಾರ ಆರೋಪ ಕೇಳಿಬಂದ ಹಿನ್ನೆಲೆ ಸೂಕ್ತ ತನಿಖೆ ಮಾಡಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕಾನೂನು ಕ್ರಮಕ್ಕೆ ರಾಜ್ಯಪಾಲರು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಸೂಚನೆ ನೀಡಿದ್ದಾರೆ.

ವಸತಿ ನಿಲಯ ಹಾಗೂ ಸಮುದಾಯ ಭವನ ನಿರ್ಮಿಸಲು ರಾಜ್ಯ ಸರ್ಕಾರ ಹಿಂದುಳಿದ ವರ್ಗ ಇಲಾಖೆಯಿಂದ ಹತ್ತು ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದ ಹಣ ದುರ್ಬಳಕೆ ಆಗಿದೆ ಎಂಬ ದೂರುಗಳು ಸಲ್ಲಿಕೆಯಾಗಿವೆ.

ಈ ಮಠದಲ್ಲಿನ ಅವ್ಯವಹಾರದ ಬಗ್ಗೆ ಪಂಚಮಸಾಲಿ ಮಠದ ಲೆಕ್ಕಕೊಡಿ ಚಳವಳಿ ಅಧ್ಯಕ್ಷ ಎಂ. ಜಿ. ಪರಮೇಶ್ವರ ಗೌಡ ಹಾಗೂ ಹರಿಹರದ ಮಾಜಿ ಶಾಸಕ ಹೆಚ್. ಎಸ್.ಶಿವಶಂಕರ್ ರಾಜ್ಯಪಾಲರಿಗೆ ದೂರು ಸಲ್ಲಿಕೆ ಮಾಡಿದ್ದರು. ದೂರು ಸ್ವೀಕರಿಸಿದ ರಾಜ್ಯಪಾಲ ಗೆಹ್ಲೋಟ್ ಈ ಆದೇಶ ಹೊರಡಿಸಿದ್ದಾರೆ.

# ರಾಜ್ಯದಲ್ಲಿ ವರ್ಷಾಧಾರೆ ಚುರುಕು; ಮೂರು ಜಿಲ್ಲೆಗಳಲ್ಲಿ ಭಾರಿ ಮಳೆ

ಬೆಂಗಳೂರು.ಸೆ.27–ರಾಜ್ಯದಲ್ಲಿ ಹಲವು ಜಿಲ್ಲೆಗಳಲ್ಲಿ ಮಳೆಯಾಗುವ ಸಾಧ್ಯತೆ ಇದ್ದು,ಕರಾವಳಿ ಕರ್ನಾಟಕದಲ್ಲಿ ಮಳೆ ಚಟುವಟಿಕೆ ಚುರುಕಾಗಲಿದೆ.

ನಾಳೆ ಮೈಸೂರು,ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳಲ್ಲಿ ಒಂದೆರಡು ಕಡೆ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಮುನ್ಸೂಚನೆ ತಿಳಿಸಿದೆ.

ಕರಾವಳಿ ಕರ್ನಾಟಕದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕೆಲವೆಡೆ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ಉತ್ತರ ಒಳನಾಡಿನ ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಒಂದೆರಡು ಕಡೆ ಹಗುರ ಮಳೆಯಾಗಬಹುದು. ಉಳಿದ ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಮುಖ್ಯವಾಗಿ ಒಣಹವೆ ಮುಂದುವರಿಯುವ ನಿರೀಕ್ಷೆ ಇದೆ.

ನಾಳೆ ಕರಾವಳಿ ಕರ್ನಾಟಕದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಹಲವೆಡೆ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ಉತ್ತರ ಒಳನಾಡಿನ ಬಾಗಲಕೋಟೆ, ಬೆಳಗಾವಿ, ಬೀದರ್, ಧಾರವಾಡ, ಗದಗ, ಹಾವೇರಿ, ಕಲಬುರಗಿ, ಕೊಪ್ಪಳ, ರಾಯಚೂರು, ವಿಜಯಪುರ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕೆಲವೆಡೆ ಗುಡುಗು ಸಹಿತ ಮಳೆಯಾಗುವ ಮುನ್ಸೂಚನೆ ಇದೆ. ಈ ಜಿಲ್ಲೆಗಳಲ್ಲಿ ಗಂಟೆಗೆ 30ರಿಂದ 40 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯೂ ಇದೆ.

ದಕ್ಷಿಣ ಒಳನಾಡಿನ ಮೈಸೂರು, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳಲ್ಲಿ ಒಂದೆರಡು ಕಡೆ ಭಾರಿ ಮಳೆಯಾಗುವ ಸಾಧ್ಯತೆ ಇದ್ದು, ಗುಡುಗು ಸಹಿತ ಮಳೆಯೊಂದಿಗೆ ಗಂಟೆಗೆ 30ರಿಂದ 40 ಕಿ.ಮೀ. ವೇಗದ ಗಾಳಿ ಬೀಸುವ ಸಾಧ್ಯತೆ ಇದೆ.

ಇದಲ್ಲದೆ ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೋಲಾರ, ಮಂಡ್ಯ, ರಾಮನಗರ, ಶಿವಮೊಗ್ಗ, ತುಮಕೂರು ಮತ್ತು ವಿಜಯನಗರ

ಜಿಲ್ಲೆಗಳಲ್ಲಿ ಹಲವೆಡೆ ಸಾಧಾರಣ ಹಾಗೂ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ.

# ಕೆಪಿಎಸ್‌ಸಿ ಕೇಸ್ :ಮತ್ತೆ 8 ದಿನ ಇಡಿ ಕಸ್ಟಡಿಗೆ ಜ್ಞಾನೇಂದ್ರ

ಬೆಂಗಳೂರು,ಸೆ.27 –ಕೆಪಿಎಸ್‌ಸಿ ನೇಮಕಾತಿ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ಐಎಎಸ್ ಅಧಿಕಾರಿ ಜ್ಞಾನೇಂದ್ರನನ್ನು ಜಾರಿ ನಿರ್ದೇಶನಾಲಯ ಮತ್ತೆ 8 ದಿನಗಳ ಕಾಲ ಕಸ್ಟಡಿಗೆ ಪಡೆದಿದೆ.

ಇಡಿ ದಾಳಿ ನಡೆಯುವ ಭೀತಿಯಲ್ಲಿ ಐಎಎಸ್ ಅಧಿಕಾರಿ ಜ್ಞಾನೇಂದ್ರ ಟ್ಯಾಬ್ ವೊಂದನ್ನು ಒಡೆದು ಹಾಕಿದ್ದರು ಎಂಬ ಆರೋಪ ಕೇಳಿಬಂದಿದೆ.ಆ ಟ್ಯಾಬ್‌ನಲ್ಲಿ ನೇಮಕಾತಿಗೆ ಸಂಬಂಧಿಸಿದ ಹಲವು ಮಹತ್ವದ ಮಾಹಿತಿಗಳು ಇದ್ದವು ಎಂದು ತನಿಖಾಧಿಕಾರಿಗಳು ಶಂಕಿಸಿದ್ದಾರೆ. ಹೀಗಾಗಿ ಇದೇ ಕಾರಣಕ್ಕೆ ಐಎಎಸ್ ಅಧಿಕಾರಿ ಜ್ಞಾನೇಂದ್ರನನ್ನು ಇಡಿ ತನ್ನ ಕಸ್ಟಡಿಗೆ ತೆಗೆದುಕೊಂಡಿದೆ.

ಅಭ್ಯರ್ಥಿಗಳಿಗೆ ಪ್ರಶ್ನೆ ಪತ್ರಿಕೆ ಕಳುಹಿಸಲು ಇದೇ ಟ್ಯಾಬ್ ಬಳಸಲಾಗಿತ್ತು ಎಂಬ ಆರೋಪವೂ ಇದೆ.ಅಲ್ಲದೆ,ಯಾವ ಅಭ್ಯರ್ಥಿಗಳಿಂದ ಎಷ್ಟು ಹಣ ಬರಬೇಕಿದೆ ಎಂಬುದರ ಪಟ್ಟಿಯೂ ಟ್ಯಾಬ್‌ನಲ್ಲಿ ದಾಖಲಾಗಿತ್ತು ಎಂಬ ಮಾಹಿತಿ ತನಿಖೆಯಲ್ಲಿ ಹೊರಬಂದಿದೆ.

ಈ ಮಾಹಿತಿಗಳು ಇಡಿಗೆ ಸಿಗಬಹುದು ಎಂಬ ಆತಂಕದಿಂದಲೇ ಟ್ಯಾಬ್ ಒಡೆದು ಹಾಕಲಾಗಿದೆ ಎಂಬುದು ತನಿಖೆಯಲ್ಲಿನ ಪ್ರಮುಖ ಆರೋಪವಾಗಿದೆ.

# ಮಹಿಳೆ ಕರೆಸಿ ಸುಲಿಗೆ ಮೂವರು ಬಂಧನ

ಬೆಂಗಳೂರು,ಸೆ27–ಬಾಡಿಗೆ ಮನೆಯಲ್ಲಿ ಹಾಲು ಉಕ್ಕಿಸುವ ಕಾರ್ಯಕ್ರಮದ ನೆಪದಲ್ಲಿ ಮಹಿಳೆಯೊಬ್ಬರನ್ನು ನಂಬಿಸಿ ಕರೆಸಿಕೊಂಡು, ಕೈಕಾಲು ಕಟ್ಟಿ ಹಲ್ಲೆ ನಡೆಸಿ ಲಕ್ಷಾಂತರ ರೂ ಮೌಲ್ಯದ ನಗದು ಚಿನ್ನಾಭರಣ ದೋಚಿದ್ದ ಮೂವರು ಆರೋಪಿಗಳನ್ನು ಪೀಣ್ಯಾ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬೋರೆಗೌಡ, ಅಭಿ ಹಾಗೂ ಸತೀಶ್ ಬಂಧಿತ ಆರೋಪಿಗಳಾಗಿದ್ದಾರೆ, ನಾಗಮಂಗಲ ಮೂಲದ ವರದರಾಜು ಅವರ ಪತ್ನಿ ಸುಜಾತ ಅವರಿಗೆ ಕೆಲ ತಿಂಗಳ ಹಿಂದೆ ಬೋರೆಗೌಡ ಎಂಬಾತನ ಪರಿಚಯವಾಗಿತ್ತು. ಈ ಪರಿಚಯದ ಸಲುಗೆಯನ್ನು ಬಳಸಿಕೊಂಡ ಬೋರೆಗೌಡ, ನಾಗಸಂದ್ರದಲ್ಲಿ ತಾನು ಬಾಡಿಗೆ ಮನೆ ಮಾಡಿರುವುದಾಗಿ ಸುಜಾತ ಅವರನ್ನು ನಂಬಿಸಿದ್ದಾನೆ. ಬಳಿಕ ಮನೆ ಹಾಲು ಉಕ್ಕಿಸುವ ಕಾರ್ಯಕ್ರಮಕ್ಕೆ ಬರುವಂತೆ ಆಹ್ವಾನ ನೀಡಿದ್ದಾನೆ.

ಆತನ ಮಾತನ್ನು ನಂಬಿದ ಸುಜಾತ, ಪತಿಗೆ ವಿಷಯ ತಿಳಿಸದೇ 1 ಲಕ್ಷ ರೂ. ನಗದು ಹಾಗೂ ಬಂಗಾರದ ಮಾಂಗಲ್ಯ ಸರ ಧರಿಸಿಕೊಂಡು ನಾಗಸಂದ್ರದ ಬಾಡಿಗೆ ಮನೆಗೆ ತೆರಳಿದ್ದರು.

ಸುಜಾತ ಮನೆಗೆ ಬಂದ ಬಳಿಕ ಒಲೆ ಮೇಲೆ ಹಾಲು ಇಟ್ಟು ಹಾಲು ಉಕ್ಕಿಸುವ ಕಾರ್ಯಕ್ರಮ ನಡೆಸಲಾಗಿದೆ. ಆದರೆ, ಕೆಲವೇ ಕ್ಷಣಗಳಲ್ಲಿ ಬೋರೆಗೌಡ ಹಾಗೂ ಆತನ ಸಹಚರರಾದ ಅಭಿ ಮತ್ತು ಸತೀಶ್ ಸೇರಿಕೊಂಡು ಸುಜಾತ ಅವರ ಕೈಕಾಲು ಕಟ್ಟಿ ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ. ಬಳಿಕ ಆಕೆಯ ಬಳಿಯಿದ್ದ 1 ಲಕ್ಷ ರೂ. ನಗದು ಹಾಗೂ ಕೊರಳಲ್ಲಿದ್ದ ಚಿನ್ನದ ಮಾಂಗಲ್ಯ ಸರವನ್ನು ಕಸಿದುಕೊಂಡು ಸ್ಥಳದಿಂದ ಪರಾರಿಯಾಗಿದ್ದಾರೆ.

ಘಟನೆ ಕುರಿತು ಮಾಹಿತಿ ತಿಳಿದ ಬಳಿಕ ಸುಜಾತ ಅವರ ಪತಿ ವರದರಾಜು ಪೀಣ್ಯಾ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ದೂರು ದಾಖಲಿಸಿಕೊಂಡ ಪೊಲೀಸರು ತನಿಖೆ ಕೈಗೊಂಡು ಆರೋಪಿಗಳ ಪತ್ತೆಗೆ ಕಾರ್ಯಾಚರಣೆ ನಡೆಸಿದರು.

ತನಿಖೆ ನಡೆಸಿದ ಪೊಲೀಸರು ಪ್ರಮುಖ ಆರೋಪಿ ಬೋರೆಗೌಡ ಸೇರಿದಂತೆ ಅಭಿ ಹಾಗೂ ಸತೀಶ್ ಅವರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬಳಿಕ ಮೂವರನ್ನೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

# ಯುವಕನ ಕೊಲೆ ಆರೋಪಿ ಪೊಲೀಸರಿಗೆ ಶರಣಾಗತಿ

ಮೈಸೂರು,ಸೆ.27–ಮಾರಕಾಸ್ತ್ರಗಳಿಂದ ಕೊಚ್ಚಿ ಯುವಕನೊಬ್ಬನನ್ನು ಭೀಕರವಾಗಿ ಕೊಲೆ ಮಾಡಿರುವ ಘಟನೆ ತಿ.ನರಸೀಪುರ ಪಟ್ಟಣದ ಹಾಲುಗೂಡು ಗ್ರಾಮದಲ್ಲಿ ನಡೆದಿದೆ.

ಕೊಲೆಯಾದ ಯುವಕನನ್ನು ಅದೇ ಗ್ರಾಮದ ಸುಭಾಷ್ ಎಂದು ಗುರುತಿಸಲಾಗಿದ್ದು, ಕೊಲೆ ಮಾಡಿದ ನಂತರ ಆರೋಪಿ ತಾನೇ ಹೋಗಿ ಪೊಲೀಸರಿಗೆ ಶರಣಾಗಿದ್ದಾನೆ.

ಘಟನೆಗೆ ಸಂಬಂಧಿಸಿದಂತೆ ತಿ.ನರಸೀಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಆರೋಪಿಯನ್ನು ವಿಚಾರಣೆ ನಡೆಸುತ್ತಿದ್ದಾರೆ.

ಘಟನೆ ಬಳಿಕ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಬಳಿಕ ಮಾತನಾಡಿದ ಅವರು, ಬೆಳಗ್ಗೆ 9 ಗಂಟೆ ಸಮಯದಲ್ಲಿ ತಿ. ನರಸೀಪುರದ ಹಾಲುಗೂಡಿನ ಸುಭಾಷ್ ಎನ್ನುವ ವ್ಯಕ್ತಿಯ ಕೊಲೆಯಾಗಿರುವ ಕುರಿತು ಮಾಹಿತಿ ಬರುತ್ತದೆ. ಮಾಹಿತಿಯನ್ನು ಆಧರಿಸಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ ಸುಭಾಷ್?ನನ್ನು ಚಾಕು, ಡ್ಯಾಗರ್ ಹಾಗೂ ಮುಂತಾದ ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿರುವುದು ಕಂಡು ಬಂದಿದೆ.

ಕೊಲೆ ಮಾಡಿದ ನಂತರ ಆರೋಪಿ ತಾನೇ ಠಾಣೆಗೆ ಬಂದು ಶರಣಾಗಿದ್ದಾನೆ. ಮೃತನ ತಾಯಿ ಹಾಗೂ ಸಂಬಂಧಿಕರ ಹೇಳಿಕೆ ಪ್ರಕಾರ ಆಸ್ತಿ ವಿಚಾರವಾಗಿ ಸುಭಾಷ್ ಹಾಗೂ ಆತನ ತಂದೆಯ ನಡುವೆ ಈ ಹಿಂದೆ ಜಗಳವಾಗಿತ್ತು. ಘಟನೆಗೆ ಸಂಬಂಧಿಸಿದಂತೆ ಆ ಸಂದರ್ಭದಲ್ಲಿ ಮೃತ ಸುಭಾಷ್? ವಿರುದ್ಧ 307 ಕೇಸ್ ಮೇಲೆ ಬಂಧಿಸಿ ಚಾರ್ಜ್?ಶೀಟ್ ಸಹ ಸಲ್ಲಿಸಲಾಗಿತ್ತು. ವಿಚಾರಣೆ ನ್ಯಾಯಾಲಯದಲ್ಲಿರುವಾಗಲೇ ಆರೋಪಿತರು ತಂದೆ ಮತ್ತು ಮಗನನ್ನು ರಾಜಿ ಮಾಡಿಸುತ್ತೇವೆ ಎಂದು ಅವರಿಂದಲೇ ಹಣವನ್ನು ಪಡೆದಿದ್ದರು ಎನ್ನುವ ಮಾಹಿತಿ ಲಭ್ಯವಾಗಿದೆ.

ಮೇಲ್ನೋಟಕ್ಕೆ ಈ ವಿಚಾರವಾಗಿಯೇ ಕೊಲೆ ನಡೆದಿರುವ ಸಾಧ್ಯತೆಯಿದ್ದು ಆರೋಪಿಯ ವಿಚಾರಣೆಯ ಬಳಿಕ ಪೂರ್ಣ ಮಾಹಿತಿ ಲಭ್ಯವಾಗಲಿದೆ ಎಂದು ತಿಳಿಸಿದರು.

ನನ್ನ ತಮ್ಮನನ್ನು ಬರ್ಬರವಾಗಿ ಹತ್ಯೆ ಮಾಡಿದ್ದಾರೆ. ಪೂರ್ವ ನಿಯೋಜಿತವಾಗಿಯೇ ಆತನನ್ನು ಕರೆಸಿಕೊಂಡು ಕೊಲೆ ಮಾಡಿದ್ದಾರೆ. ಮೂವರು ಸೇರಿಕೊಂಡು ಆತನನ್ನು ಕೊಲೆ ಮಾಡಿದ್ದಾರೆ ಎನ್ನುವ ಮಾಹಿತಿ ಕೊಟ್ಟರು. ತಪ್ಪಿತಸ್ಥರಿಗೆ ಕಾನೂನು ಪ್ರಕಾರ ಕಠಿಣ ಶಿಕ್ಷೆ ನೀಡಿ ನಮಗೆ ನ್ಯಾಯ ದೊರಕಿಸಿಕೊಡುವಂತೆ ಮೃತ ಸುಭಾಷ್ ಅಣ್ಣ ಕೃಷ್ಣ ಆಗ್ರಹಿಸಿದರು.

# ಮಹಾ ಮಳೆಗೆ ಉತ್ತರ ಪ್ರದೇಶ ತತ್ತರ:15 ಮಂದಿ ಸಾವು

ಲಖನೌ, ಸೆ.27: ಉತ್ತರ ಪ್ರದೇಶದಲ್ಲಿ ಕಳೆದ 48 ಗಂಟೆಗಳಲ್ಲಿ ಸುರಿದ ಭಾರಿ ಮಳೆಯಿಂದಾಗಿ ವಿವಿಧೆಡೆ ಸಂಭವಿಸಿದ ಮಳೆ ಸಂಬಂಧಿತ ಘಟನೆಗಳಲ್ಲಿ 15 ಮಂದಿ ಮೃತಪಟ್ಟಿದ್ದಾರೆ. ಭಾರಿ ಮಳೆಯಿಂದಾಗಿ ರಾಜ್ಯದ ವಿವಿಧ ಭಾಗಗಳಲ್ಲಿ 100ಕ್ಕೂ ಹೆಚ್ಚು ಮನೆಗಳು ಹಾನಿಗೊಳಗಾಗಿವೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ರಾಜ್ಯದ 63 ಜಿಲ್ಲೆಗಳಲ್ಲಿ ಸಾಮಾನ್ಯಕ್ಕಿಂತ ಅಧಿಕ ಮಳೆ ದಾಖಲಾಗಿದ್ದು, ಹಲವು ಪ್ರದೇಶಗಳಲ್ಲಿ ಹಠಾತ್ ಪ್ರವಾಹದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಕಳೆದ 24 ಗಂಟೆಗಳಲ್ಲಿ ಉತ್ತರ ಪ್ರದೇಶದಲ್ಲಿ ಸಾಮಾನ್ಯಕ್ಕಿಂತ 19 ಪಟ್ಟು ಹೆಚ್ಚು ಮಳೆ ದಾಖಲಾಗಿದೆ. ಇದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಬೆಳೆಗಳಿಗೆ ವ್ಯಾಪಕ ಹಾನಿಯಾಗಿದ್ದು, ನಾಲ್ಕು ಜಾನುವಾರುಗಳು ಮೃತಪಟ್ಟಿವೆ.

ರಾಜ್ಯ ರಾಜಧಾನಿ ಲಖನೌದಲ್ಲಿ ಶನಿವಾರ ಬೆಳಗ್ಗೆಯವರೆಗೆ 125.8 ಮಿ.ಮೀ. ಮಳೆ ದಾಖಲಾಗಿದೆ. ಫರುಖಾಬಾದ್‌ನಲ್ಲಿ ಸಾಮಾನ್ಯಕ್ಕಿಂತ 200 ಪಟ್ಟು ಹಾಗೂ ಕಾನ್ಪುರ ನಗರದಲ್ಲಿ 160 ಪಟ್ಟು ಹೆಚ್ಚು ಮಳೆ ದಾಖಲಾಗಿದ್ದು, ಪರಿಸ್ಥಿತಿ ಗಂಭೀರವಾಗಿದೆ. ಇದೇ ವೇಳೆ ಕನ್ನೌಜ್, ಕಾನ್ಪುರ ದೇಹಾತ್ ಮತ್ತು ಹರ್ದೋಯಿ ಜಿಲ್ಲೆಗಳಲ್ಲಿ ಸಾಮಾನ್ಯಕ್ಕಿಂತ 130 ಪಟ್ಟು ಹೆಚ್ಚು ಮಳೆ ದಾಖಲಾಗಿದೆ.

ಇಂದೂ ಭಾರಿ ಮಳೆಯ ಮುನ್ಸೂಚನೆ

ಭಾರತೀಯ ಹವಾಮಾನ ಇಲಾಖೆ ಪ್ರಕಾರ, ಉತ್ತರ ಪ್ರದೇಶದ ಹಲವು ಭಾಗಗಳಲ್ಲಿ ಭಾನುವಾರವೂ ಮಳೆ ಮತ್ತು ಗುಡುಗು ಸಹಿತ ಮಳೆ ಮುಂದುವರಿಯುವ ಸಾಧ್ಯತೆ ಇದೆ. ಈ ಭಾರಿ ಮಳೆಗೆ ಈಶಾನ್ಯ ಮಧ್ಯಪ್ರದೇಶ ಮತ್ತು ಅದಕ್ಕೆ ಹೊಂದಿಕೊಂಡಿರುವ ಉತ್ತರ ಛತ್ತೀಸ್‌ಗಢದ ಮೇಲೆ ಉಂಟಾಗಿರುವ ಖಿನ್ನತೆ ಕಾರಣವಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಈ ಖಿನ್ನತೆ ಉತ್ತರ–ವಾಯವ್ಯ ದಿಕ್ಕಿನಲ್ಲಿ ಚಲಿಸುತ್ತಿದ್ದು, ಶನಿವಾರ ಬೆಳಗ್ಗೆ ಪ್ರಯಾಗ್‌ರಾಜ್‌ನಿಂದ ಸುಮಾರು 230 ಕಿಲೋಮೀಟರ್ ದಕ್ಷಿಣದಲ್ಲಿ ಕೇಂದ್ರಿತವಾಗಿತ್ತು. ಮುಂದಿನ 12 ಗಂಟೆಗಳಲ್ಲಿ ಇದು ಕ್ರಮೇಣ ದುರ್ಬಲಗೊಂಡು ಸ್ಪಷ್ಟವಾಗಿ ಗುರುತಿಸಬಹುದಾದ ಕಡಿಮೆ ಒತ್ತಡದ ಪ್ರದೇಶವಾಗಿ ಪರಿವರ್ತನೆಯಾಗುವ ಸಾಧ್ಯತೆ ಇದೆ.

ಆದಾಗ್ಯೂ, ರಾಜ್ಯದ ಹಲವು ಭಾಗಗಳಲ್ಲಿ ಭಾರಿ ಮಳೆಯಿಂದ ಅತಿ ಭಾರಿ ಮಳೆಯವರೆಗೆ ಸುರಿಯುವ ಸಾಧ್ಯತೆ ಇದೆ. ಕೇಂದ್ರ ತರಾಯಿ ಪ್ರದೇಶದಲ್ಲಿ ಕೆಲವೆಡೆ ಅತ್ಯಂತ ಭಾರಿ ಮಳೆಯಾಗುವ ಸಾಧ್ಯತೆಯೂ ಇದೆ ಎಂದು ಇಲಾಖೆ ಎಚ್ಚರಿಕೆ ನೀಡಿದೆ.

ಪರಿಸ್ಥಿತಿಯ ಮೇಲ್ವಿಚಾರಣೆಯಲ್ಲಿ ಸಿಎಂ ಯೋಗಿ

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ರಾಜ್ಯದಲ್ಲಿನ ಮಳೆ ಪರಿಸ್ಥಿತಿಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತಿದ್ದಾರೆ. ಭಾರಿ ಮಳೆಯಿಂದ ಬಾಧಿತರಾದ ಜನರಿಗೆ ತಕ್ಷಣದ ಪರಿಹಾರ ಒದಗಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ ಎಂದು ಮುಖ್ಯಮಂತ್ರಿ ಕಚೇರಿ ಹೇಳಿಕೆಯಲ್ಲಿ ತಿಳಿಸಿದೆ.

ಸಂಜೆವಾಣಿ
ಭಾನುವಾರ, ಸೆಪ್ಟೆಂಬರ್ 27, 2026

# ತಾರಾ ಪಥದಿಂದ ವಾರ ಭವಿಷ್ಯ

ತಾ. 27.09.2026 ರಿಂದ 03.10.2026 ವರೆಗೆ

### ಮೇಷ ರಾಶಿ

ನೀವು ಮಾಡುವ ಕೆಲಸಕ್ಕೆ ಮೆಚ್ಚುಗೆ ಸಿಗಬಹುದು. ಹೊಸ ವ್ಯವಹಾರವನ್ನು ಪ್ರಾರಂಭಿಸುವ ಆಲೋಚನೆ ಮುಂದುವರಿಯುತ್ತದೆ. ಕುಟುಂಬ ಮತ್ತು ಸಹೋದ್ಯೋಗಿಗಳಿಂದ ನಿಮಗೆ ಬೆಂಬಲ ಸಿಗುತ್ತದೆ. ಉತ್ಸಾಹದಲ್ಲಿ ಯಾರಿಗೂ ಅತಿಯಾದ ಭರವಸೆ ನೀಡಬೇಡಿ. ವಿದ್ಯಾರ್ಥಿಗಳಿಗೆ ಈ ವಾರ ಪ್ರಯೋಜನಕಾರಿಯಾಗಿರಲಿದೆ. ಹವಾಮಾನ ಬದಲಾದಂತೆ ನಿಮ್ಮ ಆರೋಗ್ಯದ ಬಗ್ಗೆ ಎಚ್ಚರ ವಹಿಸಿಕೊಳ್ಳಿ.

### ವೃಷಭ ರಾಶಿ

ನೀವು ಬಹಳ ದಿನಗಳಿಂದ ದೂರವಾಗಿದ್ದ ಸ್ನೇಹಿತ ಮತ್ತೆ ನಿಮ್ಮ ಬಳಿ ಬರಬಹುದು. ಕೆಲಸದಲ್ಲಿ ನಿಮ್ಮ ವೃತ್ತಿಪರ ಇಮೇಜ್ ಅನ್ನು ನೋಡಿಕೊಳ್ಳಿ. ಹೆಚ್ಚಿನ ಲಾಭ ಪಡೆಯುವ ಆಸೆಯಲ್ಲಿ ಗೊತ್ತಿಲ್ಲದವರ ಜೊತೆ ವ್ಯವಹಾರಕ್ಕೆ ಕೈ ಹಾಕಬೇಡಿ. ಹಣ ಹೂಡಿಕೆ ಮಾಡುವ ಮೊದಲು ಸರಿಯಾಗಿ ವಿಚಾರಿಸಿಕೊಳ್ಳಿ. ಸಂಬಂಧಗಳ ಬಗ್ಗೆ ಎಚ್ಚರ ಇರಲಿ. ಸಂಗಾತಿಯೊಂದಿಗೆ ಮನಸ್ತಾಪ ಮೂಡದಂತೆ ನೋಡಿಕೊಳ್ಳಿ.

### ಮಿಥುನ ರಾಶಿ

ವಿದ್ಯಾರ್ಥಿಗಳು ಈ ವಾರ ಸ್ವಲ್ಪ ಪರಿಶ್ರಮಪಟ್ಟರೆ ಯಶಸ್ಸು ಸಾಧಿಸುವುದು ಸುಲಭವಾಗಬಹುದು. ವೈಯಕ್ತಿಕ ವಿಷಯಗಳನ್ನು ಕೆಲಸದಿಂದ ಪ್ರತ್ಯೇಕವಾಗಿ ಇರಿಸಿ. ಹಣಕಾಸಿನ ವಿಷಯದಲ್ಲಿ ಆತುರದ ನಿರ್ಧಾರ ತೆಗೆದುಕೊಳ್ಳಬೇಡಿ. ಹಣದ ಬಗ್ಗೆ ಖರ್ಚಿನ ಬಗ್ಗೆ ಎಚ್ಚರ ಇರಲಿ. ಹಳೆಯ ಸ್ನೇಹಿತರನ್ನು ಭೇಟಿಯಾಗುವ ಅವಕಾಶ ಸಿಗುವುದು.

### ಕರ್ಕಾಟಕ ರಾಶಿ

ಮೇಲಧಿಕಾರಿಗಳು ಮತ್ತು ಸಹೋದ್ಯೋಗಿಗಳೊಂದಿಗೆ ತಪ್ಪು ತಿಳುವಳಿಕೆಯನ್ನು ಪರಿಹರಿಸಿಕೊಳ್ಳಲು ಅವಕಾಶ ಸಿಗಬಹುದು. ಕುಟುಂಬದಲ್ಲಿ, ನಿಮ್ಮ ತಂದೆ ಅಥವಾ ಅಣ್ಣನ ಸಲಹೆಯಂತೆ ನಡೆದರೆ ಪ್ರಯೋಜನವಾಗುವುದು. ಪ್ರಯಾಣ ಮತ್ತು ಕೆಲಸದ ಜಂಜಾಟದ ನಡುವೆ ವಿಶ್ರಾಂತಿ ಪಡೆಯಲು ಮರೆಯಬೇಡಿ. ನಿಮಗೆ ದೈಹಿಕ ಮಾತ್ರವಲ್ಲ ಮಾನಸಿಕವಾಗಿಯೂ ವಿಶ್ರಾಂತಿಯ ಅಗತ್ಯವಿದೆ. ಯಾರನ್ನೋ ಮೆಚ್ಚಿಸಲು ಆದಾಯಕ್ಕೆ ಮೀರಿ ಖರ್ಚು ಮಾಡಲು ಹೋಗಬೇಡಿ.

### ಸಿಂಹ ರಾಶಿ

ಕೆಲಸದಲ್ಲಿ ಹಳೆಯ ಭಿನ್ನಾಭಿಪ್ರಾಯಗಳನ್ನು ಪರಿಹರಿಸಲು ಪ್ರಯತ್ನಿಸುವುದು ಒಳ್ಳೆಯದು. ನೀವು ಮಾಡುವ ಕೆಲಸಕ್ಕೆ ಕುಟುಂಬದವರ ಬೆಂಬಲ ಸಿಗುವುದು. ಈ ವಾರ ನಿಮ್ಮ ಖರ್ಚಿನ ಬಗ್ಗೆ ವಿಶೇಷವಾಗಿ ಜಾಗರೂಕರಾಗಿರಿ. ಸಂಬಂಧಗಳಲ್ಲಿ ಉದಾರತೆ ಒಳ್ಳೆಯದು, ಆದರೆ ಪ್ರತಿ ಬಾರಿಯೂ ಹಣವನ್ನು ಖರ್ಚು ಮಾಡುವ ಅಗತ್ಯವಿಲ್ಲ. ಅತಿಯಾದ ಪ್ರಯಾಣವು ಆಯಾಸಕ್ಕೆ ಕಾರಣವಾಗಬಹುದು.

### ಕನ್ಯಾ ರಾಶಿ

ಭೂಮಿ ಖರೀದಿಸುವ ಸಾಧ್ಯತೆ ಇದೆ. ಪೂರ್ವಜರ ಆಸ್ತಿಯಿಂದಲೂ ಲಾಭವಾಗುವುದು. ವ್ಯವಹಾರದಲ್ಲಿ ಈ ವಾರ ಎಚ್ಚರಿಕೆ ಬಹಳ ಮುಖ್ಯವಾಗಿರುವುದು. ಬೇರೆಯವರ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಳ್ಳುವ ಬದಲು ನಿಮ್ಮ ಮನಸ್ಸಿನ ಮಾತನ್ನು ಕೇಳಿ. ಈ ವಾರ ನಿಮ್ಮ ವೃತ್ತಿ ಮತ್ತು ಕೌಟುಂಬಿಕ ಜೀವನ ಎರಡಕ್ಕೂ ಪ್ರಯೋಜನಕಾರಿಯಾಗಿದೆ.

### ತುಲಾ ರಾಶಿ

ಬಡ್ತಿಗೆ ಅವಕಾಶ ಇರುವುದು. ಕಚೇರಿ ರಾಜಕೀಯದ ಬಗ್ಗೆ ಎಚ್ಚರದಿಂದಿರಿ. ಹೊಸ ಜವಾಬ್ದಾರಿಗಳು ಸಿಗುವುದು. ಹೊಸ ಒಪ್ಪಂದಗಳ ಕುರಿತು ಚರ್ಚೆಗಳು ನಡೆಯುವುದು. ನೀವು ತೆಗೆದುಕೊಳ್ಳುವ ನಿರ್ಧಾರ ಪ್ರಗತಿಗೆ ದಾರಿ ಮಾಡಿಕೊಡುವುದು. ಹಳೆಯ ಸಮಸ್ಯೆಗಳು ಕಡಿಮೆಯಾಗುವುದು. ಕಣ್ಣಿನ ಸಮಸ್ಯೆ ಕಾಡಬಹುದು.

### ವೃಶ್ಚಿಕ ರಾಶಿ

ವ್ಯವಹಾರದಲ್ಲಿ ಹೊಸ ಗ್ರಾಹಕರು ಸಿಗುವರು. ಕೆಲಸದಲ್ಲಿ ಸಹೋದ್ಯೋಗಿಗಳಿಂದ ಬೆಂಬಲ ಸಿಗುವುದು. ವಾರದ ನಡುವಿನಲ್ಲಿ ಆರ್ಥಿಕ ಲಾಭವಾಗುವುದು.ಆದರೂ ಖರೀದಿಗಾಗಿ ಹಣ ಖರ್ಚು ಮಾಡುವ ಮುನ್ನ ಸರಿಯಾಗಿ ಯೋಚಿಸಿ. ಬೇರೆಯವರ ಕೆಲಸದಲ್ಲಿ ಮೂಗು ತೂರಿಸುವ ಬದಲು ನಿಮ್ಮ ಕೆಲಸದ ಬಗ್ಗೆ ಗಮನ ಹರಿಸಿ. ಮಂಡಿ ನೋವಿನ ಸಮಸ್ಯೆ ಕಾಡಬಹುದು.

### ಧನು ರಾಶಿ

ಕೆಲಸ ವೇಗವಾಗಿ ಮುಂದುವರೆಯುವುದು. ಶಾಪಿಂಗ್‌ಗಾಗಿ ಹಣ ಖರ್ಚು ಮಾಡುವಿರಿ. ಮನೆಗಾಗಿ ಅಲಂಕಾರಿಕ ವಸ್ತುಗಳನ್ನು ಖರೀದಿಸುವಿರಿ. ಇತರರಿಗಿಂತ ಮೊದಲು ಕೆಲಸಗಳನ್ನು ಪೂರ್ಣಗೊಳಿಸಲು ಶ್ರಮಿಸುವಿರಿ. ವಿಶ್ರಾಂತಿಯ ಕಡೆಗೆ ಗಮನ ಕೊಡಿ. ವಿದ್ಯಾರ್ಥಿಗಳು ತಮ್ಮ ಗುರಿ ಸಾಧಿಸುವರು.

### ಮಕರ ರಾಶಿ

ಕೆಲಸದಲ್ಲಿ ಹೊಸ ಅವಕಾಶಗಳು ಸಿಗಬಹುದು. ಆಸ್ತಿ ವಿಷಯದಲ್ಲಿ ಉಂಟಾಗಿರುವ ಸಮಸ್ಯೆಗಳು ಬಗೆಹರಿಯುವುದು. ಕುಟುಂಬದ ಹಿರಿಯರ ಆರೋಗ್ಯದ ಬಗ್ಗೆ ಗಮನಹರಿಸಿ. ಮಿತಿ ಮೀರಿ ಖರ್ಚು ಮಾಡಲು ಹೋಗಬೇಡಿ. ಆದಾಯ ಮತ್ತು ಖರ್ಚಿನ ನಡುವ ಸಮತೋಲನ ಇರಲಿ. ವಿದ್ಯಾರ್ಥಿಗಳು ಈ ವಾರ ಸ್ವಲ್ಪ ಎಚ್ಚರಿಕೆಯಿಂದ ಇರಬೇಕು.

### ಕುಂಭ ರಾಶಿ

ನಿಮ್ಮ ಕುಟುಂಬದೊಂದಿಗೆ ಉತ್ತಮ ಸಮಯವನ್ನು ಕಳೆಯುವಿರಿ. ಕುಟುಂಬದ ಸದಸ್ಯರ ಸಲಹೆ ಸಹಾಯಕ್ಕೆ ಬರುವುದು. ಹೆಚ್ಚುವರಿ ಆದಾಯ ಅಥವಾ ಹೂಡಿಕೆ ಪ್ರಸ್ತಾಪವು ಬಂದರೆ, ಎಲ್ಲಾ ನಿಯಮಗಳ ಬಗ್ಗೆ ಸರಿಯಾಗಿ ತಿಳಿದುಕೊಳ್ಳಿ. ಒಳಗೊಂಡಿರುವ ನಿಯಮಗಳು ಮತ್ತು ಅಪಾಯಗಳನ್ನು ಪರಿಗಣಿಸಿ. ಹೊಸ ಕೆಲಸ ಸಿಗುವುದು. ನಿಮಗೆ ಈ ವಾರ ಉತ್ತಮವಾಗಿರುವುದು.

### ಮೀನ ರಾಶಿ

ಹಣಕಾಸಿನ ವಿಷಯದಲ್ಲಿ ಸ್ವಲ್ಪ ಒತ್ತಡ ಉಂಟಾಗಬಹುದು. ದೊಡ್ಡ ಹೂಡಿಕೆಗಳ ಬಗ್ಗೆ ಆತುರದ ನಿರ್ಧಾರಗಳನ್ನು ತೆಗೆದುಕೊಳ್ಳಬೇಡಿ. ನಿಮ್ಮ ಸಂಗಾತಿಯೊಂದಿಗೆ ಹಣಕಾಸಿನ ಬಗ್ಗೆ ಶಾಂತವಾಗಿ ಚರ್ಚಿಸಿ. ಕೆಲಸದಲ್ಲಿ ನೀವು ನಿರೀಕ್ಷಿಸಿದ ರಿಸಲ್ಟ್ ಸಿಗದೇ ಹೋಗಬಹುದು. ಮಾತಿನಲ್ಲಿ ಪದ ಬಳಕೆಯ ಬಗ್ಗೆ ಎಚ್ಚರ ಇರಲಿ. ಸಣ್ಣ ವಿಷಯಗಳು ಸಹ ತಪ್ಪು ತಿಳುವಳಿಕೆಗೆ ಕಾರಣವಾಗಬಹುದು.

## ಅರಮನೆ ಅಂಗಳದಲ್ಲಿ 'ಒಂದೇ ಒಂದು' ಹಾಡು ಬಿಡುಗಡೆ ಅಕ್ಟೋಬರ್ 16ಕ್ಕೆ ತೆರೆಗೆ 'ಬೃಂದಾವಿಹಾರಿ'

ಬೆಂಗಳೂರಿನ ಅರಮನೆ ಆವರಣ ಇತ್ತೀಚೆಗೆ ಸಂಗೀತದ ಸಂಭ್ರಮಕ್ಕೆ ಸಾಕ್ಷಿಯಾಯಿತು.ಗೋಲ್ಡನ್ ಮೆಗಾಸ್ಟಾರ್ ಗಣೇಶ್ ಅಭಿನಯದ ಬಹುನಿರೀಕ್ಷಿತ 'ಬೃಂದಾವಿಹಾರಿ' ಚಿತ್ರದ ಐದನೇ ಹಾಡು 'ಒಂದೇ ಒಂದು' ಅದ್ದೂರಿಯಾಗಿ ಅನಾವರಣಗೊಂಡಿತು. ನಿರ್ಮಾಪಕ ಸಮೃದ್ಧಿ ಮಂಜುನಾಥ್ ಅವರ ಪತ್ನಿ ಪದ್ಮ ಮಂಜುನಾಥ್ ಹಾಡನ್ನು ಬಿಡುಗಡೆ ಮಾಡಿದರು.



ಸಮೃದ್ಧಿ ಮಂಜುನಾಥ್ ನಿರ್ಮಾಣದ ಹಾಗೂ ಶ್ರೀನಿವಾಸರಾಜು ನಿರ್ದೇಶನದ ಈ ಚಿತ್ರಕ್ಕೆ ಕವಿರತ್ನ ಡಾ. ವಿ. ನಾಗೇಂದ್ರಪ್ರಸಾದ್ ಸಾಹಿತ್ಯ, ಹೇಶಮ್ ಅಬ್ದುಲ್ ವಹಾಬ್ ಸಂಗೀತ ನೀಡಿದ್ದಾರೆ. ಕೆ.ಎಸ್. ಚಿತ್ರಾ ಹಾಗೂ ಜಸ್ಕರಣ್ ಸಿಂಗ್ ಧ್ವನಿಯಲ್ಲಿ ಮೂಡಿಬಂದಿರುವ 'ಒಂದೇ ಒಂದು' ಹಾಡಿಗೆ ಗಣೇಶ್ ಮತ್ತು ದೇವಿಕಾ ಭಟ್ ಹೆಜ್ಜೆ ಹಾಕಿದ್ದಾರೆ. ಆನಂದ್ ಆಡಿಯೋ ಮೂಲಕ ಚಿತ್ರದ ಹಾಡುಗಳು ಬಿಡುಗಡೆಯಾಗುತ್ತಿವೆ.

ಈಗಾಗಲೇ ಚಿತ್ರದ ನಾಲ್ಕು ಹಾಡುಗಳು ಪ್ರೇಕ್ಷಕರ ಗಮನ ಸೆಳೆದಿದ್ದು, ಐದನೇ ಹಾಡು 'ಒಂದೇ ಒಂದು' ಕೂಡ ಮೆಚ್ಚುಗೆ ಪಡೆ–ಯುತ್ತಿದೆ. ಚಿತ್ರದಲ್ಲಿ ಒಟ್ಟು ಏಳು ಹಾಡುಗಳಿದ್ದು, ವಿಶೇಷವೆಂದರೆ ಎಲ್ಲ ಹಾಡುಗಳಲ್ಲೂ ದ್ವಿರುಕ್ತಿ ಪದಗಳ ಬಳಕೆಯಾಗಿದೆ. 'ರಾಮ ರಾಮ', 'ರಾಧೆ ರಾಧೆ' ಬಳಿಕ ಇದೀಗ 'ಒಂದೇ ಒಂದು' ಸರದಿ.

ಗೀತರಚನೆಕಾರ ನಾಗೇಂದ್ರಪ್ರಸಾದ್ ಮಾತನಾಡಿ, 'ಒಂದೇ ಒಂದು' ಹಾಡನ್ನು ಬರೆಯಲು ಎರಡು ತಿಂಗಳು ಸಮಯ ತೆಗೆದುಕೊಂಡಿ–ದ್ದಾಗಿ ಹೇಳಿದರು. ಪ್ರೀತಿಸುವ ಗಂಡನಿಗೆ 'ನೀವು ನನ್ನನ್ನು ಎಷ್ಟು ಪ್ರೀತಿಸುತ್ತೀರಿ?' ಎಂದು ಕೇಳುವ ಹೆಣ್ಣಿನ ಭಾವನೆಗೆ ಉತ್ತರವಾಗಿ ಈ ಹಾಡು ರೂಪುಗೊಂಡಿದೆ ಎಂದರು. ಹಾಡನ್ನು ತೆರೆಯ ಮೇಲೆ ನೋಡಿದ ಬಳಿಕ ಮನಸ್ಸು ತುಂಬಿಬಂದಿದೆ ಎಂದು ತಿಳಿಸಿದರು.

ನಾಯಕ ಗಣೇಶ್, ಉತ್ತಮ ಸಾಹಿತ್ಯ, ಸಂಗೀತ ಹಾಗೂ ಗಾಯನದಿಂದ ಹಾಡು ಮತ್ತಷ್ಟು ಚೆಂದವಾಗಿ ಮೂಡಿಬಂದಿದೆ ಎಂದು ತಂಡಕ್ಕೆ ಧನ್ಯವಾದ ಅರ್ಪಿಸಿದರು. 'ಬೃಂದಾವಿಹಾರಿ' ಅಕ್ಟೋಬರ್ 16ರಂದು ಪ್ರೇಕ್ಷಕರ ಮುಂದೆ ಬರಲಿದ್ದು, ಕುಟುಂಬ ಸಮೇತ ಚಿತ್ರವನ್ನು ವೀಕ್ಷಿಸುವಂತೆ ಮನವಿ ಮಾಡಿದರು.

ನಿರ್ಮಾಪಕ ಸಮೃದ್ಧಿ ಮಂಜುನಾಥ್ ಅವರಿಗೆ ಇದು ವಿಶೇಷ ಸಂದರ್ಭ. ಅವರ ಸಮೃದ್ಧಿ ಸಂಸ್ಥೆ 15 ವರ್ಷ ಪೂರೈಸಿರುವ ಹೊತ್ತಿನಲ್ಲೇ ಚಿತ್ರದ ಹಾಡು ಸಾವಿರಾರು ಜನರ ಸಮ್ಮುಖದಲ್ಲಿ ಬಿಡುಗಡೆ–ಯಾಗಿದೆ. ಗಣೇಶ್ ಅವರೊಂದಿಗೆ ಕ್ರಿಕೆಟ್‌ನಿಂದ ಆರಂಭವಾದ ಸ್ನೇಹ, ಇದೀಗ ತಮ್ಮ ಸಂಸ್ಥೆಯ ಚಿತ್ರದಲ್ಲಿ ಅವರು ನಾಯಕರಾಗುವ ಹಂತಕ್ಕೆ ಬಂದಿರುವುದು ಸಂತಸ ತಂದಿದೆ ಎಂದರು. 'ಬೃಂದಾವಿಹಾರಿ' ಕೌಟುಂಬಿಕ ಮನರಂಜನೆಯ ಚಿತ್ರವಾಗಿದ್ದು, ದಸರಾ ಸಂದರ್ಭದಲ್ಲಿ ವಿಶ್ವದಾದ್ಯಂತ ಅದ್ದೂರಿಯಾಗಿ ಬಿಡುಗಡೆಯಾಗಲಿದೆ ಎಂದು ಹೇಳಿದರು.

ನಿರ್ದೇಶಕ ಶ್ರೀನಿವಾಸರಾಜು, ಈಗಾಗಲೇ ಬಿಡುಗಡೆಯಾಗಿರುವ ನಾಲ್ಕು ಹಾಡುಗಳಿಗೆ ಸಿಕ್ಕಿರುವ ಪ್ರತಿಕ್ರಿಯೆ ಬಗ್ಗೆ ಸಂತಸ ವ್ಯಕ್ತಪಡಿಸಿದರು. 'ಕೃಷ್ಣಂ ಪ್ರಣಯ ಸಖಿ' ಬಳಿಕ ಗಣೇಶ್ ಹಾಗೂ ಶ್ರೀನಿವಾಸರಾಜು ಜೋಡಿ ಮತ್ತೊಮ್ಮೆ ಒಂದಾಗಿರುವುದು ಚಿತ್ರದ ಮೇಲಿನ ನಿರೀಕ್ಷೆ ಹೆಚ್ಚಿಸಿದೆ.

ಚಿತ್ರದ ನಾಯಕಿ ದೇವಿಕಾ ಭಟ್, ಇದು ತಮ್ಮ ಮೊದಲ ಚಿತ್ರವಾಗಿದ್ದು, ಪ್ರೇಕ್ಷಕರ ಪ್ರೋತ್ಸಾಹ ಬಯಸಿದರು. ಹಾಡು ಬಿಡುಗಡೆಯ ಸಂದರ್ಭದಲ್ಲಿ ಜಸ್ಕರಣ್ ಸಿಂಗ್ 'ಒಂದೇ ಒಂದು' ಹಾಡಿನ ಕೆಲವು ಸಾಲುಗಳನ್ನು ಹಾಡಿ ನೆರೆದಿದ್ದವರನ್ನು ರಂಜಿಸಿದರು.

## ಡಿಸೆಂಬರ್ 4ಕ್ಕೆ 'ಮ್ಯಾರೇಜ್ ಪಾರ್ಟಿ' ಕರಾವಳಿಯ ಹಾಸ್ಯಕಥೆ ಕನ್ನಡ-ಮಲಯಾಳಂನಲ್ಲಿ ತೆರೆಗೆ

ಕರಾವಳಿಯ ಬದುಕು, ಅಲ್ಲಿನ ಭಾಷೆಯ ಸೊಗಡು ಮತ್ತು ಹಾಸ್ಯವನ್ನು ಬೆರೆಸಿ ಸಿದ್ಧವಾಗಿರುವ 'ಮ್ಯಾರೇಜ್ ಪಾರ್ಟಿ' ಇದೀಗ ಬಿಡುಗಡೆಗೆ ಸಜ್ಜಾಗಿದೆ. ಮೊದಲ ಲುಕ್‌ನಲ್ಲೇ ಕುತೂಹಲ ಮೂಡಿಸಿದ್ದ ಈ ಚಿತ್ರ ಡಿಸೆಂಬರ್ 4ರಂದು ಕನ್ನಡ ಹಾಗೂ ಮಲಯಾಳಂ ಭಾಷೆಗಳಲ್ಲಿ ಏಕಕಾಲಕ್ಕೆ ತೆರೆಕಾಣಲಿದೆ.



ಬಿಗ್‌ಬಾಸ್ ಖ್ಯಾತಿಯ ರೂಪೇಶ್ ಶೆಟ್ಟಿ ನಾಯಕನಾಗಿ ನಟಿಸಿದ್ದ 'ಅಧಿಪತ್ರ' ಚಿತ್ರವನ್ನು ನಿರ್ದೇಶಿಸುವ ಮೂಲಕ ಗಮನ ಸೆಳೆದಿದ್ದ ಚಯನ್ ಶೆಟ್ಟಿ, ಈ ಬಾರಿ ಸಂಪೂರ್ಣ ಮನೋರಂಜನೆಯ ಕಥೆಯೊಂದಿಗೆ ಮರಳಿದ್ದಾರೆ. ಶ್ರೀ ವಾರಾಹಿ ಫಿಲಂಸ್ ಬ್ಯಾನರ್ ಅಡಿಯಲ್ಲಿ ಸಂತೋಷ್ ವಿ. ನಿರ್ಮಿಸಿರುವ 'ಮ್ಯಾರೇಜ್ ಪಾರ್ಟಿ' ಕರಾವಳಿ ತೀರದಲ್ಲಿ ನಡೆಯುವ ಹಾಸ್ಯಪ್ರಧಾನ ಕಥೆಯನ್ನು ಹೊಂದಿದೆ.

ಮೊದಲ ಚಿತ್ರದಲ್ಲಿ ಗಂಭೀರ ಕಥಾಹಂದರದ ಮೂಲಕ ಗಮನ ಸೆಳೆದಿದ್ದ ಚಯನ್ ಶೆಟ್ಟಿ, ಈ ಬಾರಿ ಕುಟುಂಬ ಸಮೇತ ಕುಳಿತು ನೋಡಬಹುದಾದ ಮನೋರಂಜನಾತ್ಮಕ ಚಿತ್ರ ಕಟ್ಟಿಕೊಟ್ಟಿದ್ದಾರೆ. ಕರಾವಳಿಯ ವಿವಿಧ ತಾಣಗಳಲ್ಲಿ ಚಿತ್ರೀಕರಣ ಪೂರ್ಣಗೊಳಿಸಿರುವ ಚಿತ್ರತಂಡ ಸದ್ಯ ಪೋಸ್ಟ್ ಪ್ರೊಡಕ್ಷನ್ ಕೆಲಸಗಳಲ್ಲಿ ತೊಡಗಿಸಿಕೊಂಡಿದೆ.

ಚಿತ್ರದ ಮೊದಲ ಹಾಡನ್ನು ದಸರಾ ಹಬ್ಬದ ಸಂದರ್ಭದಲ್ಲಿ ಬಿಡುಗಡೆ ಮಾಡಲು ಸಿದ್ಧತೆ ನಡೆಯುತ್ತಿದೆ. ಗಟ್ಟಿ ಕಥೆಯ ಜತೆಗೆ ಭರಪೂರ ಮನೋರಂಜನೆ ನೀಡುವ ಪಕ್ಕಾ ಫ್ಯಾಮಿಲಿ ಪ್ಯಾಕೇಜ್ ಇದಾಗಲಿದೆ ಎಂಬುದು ನಿರ್ದೇಶಕರ ಮಾತು.

ಚಿತ್ರಕ್ಕೆ ಶ್ರೀಕಾಂತ್ ಛಾಯಾಗ್ರಹಣ, ರಿತ್ವಿಕ್ ಮುರಳೀಧರ್ ಸಂಗೀತ ಹಾಗೂ 'ಸು ಫ್ರಂ ಸೋ' ಖ್ಯಾತಿಯ ನಿತಿನ್ ಶೆಟ್ಟಿ ಸಂಕಲನವಿದೆ. ಪ್ರಮೋದ್ ಮರವಂತೆ ಮತ್ತು ತ್ರಿಲೋಕ್ ಸಾಹಿತ್ಯ ರಚಿಸಿದ್ದಾರೆ.

ಪ್ರಕಾಶ್ ತುಮಿನಾಡು, ದೀಪಕ್ ರೈ, ನವೀನ್ ಡಿ. ಪಡೀಲ್, ರಕ್ಷಿತಾ, ನಮಿತಾ ಕಿರಣ್, ರಾಮ್‌ದಾಸ್, ರಘು ಪಾಂಡೇಶ್ವರ, ಪುಷ್ಪರಾಜ್ ಬೋಳಾರ್, ಜ್ಯೋತಿಷ್ ಶೆಟ್ಟಿ, ರಾಧಾಕೃಷ್ಣ, ಪಿ.ಡಿ. ಸತೀಶ್ ಹಾಗೂ ಭೀಮ್ ರಾವ್ ಸೇರಿದಂತೆ ಹಲವು ಕಲಾವಿದರು ತಾರಾಗಣದಲ್ಲಿದ್ದಾರೆ.

## ಜನಪ್ರಿಯ ಹಾಡಿನ ಸಾಲು ಈಗ ಚಿತ್ರದ ಶೀರ್ಷಿಕೆ 'ಬ್ಯಾಂಗಲ್ ಬಂಗಾರಿ'ಗೆ ಮುಹೂರ್ತ

ಹಾಡೊಂದು ಜನಪ್ರಿಯವಾದರೆ ಅದರ ಸಾಲುಗಳು ಜನರ ಬಾಯಲ್ಲಿ ಉಳಿಯುವುದು ಸಹಜ. ಇದೀಗ ಅಂತಹದ್ದೇ ಜನಪ್ರಿಯ ಸಾಲೊಂದು ಬೆಳ್ಳಿತೆರೆಯ ಶೀರ್ಷಿಕೆಯಾಗಿ ರೂಪ ಪಡೆದುಕೊಂಡಿದೆ. ಯುವ ರಾಜಕುಮಾರ್ ಅಭಿನಯದ 'ಎಕ್ಕಾ' ಚಿತ್ರದ ಜನಪ್ರಿಯ ಗೀತೆಯ ಮೊದಲ ಸಾಲು 'ಬ್ಯಾಂಗಲ್ ಬಂಗಾರಿ' ಇದೀಗ ಹೊಸ ಚಿತ್ರದ ಹೆಸರಾಗಿದೆ.



ಶಂಕರ್ ರಾಮರೆಡ್ಡಿ ನಿರ್ಮಾಣದಲ್ಲಿ, ಮರಡಿಹಳ್ಳಿ ಚಂದ್ರನಾಗ್ ನಿರ್ದೇಶನದ 'ಬ್ಯಾಂಗಲ್ ಬಂಗಾರಿ' ಚಿತ್ರದ ಮುಹೂರ್ತ ಇತ್ತೀಚೆಗೆ ನಂದಿನಿ ಬಡಾವಣೆಯ ಬಲಮುರಿ ಪ್ರಸಿದ್ಧಿ ಶ್ರೀವಿನಾಯಕ ದೇವಸ್ಥಾನದಲ್ಲಿ ನೆರವೇರಿತು. 'ಮುಂಗಾರು ಮಳೆ' ಚಿತ್ರದ ನಿರ್ಮಾಪಕ ಇ.ಕೃಷ್ಣಪ್ಪ ಮೊದಲ ಸನ್ನಿವೇಶಕ್ಕೆ ಆರಂಭ ಫಲಕ ತೋರಿಸಿದರೆ, ಶಾಸಕ ಗೋಪಾಲಯ್ಯ ಕ್ಯಾಮೆರಾ ಚಾಲನೆ ಮಾಡಿದರು.

ಪ್ರೇಮಕಥೆಯೊಂದಿಗೆ ಕ್ರೈಂ ಅಂಶವನ್ನೂ ಒಳಗೊಂಡಿರುವ ಈ ಚಿತ್ರದಲ್ಲಿ ಸುನೀಲ್ ಶಶಿಧರ್ ಹಾಗೂ ಪ್ರಕೃತಿ ರಾಜೇಂದ್ರ ನಾಯಕ–ನಾಯಕಿಯಾಗಿ ನಟಿಸುತ್ತಿದ್ದಾರೆ. ರಂಗಾಯಣ ರಘು, ಶರತ್ ಲೋಹಿತಾಶ್ವ, ಗೋಪಾಲಕೃಷ್ಣ ದೇಶಪಾಂಡೆ, ಪ್ರಕಾಶ್ ಬೆಳವಾಡಿ, ರವಿ ಕಾಳೆ, ಸಂಪತ್ ಮೈತ್ರೇಯ ಸೇರಿದಂತೆ ಹಲವು ಕಲಾವಿದರು ತಾರಾಬಳಗದಲ್ಲಿದ್ದಾರೆ.

ಕಥೆ ಮತ್ತು ಚಿತ್ರಕಥೆಯನ್ನು ನಿರ್ದೇಶಕ ಮರಡಿಹಳ್ಳಿ ಚಂದ್ರ ನಾಗ್ ಅವರೇ ಬರೆದಿದ್ದಾರೆ. 'ಫುಲ್ ಮೀಲ್ಸ್' ಖ್ಯಾತಿಯ ಎನ್. ವಿನಾಯಕ ಸಂಭಾಷಣೆ ಬರೆಯುತ್ತಿದ್ದಾರೆ. ಟಾಪ್ ಸ್ಟಾರ್ ರೇಣು ಸಂಗೀತ, ಸತೀಶ್ ಕೆ. ಛಾಯಾಗ್ರಹಣ ಹಾಗೂ ಗಿರೀಶ್ ಕುಮಾರ್ ಸಂಕಲನ ಚಿತ್ರಕ್ಕಿದೆ. ಕೆ. ಕಲ್ಯಾಣ್, ಲೋಕೇಶ್ ಕೃಷ್ಣ ಹಾಗೂ ಟಾಪ್ ಸ್ಟಾರ್ ರೇಣು ಹಾಡುಗಳನ್ನು ರಚಿಸಿದ್ದಾರೆ. ವಿಜಯ್ ಪ್ರಕಾಶ್, ಕೈಲಾಶ್ ಖೇರ್, ಜಸ್ಕರಣ್ ಸಿಂಗ್ ಹಾಗೂ ಅನುರಾಧಾ ಭಟ್ ಗಾಯನದ ಹೊಣೆ ಹೊತ್ತಿದ್ದಾರೆ.

'ಬ್ಯಾಂಗಲ್ ಬಂಗಾರಿ'ಯ ಮೊದಲ ಹಂತದ ಚಿತ್ರೀಕರಣ ಬೆಂಗಳೂರಿನಲ್ಲಿ ನಡೆಯಲಿದ್ದು, ನಂತರ ಸಕಲೇಶಪುರದಲ್ಲಿ ಚಿತ್ರೀಕರಣ ನಡೆಸಲು ಚಿತ್ರತಂಡ ಸಿದ್ಧತೆ ಮಾಡಿಕೊಂಡಿದೆ.

ನಾಯಕ ಸುನೀಲ್ ಶಶಿಧರ್ ಅವರಿಗೆ ಇದು ನಾಯಕನಾಗಿ ಎರಡನೇ ಚಿತ್ರ. ಚಿತ್ರದಲ್ಲಿ ಅವರು ಎಐ ಎಂಜಿನಿಯರ್ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದು, ಆಡಿಷನ್ ಮೂಲಕ ಆಯ್ಕೆಯಾಗಿರುವುದಾಗಿ ಹೇಳಿದರು. ಪಾತ್ರಕ್ಕೆ ಅಗತ್ಯವಾದ ತರಬೇತಿಯನ್ನೂ ಪಡೆದಿರುವುದಾಗಿ ತಿಳಿಸಿದರು.

ನಾಯಕಿ ಪ್ರಕೃತಿ ರಾಜೇಂದ್ರ, ಚಿತ್ರದಲ್ಲಿ 'ಕಾವ್ಯ' ಎಂಬ ಪಾತ್ರ ನಿರ್ವಹಿಸುತ್ತಿದ್ದಾರೆ. ನಿರ್ದೇಶಕರು ಪಾತ್ರದ ಬಗ್ಗೆ ವಿವರಿಸಿದ ಕೂಡಲೇ ಇಷ್ಟವಾಯಿತು. ತಾವು ಮೂಲತಃ ನೃತ್ಯಗಾರ್ತಿಯಾಗಿದ್ದು, ಚಿತ್ರದಲ್ಲೂ ನೃತ್ಯಕ್ಕೆ ಅವಕಾಶವಿದೆ ಎಂದರು.

ನಿರ್ದೇಶಕರು ಹೇಳಿದ ಕಥೆ ಇಷ್ಟವಾದ ಹಿನ್ನೆಲೆಯಲ್ಲಿ ಚಿತ್ರ ನಿರ್ಮಾಣಕ್ಕೆ ಮುಂದಾಗಿರುವುದಾಗಿ ನಿರ್ಮಾಪಕ ಶಂಕರ್ ರಾಮರೆಡ್ಡಿ ತಿಳಿಸಿದರು.

ಮುಹೂರ್ತ ಸಮಾರಂಭದಲ್ಲಿ ಸಂಗೀತ ನಿರ್ದೇಶಕ ಟಾಪ್ ಸ್ಟಾರ್ ರೇಣು, ಛಾಯಾಗ್ರಾಹಕ ಸತೀಶ್, ನಟ ಸಂಪತ್ ಮೈತ್ರೇಯ ಸೇರಿದಂತೆ ಚಿತ್ರತಂಡದ ಸದಸ್ಯರು ಉಪಸ್ಥಿತರಿದ್ದರು.

## ಸ್ಯಾಂಡಲ್‌ವುಡ್‌ಗೆ ಮಾಜಿ ಸಿಎಂ ಸಿದ್ದರಾಮಯ್ಯ ಎಂಟ್ರಿ

ರಾಜಕೀಯ ವೇದಿಕೆಯಲ್ಲಿ ಹಲವು ದಶಕಗಳಿಂದ ಸಕ್ರಿಯರಾಗಿರುವ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇದೀಗ ಬೆಳ್ಳಿತೆರೆಯತ್ತ ಹೆಜ್ಜೆ ಇಡಲು ಸಜ್ಜಾಗಿದ್ದಾರೆ. ಪತ್ರಕರ್ತ ಹಾಗೂ ಚಿತ್ರ ನಿರ್ದೇಶಕ–ನಿರ್ಮಾಪಕ ಎ. ರಾಜೇಶ್‌ಗೌಡ ನಿರ್ದೇಶನದ ಹೆಸರಿಡದ ಹೊಸ ಚಿತ್ರದಲ್ಲಿ ಸಿದ್ದರಾಮಯ್ಯ ಅಭಿನಯಿಸಲಿದ್ದಾರೆ.





'ನಲವತ್ತೆಂಟು ಗಂಟೆಗಳು, ಒಂದು ತಂಡ, ಒಂದು ದಾಖಲೆ, ಒಂದು ಪ್ರಪಂಚ' ಎಂಬ ಪರಿಕಲ್ಪನೆಯೊಂದಿಗೆ ರೂಪುಗೊಳ್ಳಲಿರುವ ಈ ಚಿತ್ರಕ್ಕೆ ರಾಜೇಶ್‌ಗೌಡ ಅವರೇ ಬಂಡವಾಳ ಹೂಡಿ ನಿರ್ದೇಶನ ಮಾಡುತ್ತಿದ್ದಾರೆ. ಈ ಹಿಂದೆ ಅವರು 'ರಾ' ಚಿತ್ರವನ್ನು ನಿರ್ದೇಶಿಸಿ, ನಿರ್ಮಿಸಿದ್ದರು.

### ರಾಜೇಶ್ ಗೌಡ ನಿರ್ದೇಶನ, ನವೆಂಬರ್‌ನಲ್ಲಿ ಚಿತ್ರೀಕರಣ

ಚಿತ್ರದ ಕುರಿತು ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವ ಎಚ್.ಎಂ.ರೇವಣ್ಣ, ಸಂಗೀತ ನಿರ್ದೇಶಕ ಶ್ರೀಧರ್ ಸಂಭ್ರಮ್ ಸೇರಿದಂತೆ ಚಿತ್ರತಂಡದ ಪ್ರಮುಖರು ಮಾಹಿತಿ ಹಂಚಿಕೊಂಡರು. ಸಿದ್ದರಾಮಯ್ಯ ಅವರನ್ನು ಚಿತ್ರದಲ್ಲಿ ಅಭಿನಯಿಸುವಂತೆ ಒಪ್ಪಿಸಲು ತಾವು ಆರು ಬಾರಿ ಪ್ರಯತ್ನಿಸಿದ್ದಾಗಿ ರೇವಣ್ಣ ತಿಳಿಸಿದರು.

ರಾಜಕೀಯ ಹಿನ್ನೆಲೆಯ ಕಥೆಯಾಗಿರುವುದರಿಂದ ಸಿದ್ದರಾಮಯ್ಯ ಅವರೇ ಪಾತ್ರಕ್ಕೆ ಸೂಕ್ತವೆಂದು ಭಾವಿಸಿ ಅವರನ್ನು ಸಂಪರ್ಕಿಸಲಾಗಿತ್ತು. ಅಂತಿಮವಾಗಿ ಅವರು ನಟಿಸಲು ಒಪ್ಪಿಗೆ ಸೂಚಿಸಿದ್ದಾರೆ ಎಂದು ನಿರ್ದೇಶಕ ರಾಜೇಶ್‌ಗೌಡ ಹೇಳಿದರು. ರೇವಣ್ಣ ಹಾಗೂ ಕಾ.ತ. ಚಿಕ್ಕಣ್ಣ ಕೂಡ ಚಿತ್ರದಲ್ಲಿ ಅಭಿನಯಿಸಲಿದ್ದು, ಹಿರಿಯ ನಟಿ ಉಮಾಶ್ರೀ ಸೇರಿದಂತೆ ಮತ್ತಷ್ಟು ಕಲಾವಿದರು ತಂಡಕ್ಕೆ ಸೇರ್ಪಡೆಯಾಗಲಿದ್ದಾರೆ.

ಸುಮಾರು 100 ನಿಮಿಷಗಳ ಅವಧಿಯ ಚಿತ್ರವಾಗಿದ್ದು, ಬೆಂಗಳೂರಿನ ಮುಖ್ಯಮಂತ್ರಿ ಗೃಹ ಕಚೇರಿ 'ಕಾವೇರಿ' ಸೇರಿದಂತೆ ಮತ್ತೊಂದು ಬಂಗಲೆಯಲ್ಲಿ ನವೆಂಬರ್‌ನಿಂದ ಚಿತ್ರೀಕರಣ ನಡೆಸಲು ಯೋಜಿಸಲಾಗಿದೆ. ಅನುಮತಿಗಾಗಿ ಈಗಾಗಲೇ ಪತ್ರ ಸಲ್ಲಿಸಲಾಗಿದೆ.

ಚಿತ್ರದ ಸಂಪೂರ್ಣ ಪ್ರಕ್ರಿಯೆಯನ್ನು ಅತಿ ಕಡಿಮೆ ಅವಧಿಯಲ್ಲಿ ಪೂರ್ಣಗೊಳಿಸಿ ಗಿನ್ನಿಸ್ ದಾಖಲೆಯತ್ತ ಸಾಗುವ ಉದ್ದೇಶವಿದೆ ಎಂದು ರಾಜೇಶ್‌ಗೌಡ ತಿಳಿಸಿದ್ದಾರೆ. ಸಂಗೀತ ನಿರ್ದೇಶಕ ಶ್ರೀಧರ್ ಸಂಭ್ರಮ್, ಈ ಚಿತ್ರ ತಮ್ಮ ವೃತ್ತಿಜೀವನದ ಸವಾಲಿನ ಕೆಲಸಗಳಲ್ಲಿ ಒಂದಾಗಲಿದೆ ಎಂದಿದ್ದಾರೆ.

# ಉತ್ತರ ಭಾರತದಲ್ಲಿ ಜಲಪ್ರಳಯದ ಭೀತಿ

## ಕೇದಾರನಾಥದಲ್ಲಿ 4,000 ಯಾತ್ರಿಕರು ಬಂಧಿ



ಕೇದಾರನಾಥ,ಸೆ.27–ಉತ್ತರಭಾರತದಲ್ಲಿವಾಯುಭಾರ ಕುಸಿತ ಹಾಗೂ ಅರ್ನಾಬ್ ಚಂಡಮಾರುತದ ಪ್ರಭಾವದಿಂದಾಗಿ ಸೃಷ್ಟಿಯಾಗಿರುವ ಭೀಕರ ಹವಾಮಾನ ವೈಪರೀತ್ಯವು ಭಾರೀ ವಿನಾಶವನ್ನು ಉಂಟುಮಾಡಿದ್ದು, ಉತ್ತರಾಖಂಡ, ಉತ್ತರ ಪ್ರದೇಶ ಹಾಗೂ ಬಿಹಾರ ರಾಜ್ಯಗಳಲ್ಲಿ ಜಲಪ್ರಳಯದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಉತ್ತರಾಖಂಡದ ರುದ್ರಪ್ರಯಾಗ ಜಿಲ್ಲೆಯಲ್ಲಿ ಕೇದಾರನಾಥ ಯಾತ್ರಾ ಮಾರ್ಗದಲ್ಲಿಸಾಲು ಸಾಲು ಭೂಕುಸಿತಗಳು ಸಂಭವಿಸಿದ್ದು, ಸುಮಾರು 4,000ಕ್ಕೂ ಹೆಚ್ಚು ಯಾತ್ರಿಕರು ಸೂಕ್ತ ಸಾರಿಗೆ ವ್ಯವಸ್ಥೆಯಿಲ್ಲದೆ ತಂಗುದಾಣಗಳಲ್ಲಿ ಸಿಲುಕಿ–ಕೊಂಡಿದ್ದಾರೆ. ಬೆಟ್ಟದ ಇಳಿಜಾರುಗಳಲ್ಲಿ ಕಲ್ಲು ಮತ್ತು ಮಣ್ಣುನಿರಂತರವಾಗಿ ಕುಸಿಯುತ್ತಿರುವುದರಿಂದ ತೆರವು ಕಾರ್ಯಾಚರಣೆಗೆ ತೀವ್ರ ಅಡಚಣೆ ಉಂಟಾಗಿದ್ದು, ಮುನ್ನೆಚ್ಚರಿಕಾ ಕ್ರಮವಾಗಿ ಕೇದಾರನಾಥ ಧಾಮ ಯಾತ್ರೆಯನ್ನುಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿದೆ ಹಾಗೂ ಹೆಲಿಕಾಪ್ಟರ್ ಸೇವೆಗಳನ್ನುರದ್ದುಗೊಳಿಸಲಾಗಿದೆ. ಹವಾಮಾನ ಇಲಾಖೆಯು ಡೆಹ್ರಾಡೂನ್, ತೆಹ್ರಿ, ಹರಿದ್ವಾರ ಮತ್ತು ಪೌರಿ ಜಿಲ್ಲೆಗಳಿಗೆ ಅತ್ಯಂತ ಭಾರಿ ಮಳೆಯಾಗುವ ರೆಡ್ ಅಲರ್ಟ್ ಘೋಷಿಸಿದ್ದರೆ, ಉತ್ತರಕಾಶಿ, ಚಮೋಲಿ, ನೈನಿತಾಲ್ ಮತ್ತು ರುದ್ರಪ್ರಯಾಗಗಳಿಗೆ ಆರೆಂಜ್ ಅಲರ್ಟ್ ಹಾಗೂ ಬಾಗೇಶ್ವರ್, ಅಲ್ಮೋರಾ, ಚಂಪಾವತ್, ಉಧಮ್ ಸಿಂಗ್ ನಗರ ಮತ್ತು ಪಿಥೋರಗಢ ಜಿಲ್ಲೆಗಳಲ್ಲಿ ಹಳದಿ ಅಲರ್ಟ್ ಜಾರಿಗೊಳಿಸಿ ಗಂಡಕಿ ಮತ್ತು ಅಲಕನಂದಾ ನದಿಪಾತ್ರದ ಜನರಿಗೆ ಎಚ್ಚರಿಕೆ ನೀಡಿದೆ.

ಇತ್ತ ಉತ್ತರ ಪ್ರದೇಶದಲ್ಲೂ ಮಳೆಯ ಆರ್ಭಟ ಮುಂದುವರಿದಿದ್ದು, ಲಕ್ನೋ, ಕಾನ್ಪುರ, ಉನ್ನಾವೋ, ಬಾರಾಬಂಕಿ,ಅಯೋಧ್ಯಾಮತ್ತುಜೌನ್‌ಪುರ ಸೇರಿದಂತೆ ಸುಮಾರು 45 ಪ್ರಮುಖ ನಗರಗಳಲ್ಲಿ ಕಳೆದ 65 ಗಂಟೆಗಳಿಂದ ಬಿಡುವಿಲ್ಲದೆ ಭಾರಿ ಮಳೆ ಸುರಿಯುತ್ತಿದೆ. ಗಂಟೆಗೆ 30 ರಿಂದ 40 ಕಿಲೋಮೀಟರ್ ವೇಗದಲ್ಲಿ ಬೀಸುತ್ತಿರುವ ಚಂಡಮಾರುತದ ಗಾಳಿಯಿಂದಾಗಿ ಸಾವಿರಾರು ಮರಗಳು ಹಾಗೂ ವಿದ್ಯುತ್ ಕಂಬಗಳು ನೆಲಸಮಗೊಂಡು ವಿದ್ಯುತ್ ಸಂಪರ್ಕ ಸಂಪೂರ್ಣವಾಗಿ ಕಡಿತಗೊಂಡಿದೆ. ರಾಜ್ಯದ 22 ಜಿಲ್ಲೆಗಳಲ್ಲಿ ದಿಢೀರ್ ಪ್ರವಾಹ ಪರಿಸ್ಥಿತಿ ಉಂಟಾಗಿದ್ದು, ಕಳೆದ ಎರಡು ದಿನಗಳಲ್ಲಿ ಮಳೆ,

ಸಿಡಿಲು ಹಾಗೂ ಗೋಡೆ ಕುಸಿತದಂತಹ ಅನಾಹುತಗಳಿಗೆ ಬಲಿಬಿದ್ದವರ ಸಂಖ್ಯೆ 57ಕ್ಕೆ ಏರಿಕೆಯಾಗಿದೆ. ನಿರಂತರ ಮಳೆಯಿಂದಾಗಿ ನೂರಾರು ಎಕರೆ ಪ್ರದೇಶದಲ್ಲಿದ್ದ ಬೆಳೆಗಳು ನೀರಿನಲ್ಲಿ ಕೊಚ್ಚಿಹೋಗಿ ರೈತರಿಗೆ ಅಪಾರ ಪ್ರಮಾಣದ ನಷ್ಟ ಸಂಭವಿಸಿದೆ.

ಮತ್ತೊಂದೆಡೆ,ಬಿಹಾರದಲ್ಲಿ'ಅರ್ನಾಬ್'ಚಂಡಮಾರುತದ ಪ್ರಭಾವ ಕೊಂಚ ಕ್ಷೀಣಿಸಿದೆಯಾದರೂ ಕಳೆದ 72 ಗಂಟೆಗಳಿಂದ ರಾಜ್ಯಾದ್ಯಂತ ನಿರಂತರವಾಗಿ ಭಾರಿ ಮಳೆಯಾಗುತ್ತಿದೆ. ನೆರೆಯ ನೇಪಾಳದ ತೆರೈ ಬೆಟ್ಟ ಪ್ರದೇಶಗಳಲ್ಲಿ ಸುರಿಯುತ್ತಿರುವ ಸತತ ಮಳೆಯಿಂದಾಗಿ ಗಂಡಕ್, ಕೋಸಿ ಮತ್ತು ಬಾಗಮತಿ ನದಿಗಳಲ್ಲಿ ನೀರು ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು, ವಾಲ್ಮೀಕಿನಗರ ಬ್ಯಾರೇಜ್‌ನಿಂದ ಲಕ್ಷಾಂತರ ಕ್ಯೂಸೆಕ್ ನೀರನ್ನು ಹೊರಬಿಡಲಾಗಿದೆ.

## ಜೀವಂತ ವ್ಯಕ್ತಿಯನ್ನೇ ಸಾಯಿಸಿದ ಅಧಿಕಾರಿಗಳು

ಮಂಡ್ಯ,ಸೆ.27– ಸರ್ಕಾರಿ ಅಧಿಕಾರಿಗಳ ಎಡವಟ್ಟಿನಿಂದಾಗಿ ಬದುಕಿರುವ ವ್ಯಕ್ತಿಯೊಬ್ಬರನ್ನೇ ದಾಖಲೆಗಳಲ್ಲಿ ಮೃತಪಟ್ಟಿದ್ದಾರೆ ಎಂದು ನಮೂದಿಸಿರುವ ಘಟನೆ ಬೆಳಕಿಗೆ ಬಂದಿದೆ.

ಅಧಿಕಾರಿಗಳ ಇಂತಹ ಪ್ರಮಾದದಿಂದಾಗಿ ಬಡ ಕುಟುಂಬವೊಂದು ಪಡಿತರ ಚೀಟಿ, ಮತದಾನದ ಹಕ್ಕು ಹಾಗೂ ಬ್ಯಾಂಕ್ ವಹಿವಾಟಿನಂತಹ ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿ ಸಂಕಷ್ಟಕ್ಕೆ ಸಿಲುಕಿದೆ.

ನಗರದ ಗುತ್ತಲು ಬಡಾವಣೆಯ ಟಿಪ್ಪು ರಸ್ತೆ ನಿವಾಸಿ ಶಫಿಉಲ್ಲಾ ಖಾನ್ ಅವರು ಈ ಅವಾಂತರಕ್ಕೆ ಸಿಲುಕಿರುವ ವ್ಯಕ್ತಿ. ಕಳೆದ ಎರಡು ತಿಂಗಳಿಂದ ನ್ಯಾಯಬೆಲೆ ಅಂಗಡಿಯಲ್ಲಿ ಅವರಿಗೆ ಪಡಿತರ ಸಿಗುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ರೇಷನ್ ಕಾರ್ಡ್‌ನ ಇ–ಕೆವೈಸಿ ಮಾಡಿಸಲು ತೆರಳಿದಾಗ ಅಧಿಕಾರಿಗಳು ನೀಡಿದ ಮಾಹಿತಿ ಕೇಳಿ ಶಫಿಉಲ್ಲಾ ಖಾನ್ ಆಘಾತಕ್ಕೊಳಗಾಗಿದ್ದಾರೆ.

2ಪ024ರಲ್ಲೇ ಸಾವು:

ಶಫಿಉಲ್ಲಾ ಖಾನ್ ಅವರ ಹೆಸರು ಸರ್ಕಾರಿ ವ್ಯವಸ್ಥೆಯಲ್ಲಿ 2024ರಲ್ಲೇ ಮೃತಪಟ್ಟ ವ್ಯಕ್ತಿ ಎಂದು ಅಪ್‌ಡೇಟ್ ಆಗಿರುವುದು ಅಧಿಕಾರಿಗಳಿಂದ ತಿಳಿದುಬಂದಿದೆ. ಈ ಮಾಹಿತಿ ತಿಳಿದ ಬಳಿಕ ಅವರು ನಗರಸಭೆಗೆ ತೆರಳಿ ವಿಚಾರಿಸಿದಾಗ, ಮಂಡ್ಯದ ಮಿಮ್ಸ್ ಆಸ್ಪತ್ರೆಯಿಂದ ಬಂದಿರುವ ಮರಣ ವರದಿ ಆಧರಿಸಿ ನಗರಸಭೆಯಿಂದ ಮರಣ ಪ್ರಮಾಣ ಪತ್ರ ನೀಡಲಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಯಾರೋ ಮಾಡಿದ ತಪ್ಪಿನಿಂದಾಗಿ ಜೀವಂತವಾಗಿರುವ ಶಫಿಉಲ್ಲಾ ಖಾನ್ ಅವರ ಹೆಸರು ರೇಷನ್ ಕಾರ್ಡ್ ಹಾಗೂ ಮತದಾರರ ಪಟ್ಟಿಯಿಂದಲೂ ತೆಗೆದುಹಾಕಲಾಗಿದೆ. ಇದರಿಂದ ಪಡಿತರ ಹಾಗೂ ಮತದಾನದ ಹಕ್ಕು ಕಳೆದುಕೊಂಡಿರುವುದರ ಜೊತೆಗೆ, ದಾಖಲೆಗಳಲ್ಲಿ ಮೃತಪಟ್ಟಿದ್ದಾರೆ ಎಂದು ನಮೂದಾಗಿರುವ ಪರಿಣಾಮ ಬ್ಯಾಂಕ್ ಖಾತೆಯ ವಹಿವಾಟುಗಳಿಗೂ ತೊಂದರೆಯಾಗಿದೆ ಎಂದು ಅವರು ಆರೋಪಿಸಿದ್ದಾರೆ.

ಕಚೇರಿಗಳಿಗೆ ಅಲೆದಾಟ:

ತಮ್ಮ ದಾಖಲೆಗಳಲ್ಲಿನ ತಪ್ಪನ್ನು ಸರಿಪಡಿಸುವಂತೆ ಕೋರಿ ಶಫಿಉಲ್ಲಾ ಖಾನ್ ಹಲವು ಸರ್ಕಾರಿ ಕಚೇರಿಗಳಿಗೆ ಅಲೆದಾಡುತ್ತಿದ್ದಾರೆ. ಆದರೆ ಸಮಸ್ಯೆಗೆ ತಕ್ಷಣ ಪರಿಹಾರ ಸಿಗುತ್ತಿಲ್ಲ ಎಂದು ಅವರು ಅಳಲು ತೆ–ಋಡಿಕೊಂಡಿದ್ದಾರೆ.

ಈ ಕುರಿತು ಪೊಲೀಸ್ ಠಾಣೆಯಲ್ಲಿ ದೂರು ನೀಡಲು ತೆರಳಿದಾಗಲೂ ಠಾಣೆಗಳ ವ್ಯಾಪ್ತಿಯ ವಿಚಾರದಲ್ಲಿ ಅವರನ್ನು ಅಲೆದಾಡಿಸಲಾಗುತ್ತಿದೆ ಎನ್ನಲಾಗಿದೆ. ಪಶ್ಚಿಮ ಠಾಣೆಗೆ ತೆರಳಿದರೆ ಪೂರ್ವ ಠಾಣೆಗೆ ಹೋಗುವಂತೆ ಸೂಚಿಸಲಾಗುತ್ತಿದ್ದು, ಪೂರ್ವ ಠಾಣೆಗೆ ಹೋದರೆ ಮತ್ತೆ ಪಶ್ಚಿಮ ಠಾಣೆಗೆ ಕಳುಹಿಸಲಾಗುತ್ತಿದೆ ಎಂದು ಶಫಿಉಲ್ಲಾ ಖಾನ್ ತಿಳಿಸಿದ್ದಾರೆ.

ಮರಳಿ ಪಡೆಯಲು ಪರದಾಟ:

ಅಧಿಕಾರಿಗಳ ಎಡವಟ್ಟಿನಿಂದಾಗಿ ಜೀವಂತವಾಗಿದ್ದರೂ ದಾಖಲೆಗಳಲ್ಲಿ 'ಮೃತ'ರಾಗಿರುವಂತಾಗಿರುವ ಶಫಿಉಲ್ಲಾ ಖಾನ್, ತಮ್ಮ ಗುರುತು ಹಾಗೂ ಹಕ್ಕುಗಳನ್ನು ಮರಳಿ ಪಡೆಯಲು ಪರದಾಡುತ್ತಿದ್ದಾರೆ. "ನಾನು ಜೀವಂತವಾಗಿದ್ದೇನೆ. ನನ್ನ ದಾಖಲೆಗಳನ್ನು ಸರಿಪಡಿಸಿ ನ್ಯಾಯ ಒದಗಿಸಬೇಕು" ಎಂದು ಅವರು ಕಣ್ಣೀರಿಟ್ಟಿದ್ದಾರೆ.

ಈ ಪ್ರಕರಣದಲ್ಲಿ ಸಂಬಂಧಪಟ್ಟ ಇಲಾಖೆಗಳು ದಾಖಲೆಗಳನ್ನು ಪರಿಶೀಲಿಸಿ, ತಪ್ಪು ಹೇಗೆ ಸಂಭವಿಸಿತು ಎಂಬುದನ್ನು ಪತ್ತೆಹಚ್ಚಿ, ಶಫಿಉಲ್ಲಾ ಖಾನ್ ಅವರ ದಾಖಲೆಗಳನ್ನು ತಕ್ಷಣ ಸರಿಪಡಿಸಬೇಕು. ಜಿಲ್ಲಾಡಳಿತ ಹಾಗೂ ಹಿರಿಯ ಅಧಿಕಾರಿಗಳು ಮಧ್ಯಪ್ರವೇಶಿಸಿ ಸಮಸ್ಯೆಗೆ ಶೀಘ್ರ ಪರಿಹಾರ ಕಲ್ಪಿಸಬೇಕೆಂಬ ಆಗ್ರಹ ಕೇಳಿಬಂದಿದೆ.

## ಅವೆಂಜರ್ಸ್: ಎಂಡ್‌ಗೇಮ್ ಎನ್‌ಕೋರ್' ಮರು ಬಿಡುಗಡೆ

ಮಾರ್ವೆಲ್ ಸ್ಟುಡಿಯೋಸ್‌ನ ಕುತೂಹಲ ಸೃಷ್ಟಿಸಿದ್ದ 'ಅವೆಂಜರ್ಸ್: ಎಂಡ್‌ಗೇಮ್' ಚಿತ್ರವು 'ಅವೆಂಜರ್ಸ್: ಎಂಡ್‌ಗೇಮ್ ಎನ್‌ಕೋರ್' ಹೆಸರಿನಲ್ಲಿ ಭಾರತದ ಚಿತ್ರಮಂದಿರಗಳಲ್ಲಿ ಮರು ಬಿಡುಗಡೆಯಾಗಿದ್ದು, ಬಾಕ್ಸ್ ಆಫೀಸ್‌ನಲ್ಲಿ ಉತ್ತಮ ಪ್ರದರ್ಶನ ನೀಡುತ್ತಿದೆ.

ಚಿತ್ರದ ಎರಡು ದಿನಗಳ ಗಳಿಕೆಯ ಅಂಕಿಅಂಶಗಳು ಹೊರಬಿದ್ದಿದ್ದು, ಚಿತ್ರವು ಭರ್ಜರಿ ಕಲೆಕ್ಷನ್ ಮಾಡುತ್ತಿದೆ. ಬಿಡುಗಡೆಯಾದ ಮೊದಲ ದಿನದಂದು ಭಾರತದಲ್ಲಿ 7.25 ಕೋಟಿ ಗಳಿಸಿದ್ದ ಈ ಸಿನಿಮಾ, ಎರಡನೇ ದಿನ ಸಣ್ಣ ಏರಿಕೆ ಕಾಣುವ ಮೂಲಕ 7.65 ಕೋಟಿ ಗಳಿಸಿದೆ. ಇದರೊಂದಿಗೆ ಚಿತ್ರದ ಎರಡು ದಿನಗಳ ನಿವ್ವಳ ಸಂಗ್ರಹ 14.90 ಕೋಟಿಗೆ ತಲುಪಿದ್ದು, ಒಟ್ಟು ಸಂಗ್ರಹ 17.83 ಕೋಟಿಯಾಗಿದೆ.



ಪ್ರಸ್ತುತ ಓಟವನ್ನು ಗಮನಿಸಿದರೆ ಚಿತ್ರವು 100 ಕೋಟಿ ಗಡಿಯನ್ನು ಸುಲಭವಾಗಿ ದಾಟುವ ಲಕ್ಷಣಗಳು ಕಾಣಿಸುತ್ತಿವೆ.

ಪ್ರಸ್ತುತ ಚಿತ್ರಮಂದಿರಗಳಲ್ಲಿ 'ಹನುಮಾನ್ ಅಂಶ್', 'ದಿ ಪ್ಯಾರಡೈಸ್' ಹಾಗೂ 'ದಿ ಒನ್' ಸಿನಿಮಾಗಳು ಉತ್ತಮ ಪ್ರದರ್ಶನ ಕಾಣುತ್ತಿದ್ದು, ತೀವ್ರ ಸ್ಪರ್ಧೆಯ ನಡುವೆಯೂ 'ಅವೆಂಜರ್ಸ್ ಎನ್‌ಕೋರ್' ತನ್ನ ಗಳಿಕೆಯನ್ನು ಕಾಯ್ದುಕೊಂಡಿದೆ.

ಈ ಮರು ಬಿಡುಗಡೆಯು 'ಸ್ಪೈಡರ್ ಮ್ಯಾನ್: ಬ್ರಾಂಡ್ ನ್ಯೂ ಡೇ' ಇತ್ತೀಚೆಗೆ ಬರೆದ ದಾಖಲೆಗೆ ಸವಾಲು ಎಸೆದಿದೆಯಾದರೂ, ಆ ದಾಖಲೆಯನ್ನು ಮುರಿಯುವುದು ಸುಲಭದ ಮಾತಲ್ಲ. 'ಅವೆಂಜರ್ಸ್: ಎಂಡ್‌ಗೇಮ್' ತನ್ನ ಮೊದಲ ಬಿಡುಗಡೆಯಲ್ಲಿ ಭಾರತದಲ್ಲಿ 445 ಕೋಟಿ ಗಳಿಸಿ ಪ್ರಥಮ ಸ್ಥಾನದಲ್ಲಿತ್ತು. ಆದರೆ, ನಂತರದ ದಿನಗಳಲ್ಲಿ 3ಆ ಹಾಗೂ ಇತರೆ ಫಾರ್ಮ್ಯಾಟ್‌ಗಳಲ್ಲಿ ತೆರೆಕಂಡ 'ಸ್ಪೈಡರ್ ಮ್ಯಾನ್: ಬ್ರಾಂಡ್ ನ್ಯೂ ಡೇ' ಭಾರತವೊಂದರಲ್ಲೇ 642 ಕೋಟಿ ಸಂಗ್ರಹಿಸಿ ಸಾರ್ವಕಾಲಿಕ ದಾಖಲೆ ಬರೆದಿತ್ತು.

ಈ ಬೃಹತ್ ದಾಖಲೆಯನ್ನು ಮೀರಿ ನಿಲ್ಲಲು 'ಅವೆಂಜರ್ಸ್: ಎಂಡ್‌ಗೇಮ್' ಈ ಮರು ಬಿಡುಗಡೆಯಲ್ಲಿ ಕನಿಷ್ಠ 220 ಕೋಟಿಗೂ ಅಧಿಕ ಸಂಗ್ರಹ ಮಾಡಬೇಕಾಗಿದೆ. ಆದರೆ, ಪ್ರಸ್ತುತ ಸಿಕ್ಕಿರುವ ಆರಂಭಿಕ ಕಲೆಕ್ಷನ್ ಆಧರಿಸಿ ನೋಡಿದರೆ ಈ ಮಟ್ಟದ ಬೃಹತ್ ಮೊತ್ತವನ್ನು ತಲುಪುವುದು ಚಿತ್ರತಂಡಕ್ಕೆ ಕಠಿಣ ಸವಾಲಾಗಲಿದೆ. ಈ ಮರು ಬಿಡುಗಡೆ–ಯು ಭಾರತದಲ್ಲಿ ಚಿತ್ರದ ಜೀವಮಾನದ ಒಟ್ಟು ಕಲೆಕ್ಷನ್‌ಗೆ ಎಷ್ಟು ಮೊತ್ತವನ್ನು ಸೇರಿಸಲಿದೆ ಎಂಬುದನ್ನು ಕಾದು ನೋಡಬೇಕಿದೆ.



ಫಿಬಾ ಏಷ್ಯಾ ಅಧ್ಯಕ್ಷರು, ಕರ್ನಾಟಕ ಒಲಿಂಪಿಕ್ ಸಂಸ್ಥೆ ಅಧ್ಯಕ್ಷರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಡಾ. ಕೆ. ಗೋವಿಂದರಾಜ್ ಅವರು, ಜಪಾನ್‌ನ ನಾಗೋಯಾದಲ್ಲಿ ನಡೆಯುತ್ತಿರುವ 20ನೇ ಏಷ್ಯನ್ ಕ್ರೀಡಾಕೂಟದ ಮಹಿಳೆಯರ ಬಾಸ್ಕೆಟ್‌ಬಾಲ್ ನಲ್ಲಿ ಪದಕ ಜಯಿಸಿದ ತಂಡಗಳಿಗೆ ಶನಿವಾರ ಪದಕ ವಿತರಿಸಿದರು. ಮಹಿಳೆಯರ ಫೈನಲ್ ಪಂದ್ಯದಲ್ಲಿ ಕೊರಿಯಾ ತಂಡ ಆತಿಥೇಯ ಜಪಾನ್ ತಂಡವನ್ನು ಮಣಿಸಿ ಸ್ವರ್ಣ ಪದಕ ಗೆದ್ದುಕೊಂಡಿತು.

## ಸೋಶಿಯಲ್ ಮೀಡಿಯಾ ರೀಲ್ಸ್ ಹುಚ್ಚು: 1 ಕೋಟಿ ಮೌಲ್ಯದ ಚಿನ್ನ ದರೋಡೆ



ನಾಗರ್‌ಕೋಯಿಲ್,ಸೆ.27–ಸಾಮಾಜಿಕ ಜಾಲತಾಣಗಳಲ್ಲಿಅತಿಯಾದವೈಯಕ್ತಿಕ ವಿಚಾರಗಳಪ್ರದರ್ಶನಅಪಾಯಕ್ಕೆಆಹ್ವಾನ ಎಂಬುದಕ್ಕೆತಮಿಳುನಾಡಿನಲ್ಲಿನಡೆದಈ ಘಟನೆ ಸಾಕ್ಷಿಯಾಗಿದೆ. ನಿರಂತರವಾಗಿ ಇನ್‌ಸ್ಟಾಗ್ರಾಮ್ ಹಾಗೂಯೂಟ್ಯೂಬ್‌ನಲ್ಲಿ ಅಪಾರ ಪ್ರಮಾಣದ ಬಂಗಾರ ಹಾಗೂ ನಗದು ಪ್ರದರ್ಶಿಸುತ್ತಿದ್ದ ಇನ್ಫ್ಲುಯೆನ್ಸರ್ ಮಹಿಳೆಯೊಬ್ಬರಮನೆಯಿಂದಸುಮಾರು ?1 ಕೋಟಿ ಮೌಲ್ಯದ ಚಿನ್ನಾಭರಣ ಹಾಗೂ ನಗದು ಕಳುವಾಗಿದೆ.

ತಮಿಳುನಾಡಿನ ನಾಗರ್‌ಕೋಯಿಲ್ ಸಮೀಪದ ಥಾಮತ್ತುಕೋಣಮ್ ವಿಐಪಿ ಗಾರ್ಡನ್‌ನಲ್ಲಿ ನೆಲೆಸಿರುವ ಡ್ರೈ ಫ್ರೂಟ್ಸ್ ರಫ್ತು ಉದ್ಯಮಿ ವಿನೋದ್ ಕುಮಾರ್ ಮತ್ತು ಅವರ ಪತ್ನಿ ಮಧುಮಿತಾ (29) ದಂಪತಿಗಳ ಮನೆಯಲ್ಲಿ ಈ ಕಳ್ಳತನ ನಡೆದಿದೆ.

ಇತ್ತೀಚೆಗೆ ದಂಪತಿ ತಮ್ಮ ಎರಡು ವರ್ಷದ ಮಗುವಿನೊಂದಿಗೆ ಬಟ್ಟೆ ಖರೀದಿಗಾಗಿ ತಿರುನೆಲ್ವೇಲಿಗೆ ತೆರಳಿದ್ದರು. ಈ ಸಮಯವನ್ನು ಕಾಯುತ್ತಿದ್ದ ದುಷ್ಕರ್ಮಿಗಳು, ಮನೆಯ ಹಿಂಬಾಗಿಲನ್ನು ಕಟರ್ ಬಳಸಿ ಮುರಿದು ಒಳನುಗ್ಗಿದ್ದಾರೆ. ಮಲಗುವ ಕೋಣೆಯಲ್ಲಿದ್ದ ಕಬೋರ್ಡ್ ಮತ್ತು ಸೂಟ್‌ಕೇಸ್‌ಗಳಲ್ಲಿದ್ದ ಸುಮಾರು 118 ರಿಂದ 120 ಪವನ್ ಚಿನ್ನಾಭರಣ, ಬೆಲೆಬಾಳುವ ವಜ್ರದ ಒಡವೆಗಳು ಮತ್ತು 50,000 ನಗದನ್ನು ದೋಚಿ ಪರಾರಿಯಾಗಿದ್ದಾರೆ.

ಸಾಮಾಜಿಕಜಾಲತಾಣಗಳಲ್ಲಿಲಕ್ಷಾಂತರ ಫಾಲೋವರ್ಸ್ ಹೊಂದಿರುವಮಧುಮಿತಾ, ತಾವು ಪ್ರತಿ ತಿಂಗಳು ಖರೀದಿಸುವ ಚಿನ್ನದ ಆಭರಣಗಳನ್ನು ಪ್ರದರ್ಶಿಸುವ ವಿಡಿಯೋಗಳನ್ನು ಅಪ್‌ಲೋಡ್ ಮಾಡುತ್ತಿದ್ದರು. ಅಷ್ಟೇ ಅಲ್ಲದೆ, ಹಣದ ಕಟ್ಟುಗಳ ಮೇಲೆ ಮಗುವನ್ನು ಮಲಗಿಸುವ,ಪ್ರವಾಸಹಾಗೂಶಾಪಿಂಗ್ ಹೋಗುವ ಮಾಹಿತಿಯನ್ನು ರೀಲ್ಸ್ ಮೂಲಕ ಹಂಚಿಕೊಳ್ಳುತ್ತಿದ್ದರು.

ಕುಟುಂಬವು ಮನೆಯಲ್ಲಿ ಇಲ್ಲದಿರುವ ಸಮಯವನ್ನು ಇನ್ಸ್ಟಾಗ್ರಾಮ್ ಪೋಸ್ಟ್‌ಗಳ ಮೂಲಕವೇ ತಿಳಿದುಕೊಂಡ ಕಳ್ಳರು, ಅತ್ಯಂತ ಯೋಜಿತವಾಗಿ ಈ ಕಳವು ನಡೆಸಿದ್ದಾರೆ ಎಂದು ಪೊಲೀಸರು ಪ್ರಾಥಮಿಕ ತನಿಖೆಯಲ್ಲಿ ಶಂಕಿಸಿದ್ದಾರೆ. ಕನ್ಯಾಕುಮಾರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅನ್ಸುಲ್ ನಾಗರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕಳ್ಳರ ಸುಳಿವು ಪತ್ತೆಹಚ್ಚಲು 5 ವಿಶೇಷ ಪಡೆಗಳನ್ನು ರಚಿಸಲಾಗಿದ್ದು, ಸುತ್ತಮುತ್ತಲಿನ ಸಿಸಿಟಿವಿ ದೃಶ್ಯಾವಳಿಗಳನ್ನು ಹಾಗೂ ಇನ್ಫ್ಲುಯೆನ್ಸರ್‌ನ ಸೋಶಿಯಲ್ ಮೀಡಿಯಾ ಖಾತೆಯ ಫಾಲೋವರ್ಸ್‌ಗಳ ಚಟುವಟಿಕೆಗಳನ್ನು ತೀವ್ರವಾಗಿ ಪರಿಶೀಲಿಸಲಾಗುತ್ತಿದೆ.

## ದೇಶದ ಮೊದಲ ಎಲ್‌ಎನ್‌ಜಿ ಡ್ಯುಯಲ್-ಇಂಧನ ರೈಲಿಗೆ ಚಾಲನೆ




ಸಬರಮತಿ,ಸೆ.27–ರೈಲು ಸಾರಿಗೆಯನ್ನು ಹೆಚ್ಚು ಇಂಧನ–ಸಮರ್ಥ ಮತ್ತು ಪರಿಸರ ಸ್ನೇಹಿಯನ್ನಾಗಿ ಮಾಡುವ ನಿಟ್ಟಿನಲ್ಲಿ ಭಾರತೀಯ ರೈಲ್ವೆ ಐತಿಹಾಸಿಕ ಹೆಜ್ಜೆಯಿಟ್ಟಿದೆ. ದೇಶದ ಮೊದಲ ಎಲ್‌ಎನ್‌ಜಿ–ಡೀಸೆಲ್ ಡ್ಯುಯಲ್–ಇಂಧನ ರೈಲು ಭಾನುವಾರದಿಂದ ಗುಜರಾತ್‌ನ ಸಬರಮತಿಯಲ್ಲಿ ಕಾರ್ಯಾಚರಣೆಯನ್ನು ಪ್ರಾರಂಭಿಸಲಿದ್ದು, ಕೇಂದ್ರಗೃಹ ಹಾಗೂ ಸಹಕಾರ ಸಚಿವ ಅಮಿತ್ ಶಾ ಅವರು ಈ ನೂತನ ರೈಲಿಗೆ ಹಸಿರು ನಿಶಾನೆ ತೋರಲಿದ್ದಾರೆ.

ಸಬರಮತಿ ಇಂಟಿಗ್ರೇಟೆಡ್ ಕೋಚಿಂಗ್ ಡಿಪೋದಲ್ಲಿರುವ ಎರಡು 1,400–ಅಶ್ವಶಕ್ತಿಯ ಇಂಜಿನ್‌ಗಳನ್ನು ಎಲ್‌ಎನ್‌ಜಿ–ಡೀಸೆಲ್ ಡ್ಯುಯಲ್–ಇಂಧನ ವ್ಯವಸ್ಥೆಗೆ ಪರಿವರ್ತಿಸಲಾಗಿದ್ದು, ಎಂಟು ಬೋಗಿಗಳ ರೈಲನ್ನು ನಿರ್ವಹಿಸಲು ಇವುಗಳನ್ನು ಬಳಸಲಾಗುತ್ತಿದೆ. ಈ ತಂತ್ರಜ್ಞಾನದಿಂದಾಗಿ ಡೀಸೆಲ್ ಬಳಕೆಯಲ್ಲಿ ಸುಮಾರು ಶೇಕಡಾ 40 ರಷ್ಟು ಕಡಿತವಾಗಲಿದ್ದು, ಇಂಧನ ವೆಚ್ಚ ಮತ್ತು ಪರಿಸರ ಮಾಲಿನ್ಯ ಗಣನೀಯವಾಗಿ ಕಡಿಮೆಯಾಗಲಿದೆ. ಹೊಸ ವ್ಯವಸ್ಥೆಯಿಂದ ಪ್ರತಿ ಎಂಜಿನ್‌ಗೆ ವಾರ್ಷಿಕ ಸುಮಾರು ?11.9 ಲಕ್ಷ ಉಳಿತಾಯವಾಗಲಿದ್ದು, ಎರಡು ಎಂಜಿನ್‌ಗಳಿಂದ ಒಟ್ಟು 23.9 ಲಕ್ಷಕ್ಕೂ ಹೆಚ್ಚು ಹಣ ಉಳಿತಾಯವಾಗಲಿದೆ ಎಂದು ಅಂದಾಜಿಸಲಾಗಿದೆ.

ಸಾಂಪ್ರದಾಯಿಕ ಡೀಸೆಲ್ ಎಂಜಿನ್‌ನ ಸಾಮರ್ಥ್ಯವನ್ನು ಕಾಯ್ದುಕೊಂಡೇ ವಿನ್ಯಾಸಗೊಳಿಸಲಾದ ಈ ದ್ವಿ–ಇಂಧನ ವ್ಯವಸ್ಥೆಯು ಅಗತ್ಯಕ್ಕೆ ತಕ್ಕಂತೆ ಎಲ್‌ಎನ್‌ಜಿ ಮತ್ತು ಡೀಸೆಲ್ ನಡುವೆ ಬದಲಾಗುವ ಸೌಲಭ್ಯ ಹೊಂದಿದೆ. ಯಾವುದೇ ಸ್ಥಳದಲ್ಲಿ ಎಲ್‌ಎನ್‌ಜಿ ಲಭ್ಯವಿಲ್ಲದಿದ್ದರೂ ರೈಲು ಸಂಪೂರ್ಣವಾಗಿ ಡೀಸೆಲ್‌ನಲ್ಲೇ ಚಲಿಸಬಲ್ಲದು. ಈ ತಂತ್ರಜ್ಞಾನವನ್ನು ಈಗಾಗಲೇ ಸುಮಾರು 2,000 ಕಿಲೋಮೀಟರ್‌ಗಳವರೆಗೆ ಯಶಸ್ವಿಯಾಗಿ ಪರೀಕ್ಷಿಸಲಾಗಿದೆ. ಇದೇ ಸಂದರ್ಭದಲ್ಲಿ ಸಬರಮತಿಯಲ್ಲಿ 1,542 ಕೋಟಿಗೂ ಹೆಚ್ಚು ಮೌಲ್ಯದ ವಿವಿಧ ರೈಲ್ವೆ ಯೋಜನೆಗಳಿಗೆ ಅಮಿತ್ ಶಾ ಚಾಲನೆ ನೀಡಲಿದ್ದು, 700 ಕೋಟಿ ವೆಚ್ಚದ ಡಬ್ಲ್ಯೂಎಜಿ–12 ಎಂಜಿನ್ ನಿರ್ವಹಣಾ ಶೆಡ್ ಸಹ ಉದ್ಘಾಟನೆಗೊಳ್ಳಲಿದೆ.

## ಎಐ ಯುಗದಲ್ಲಿ ಡಿಜಿಟಲ್ ವಂಚನೆಗೆ ಹೊಸ ಮುಖ ಒಂದು ಕ್ಷಣದ ಎಚ್ಚರಿಕೆ, ದೊಡ್ಡ ನಷ್ಟದಿಂದ ರಕ್ಷಣೆ

ಬೆಂಗಳೂರು.ಸೆ27: ಕೃತಕ ಬುದ್ಧಿಮತ್ತೆ (ಎಐ) ಬೆಳವಣಿಗೆಯೊಂದಿಗೆ ಡಿಜಿಟಲ್ ವಂಚನೆಗಳೂ ಹೆಚ್ಚು ನಿಖರ ಹಾಗೂ ನಂಬುವಂತಾಗುತ್ತಿವೆ. ನಕಲಿ ಹೂಡಿಕೆ ಆ?ಯಪ್‌ಗಳು, ಯುಪಿಐ ವಂಚನೆ, ವಾಯ್ಸ್ ಕ್ಲೋನಿಂಗ್, ಡೀಪ್‌ಫೇಕ್ ಹಾಗೂ 'ಡಿಜಿಟಲ್ ಅರೆಸ್ಟ್' ಹೆಸರಿನ ಮೋಸಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಜನರು ಹೆಚ್ಚಿನ ಎಚ್ಚರಿಕೆ ವಹಿಸುವ ಅಗತ್ಯವಿದೆ.

ಕೇಂದ್ರಗೃಹ ವ್ಯವಹಾರಗಳ ಸಚಿವಾಲಯದ ವರದಿ ಪ್ರಕಾರ, 2025ರಲ್ಲಿ ಸೈಬರ್ ಅಪರಾಧ ಪ್ರಕರಣಗಳು ಶೇ.24ರಷ್ಟು ಹೆಚ್ಚಾಗಿದ್ದು, ವರದಿಯಾದ ಹಣಕಾಸು ನಷ್ಟ 22,495 ಕೋಟಿಗೆ ತಲುಪಿದೆ.

ಹಣ ಸ್ವೀಕರಿಸಲು ಯುಪಿಐ ಪಿನ್ ನಮೂದಿಸುವ ಅಗತ್ಯವಿಲ್ಲ. ಹಣ ಮರುಪಾವತಿ ಅಥವಾ ಪಾವತಿ ಹೆಸರಿನಲ್ಲಿ ಕಳುಹಿಸುವ ಕ್ಯುಆರ್ ಕೋಡ್‌ಗಳನ್ನು ಸ್ಕ್ಯಾನ್ ಮಾಡಿ ಪಿನ್ ಹಾಕಿದರೆ ಖಾತೆಯಿಂದ ಹಣ ಕಡಿತವಾಗಬಹುದು.

ವಾಯ್ಸ್ ಕ್ಲೋನಿಂಗ್ ಮೂಲಕ ಪರಿಚಿತರ ಧ್ವನಿಯನ್ನು ಹಾಗೂ ಡೀಪ್‌ಫೇಕ್ ಮೂಲಕ ಮುಖ, ವಿಡಿಯೊಗಳನ್ನು ನಕಲು ಮಾಡಬಹುದು. ತುರ್ತು ಹಣದ ಬೇಡಿಕೆ ಬಂದರೆ,

ಸಂದೇಶದಲ್ಲಿರುವ ಸಂಖ್ಯೆಗೆ ಕರೆ ಮಾಡುವ ಬದಲು ಈಗಾಗಲೇ ತಿಳಿದಿರುವ ಅಧಿಕೃತ ಸಂಖ್ಯೆಯ ಮೂಲಕ ಪರಿಶೀಲಿಸಬೇಕು.

ಪೊಲೀಸ್ ಅಥವಾ ತನಿಖಾ ಅಧಿಕಾರಿಗಳ ಹೆಸರಿನಲ್ಲಿ ಭಯ ಹುಟ್ಟಿಸಿ ಹಣ ವರ್ಗಾಯಿಸುವಂತೆ ಒತ್ತಡ ಹೇರುವ ಪ್ರಕರಣಗಳು ನಡೆಯುತ್ತಿವೆ. ಯಾವುದೇ ಅಧಿಕೃತ ಸಂಸ್ಥೆಯ ಹೆಸರಿನಲ್ಲಿ ಬಂದ ತುರ್ತು ಬೇಡಿಕೆಯನ್ನು ಮೊದಲು ಪರಿಶೀಲಿಸಬೇಕು.

ವಂಚಕರು ವಿಮಾ ಪ್ರತಿನಿಧಿಗಳು ಅಥವಾ ನಿಯಂತ್ರಣ ಸಂಸ್ಥೆಗಳ ಅಧಿಕಾರಿಗಳಂತೆ ನಟಿಸಿ ಕ್ಲೇಮ್, ಹಣ ಮರುಪಾವತಿ ಅಥವಾ ಪಾಲಿಸಿ ಸೇವೆಯ ಹೆಸರಿನಲ್ಲಿ ಹಣ ಹಾಗೂ ವೈಯಕ್ತಿಕ ಮಾಹಿತಿಯನ್ನು ಕೇಳಬಹುದು. ಅಧಿಕೃತ ಸಂಪರ್ಕ ಮಾರ್ಗಗಳ ಮೂಲಕವೇ ಮಾಹಿತಿಯನ್ನು ದೃಢೀಕರಿಸಬೇಕು.

# ಸಂದೇಶ್ ಪ್ರಶಸ್ತಿ ಪ್ರದಾನ



ಬೆಂಗಳೂರು, ಸೆ.27–ಸಂದೇಶ್ ಯುವ ವೇದಿಕೆ ವತಿಯಿಂದ 34ನೇ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಿತು.

ಹೆಸರಾಂತ ಹಿನ್ನೆಲೆ ಗಾಯಕಿ ಡಾ.ಪ್ರಿಯದರ್ಶಿನಿ, ರಾಜ್ಯ ಸರ್ಕಾರದ ನಾಗರಿಕ ಸೇವೆಯ ಜಂಟಿ ನಿರ್ದೇಶಕ ಕೆ.ಎಸ್.ವಿಠಲಾಕ್ಷ, ಹಾಸ್ಯನಟ ಮೈಸೂರು ರಮಾನಂದ್, ಚಲನಚಿತ್ರ ಕಲಾವಿದ ಎಂ.ಎಸ್ ಗುರುಸ್ವಾಮಿ ಅವರಿಗೆ ಪ್ರಸಕ್ತಸಾಲಿನ ಸಂದೇಶ್ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಮಾರಂಭದಲ್ಲಿ ಶಾಸಕ ಎಂ.ಕೃಷ್ಣಪ್ಪ, ಬೇಲಿಮಠದ ಪೀಠಾಧ್ಯಕ್ಷ ಶಿವರುದ್ರ ಸ್ವಾಮೀಜಿ ಸಂದೇಶ್ ವೇದಿಕೆಯ ಅಧ್ಯಕ್ಷ ಕೆ. ಸೋಮಶೇಖರ್ ಮಾಜಿ ಸಚಿವೆ ಲೀಲಾದೇವಿ ಆರ್.ಪ್ರಸಾದ್ ಉಪಸ್ಥಿತರಿದ್ದರು.

## ಭಾರತದ ಶಾಶ್ವತ ಭದ್ರತಾ ಮಂಡಳಿ ಸ್ಥಾನಕ್ಕೆ ರಷ್ಯಾ

ನ್ಯೂಯಾರ್ಕ್, ಸೆ.27: ವಿಶ್ವಸಂಸ್ಥೆಯ ಭದ್ರತಾ ಮಂಡಳಿ (ಯುಎನ್ ಎಸ್ ಸಿ)ಯಲ್ಲಿ ಭಾರತ–ಕ್ಕೆ ಶಾಶ್ವತ ಸ್ಥಾನ ನೀಡುವ ಪ್ರಸ್ತಾವಕ್ಕೆ ರಷ್ಯಾ ವಿದೇಶಾಂಗ ಸಚಿವ ಸೆರ್ಗೆಯ್ ಲಾವ್ರೊವ್ ಬೆಂಬಲ ವ್ಯಕ್ತಪಡಿಸಿದ್ದಾರೆ.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ (ಯುಎನ್ ಜಿಎ) ಮಾತನಾಡಿದ ಅವರು, ಭದ್ರತಾ ಮಂಡಳಿಯ ಶಾಶ್ವತ ಸದಸ್ಯತ್ವವನ್ನು ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಮತ್ತಷ್ಟು ವಿಸ್ತರಿಸುವುದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದರು.

ಶನಿವಾರ) ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಜಾಗತಿಕ ನಾಯಕರನ್ನುದ್ದೇಶಿಸಿ ಮಾತನಾಡಿದ ಲಾವ್ರೊವ್, ಭದ್ರತಾ ಮಂಡಳಿ ಸುಧಾರಣೆಯು ಮಂಡಳಿಯ ಅಧಿಕಾರಗಳು ಹಾಗೂ ಪ್ರಸ್ತುತ ಶಾಶ್ವತ ಸದಸ್ಯರಾಷ್ಟ್ರಗಳ ಹಕ್ಕುಗಳಿಗೆ ಧಕ್ಕೆಯಾಗಬಾರದು ಎಂದು ಹೇಳಿದರು.

ವಿಶೇಷವಾಗಿ ಜರ್ಮನಿ ಮತ್ತು ಜಪಾನ್ ಸೇರಿದಂತೆ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಹೆಚ್ಚುವರಿ ಶಾಶ್ವತ ಸ್ಥಾನಗಳನ್ನು ನೀಡುವ ಮೂಲಕ ಸುಧಾರಣೆ ಕೈಗೊಳ್ಳಬಾರದು ಎಂದು ಅವರು ಒತ್ತಾಯಿಸಿದರು. ಬದಲಾಗಿ,

ಜಾಗತಿಕ ದಕ್ಷಿಣದ ರಾಷ್ಟ್ರಗಳಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಬೇಕು ಎಂದು ಪ್ರತಿಪಾದಿಸಿದರು.

"ಭದ್ರತಾ ಮಂಡಳಿ ಸುಧಾರಣೆಯ ಭಾಗವಾಗಿ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ, ವಿಶೇಷವಾಗಿ ಜರ್ಮನಿ ಮತ್ತು ಜಪಾನ್‌ಗೆ ಹೆಚ್ಚುವರಿ ಸ್ಥಾನಗಳನ್ನು ನೀಡಬಾರದು. ಈ ರಾಷ್ಟ್ರಗಳು ಇದೀಗ ಸೈನಿಕೀಕರಣ ಮತ್ತು ಪ್ರತೀಕಾರವಾದದ ಹಾದಿಯಲ್ಲಿ ಸಾಗುತ್ತಿವೆ," ಎಂದು ಲಾವ್ರೊವ್ ಹೇಳಿದರು.

ಹೆಚ್ಚು ಒಳಗೊಳ್ಳುವಿಕೆ ಹಾಗೂ ಭೌಗೋಳಿಕ ಸಮತೋಲನ ಹೊಂದಿರುವ ಜಾಗತಿಕ ವ್ಯವಸ್ಥೆಗೆ ಕರೆ ನೀಡಿದ ರಷ್ಯಾದ ವಿದೇಶಾಂಗ ಸಚಿವರು, ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕದ ರಾಷ್ಟ್ರಗಳಿಗೆ ಭದ್ರತಾ ಮಂಡಳಿಯಲ್ಲಿ ಹೆಚ್ಚಿನ ಪ್ರಾತಿನಿಧ್ಯ ನೀಡುವುದಕ್ಕೆ ರಷ್ಯಾ ಬೆಂಬಲಿಸುತ್ತದೆ ಎಂದು ಹೇಳಿದರು.

"ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕದ ಪ್ರಾತಿನಿಧ್ಯವನ್ನು ವಿಸ್ತರಿಸುವುದಕ್ಕೆ ನಾವು ಬೆಂಬಲಿಸುತ್ತೇವೆ. ಬ್ರೆಜಿಲ್ ಮತ್ತು ಭಾರತದ ಶಾಶ್ವತ ಸದಸ್ಯತ್ವದ ಉಮೇದುವಾರಿಕೆಯನ್ನು ನಾವು ಬೆಂಬಲಿಸುತ್ತೇವೆ," ಎಂದು ಲಾವ್ರೊವ್ ಹೇಳಿದರು.

ಇದೇ ವೇಳೆ, "ಆಫ್ರಿಕಾ ಖಂಡದ ಹಿತಾಸಕ್ತಿಗಳನ್ನು ಇಸ್ರೇಲಿ ಒಮ್ಮತ ಮತ್ತು ಎಸ್ ಇಎಟಿ ಘೋಷಣೆಗೆ ಅನುಗುಣವಾಗಿ ಪರಿಗಣಿಸಬೇಕು" ಎಂದು ಅವರು ಒತ್ತಿ ಹೇಳಿದರು. ಭಾರತದ ಶಾಶ್ವತ ಸದಸ್ಯತ್ವದ ಬೇಡಿಕೆಗೆ ರಷ್ಯಾ ಮಾತ್ರವಲ್ಲದೆ ಪೋರ್ಚುಗಲ್ ಮತ್ತು ಮಾರಿಷಸ್ ಕೂಡ ಬೆಂಬಲ ವ್ಯಕ್ತಪಡಿಸಿವೆ.

## ಮುಂಗಡ ಬುಕಿಂಗ್‌ನಲ್ಲಿ ಕೋಟಿ ಕೋಟಿ ಬಾಚಿದ ದೃಶ್ಯಂ 3




ಅಜಯ್ ದೇವಗನ್ ನಟನೆಯ ಮುಂಬರುವ ಬಹುನಿರೀಕ್ಷಿತ ಫ್ಯಾಮಿಲಿ ಥ್ರಿಲ್ಲರ್ ಚಲನಚಿತ್ರ 'ದೃಶ್ಯಂ 3' (ಅಧಿಕೃತ ಶೀರ್ಷಿಕೆ: 'ದೃಶ್ಯಂ: ದಿ ಕನ್ಕ್ಲೂಷನ್') ಬಿಡುಗಡೆಗೂ ಮುನ್ನವೇ ಭಾರಿ ಪ್ರಮಾಣದ ಮುಂಗಡ ಬುಕಿಂಗ್ ಸಾಧಿಸುತ್ತಿದ್ದು, ಗಲ್ಲಾಪೆಟ್ಟಿಗೆಯಲ್ಲಿ ಅತ್ಯಂತ ಅದ್ದೂರಿ ಮತ್ತು ಭರ್ಜರಿ ಓಪನಿಂಗ್ ಪಡೆಯಲು ಸಂಪೂರ್ಣವಾಗಿ ಸಜ್ಜಾಗಿದೆ. ಅಭಿಷೇಕ್ ಪಾಠಕ್ ನಿರ್ದೇಶನದ ಈ ಚಿತ್ರದಲ್ಲಿ ವಿಜಯ್ ಸಲ್ಗಾಂವ್ಕರ್ ಆಗಿ ಅಜಯ್ ದೇವಗನ್ ಮರಳುತ್ತಿದ್ದು, ಅವರೊಂದಿಗೆ ಟಬು, ಶ್ರಿಯಾ ಶರಣ್, ರಜತ್ ಕಪೂರ್, ಪ್ರಕಾಶ್ ರಾಜ್ ಮತ್ತು ಜೈದೀಪ್ ಅಹ್ಲಾವತ್ ಮುಖ್ಯ ಭೂಮಿಕೆಯಲ್ಲಿದ್ದಾರೆ. ಈ ಹಿಂದಿನ ಭಾಗಗಳ ಯಶಸ್ಸಿನಿಂದಾಗಿ ಪ್ರೇಕ್ಷಕರಲ್ಲಿ ಅಗಾಧ ಕುತೂಹಲ ಮೂಡಿಸಿದ್ದು, ಹಿಂದಿ 'ದೃಶ್ಯಂ' ಫ್ರಾಂಚೈಸಿಯ ಕೊನೆಯ ಭಾಗವಾಗಿರುವ ಈ ಸಸ್ಪೆನ್ಸ್ ಥ್ರಿಲ್ಲರ್ ಸಿನಿಮಾ ಚಿತ್ರಮಂದಿರಗಳಲ್ಲಿ ಬಾಕ್ಸ್ ಆಫೀಸ್ ಕಲೆಕ್ಷನ್‌ನ ಹೊಸ ದಾಖಲೆಗಳನ್ನು ನಿರ್ಮಿಸುವ ನಿರೀಕ್ಷೆಯಿದೆ.

ಚಿತ್ರದ ಆರಂಭಿಕ ದಿನದ ಸುಮಾರು 5,000 ಟಿಕೆಟ್‌ಗಳು ಎರಡು ಪ್ರಮುಖ ರಾಷ್ಟ್ರೀಯ ಸರಪಳಿಗಳಾದ ಪಿವಿಆರ್ ಐನಾಕ್ಸ್ ಮತ್ತು ಸಿನೆಪೊಲಿಸ್‌ನಲ್ಲಿ ಮಾರಾಟವಾಗಿದ್ದವು

# ಎಸ್‌ಐಆರ್ ಹೆಸರಲ್ಲಿ ದಲಿತರ ಮತ ಹಕ್ಕು ಕಸಿವ ಹುನ್ನಾರ ಖಂಡಿಸಿ ನಾಳೆ ಕಾಂಗ್ರೆಸ್ ಪ್ರತಿಭಟನೆ

ತುಮಕೂರು, ಸೆ. 27– ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ (ಎಸ್.ಐ.ಆರ್) ಹೆಸರಿನಲ್ಲಿ ದಲಿತ, ಆದಿವಾಸಿ, ಮುಸ್ಲಿಂ, ಬಡವರು, ಅನಕ್ಷರಸ್ಥರ ಮತದಾನದ ಹಕ್ಕನ್ನು ಕಸಿಯುವ ಕೆಲಸ ಮಾಡುತ್ತಿರುವ ಬಿಜೆಪಿಯ ಈ ಕುತಂತ್ರ ಹಾಗೂ ಚುನಾವಣಾ ಆಯೋಗದ ನಿಷ್ಕ್ರಿಯತೆಯನ್ನು ಖಂಡಿಸಿ ಸೆ. 28 ರಂದು ಜಿಲ್ಲಾಧಿಕಾರಿಗಳ ಕಚೇರಿ ಎದುರು ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಚಂದ್ರಶೇಖರಗೌಡ ತಿಳಿಸಿದರು.



ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿಯನ್ನು ಕೇಂದ್ರದಲ್ಲಿ ಹಾಗೂ ವಿವಿಧ ರಾಜ್ಯಗಳಲ್ಲಿ ಅಧಿಕಾರಕ್ಕೆ ತರುವ ಉದ್ದೇಶದಿಂದ ಚುನಾವಣಾ ಆಯೋಗ ಎಸ್.ಐ.ಆರ್. ಎಂಬ ಪ್ರಕ್ರಿಯೆಯ ಮೂಲಕ ಬಿಜೆಪಿಯೇತರ ಮತದಾರರನ್ನು ಪಟ್ಟಿಯಿಂದ ಅಳಿಸಿ ಹಾಕಿ, ಒಂದು ಪಕ್ಷದ ಪರವಾಗಿ ಕೆಲಸ ಮಾಡಿರುವುದು ಬಬಲೇಶ್ವರ, ಬೆಳಗಾಂ, ಧಾರವಾಡ ದಕ್ಷಿಣದಲ್ಲಿ ಹಲವು ದಾಖಲೆಗಳ ಮೂಲಕ ಬಹಿರಂಗಗೊಂಡಿದೆ. ಜನರ ನಂಬಿಕೆ ಕಳೆದುಕೊಂಡಿರುವ ಚುನಾವಣಾ ಆಯೋಗದ ವಿರುದ್ಧ ಹಾಗೂ ರಾಜ್ಯದಲ್ಲಿ ಎಸ್.ಐ.ಆರ್. ಪ್ರಕ್ರಿಯೆಯನ್ನು ಸಂವಿಧಾನ ಬದ್ಧವಾಗಿ ನಡೆಸುವಂತೆ ಒತ್ತಾಯಿಸಿ ಈ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದರು.

ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಇಕ್ಬಾಲ್ ಅಹಮದ್ ಮಾತನಾಡಿ, ನಮ್ಮ ನಾಯಕರಾದ ರಾಹುಲ್‌ಗಾಂಧಿ ಅವರು ಬಿಜೆಪಿಯ ವೋಟ್ ಚೋರಿ ಬಗ್ಗೆ ಆಗಾಗ್ಗೆ ಪ್ರಸ್ತಾಪಿಸುತ್ತಾ ಬಂದಿದ್ದರು. ಬೆಳಗಾವಿ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ನಡೆದಿರುವ ಫಾರಂ ನಂ. 07 ಸಲ್ಲಿಕೆ ಸ್ಪಷ್ಟ ಸಾಕ್ಷ್ಯವಾಗಿದೆ. ಬಿಎಲ್‌ಓ ಅಥವಾ ಬಿಎಲ್‌ಎ–02 ಅಲ್ಲದವರು ತಮ್ಮ ಹೆಸರು ಮುದ್ರಿತ ಫಾರಂ ನಂಬರ್ 07ರಲ್ಲಿ 2500ಕ್ಕೂ ಹೆಚ್ಚು ಮತದಾರರ ಹೆಸರನ್ನು ಪಟ್ಟಿಯಿಂದ ಕೈಬಿಡಲು ಅರ್ಜಿ ಸಲ್ಲಿಸಿರುವುದು, ಎಸ್.ಐ.ಆರ್. ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿರುವುದಕ್ಕೆ ಜನರ ಮುಂದಿರುವ ದಾಖಲೆಯಾಗಿದೆ.ಕೂಡಲೇ ಶಾಸಕರಾದ ಅಭಯ್ ಪಾಟೀಲ್ ವಿರುದ್ಧ ಚುನಾವಣಾ ಆಯೋಗ ಕೂಡಲೇ ಕಾನೂನು ಕ್ರಮ ಜರುಗಿಸಬೇಕು. ಬಡವರು, ದಲಿತರು, ಮುಸ್ಲಿಂರ ಮತಗಳನ್ನು ಇಲ್ಲದಂತೆ ಮಾಡಿ, ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡಲು ಹೊರಟಿದೆ. ಇದರ ವಿರುದ್ಧ ಉಗ್ರ ಹೋರಾಟ ಅನಿವಾರ್ಯ ಎಂದರು.

ತುಮಕೂರು ನಗರ ವಿಧಾನಸಭಾ ಕ್ಷೇತ್ರದಲ್ಲಿಯೂ ಸುಮಾರು 74 ಸಾವಿರ ಮತದಾರರನ್ನು ತೆಗೆಯಲಾಗಿದೆ. ಅಲ್ಲದೆ ಮತದಾರರ ಪಟ್ಟಿಯಲ್ಲಿರುವ 39 ಸಾವಿರ ಮತದಾರರಿಗೆ ನೋಟಿಸ್ ನೀಡಿದ್ದಾರೆ. ಬೆಳಗಾವಿಯ ಅಭಯಪಾಟೀಲ್ ಪ್ರಕರಣ ಗಮನಿಸಿದರೆ ನಮ್ಮ ಕ್ಷೇತ್ರದಲ್ಲಿಯೂ ಆಗಿರುವ ಶಂಕೆ ವ್ಯಕ್ತವಾಗಿದೆ. ಈ ಬಗ್ಗೆ ದಾಖಲೆಗಳ ಸಂಗ್ರಹ ನಡೆಯುತ್ತಿದೆ. ಎಸ್.ಐ.ಆರ್. ಪ್ರಕ್ರಿಯೆಯನ್ನು ಕೇಂದ್ರೀಕರಿಸಿ, ಒಂದು ಖಾಸಗಿ ಸಂಸ್ಥೆಗೆ ವಹಿಸಿರುವ ಸಾಧ್ಯತೆ ಕಂಡು ಬರುತ್ತಿದೆ. ಈ ಬಗ್ಗೆ ಸಮಗ್ರ ತನಿಖೆ ನಡೆಸಲು ಎಸ್.ಐ.ಟಿ. ರಚಿಸಬೇಕು. ಎಸ್.ಐ.ಆರ್.ನಿಂದ ಬಡವರು–ಬಲ್ಲಿದರ ನಡುವೆ ಇರುವ ಅಂತರವನ್ನು ಮತ್ತಷ್ಟು ಹೆಚ್ಚಿಸಲಿದೆ ಎಂದರು.

ಬಿಜೆಪಿ ಮತ್ತು ಚುನಾವಣಾ ಆಯೋಗದ ಈ ನಡೆಯ ವಿರುದ್ಧ ಸೆ. 28 ರಂದು ಜಿಲ್ಲಾಧಿಕಾರಿಗಳ ಕಚೇರಿ ಎದುರು ಬೃಹತ್ ಪ್ರತಿಭಟನೆ ನಡಸಲಾಗುವುದು ಎಂದು ಅವರು ತಿಳಿಸಿದರು.

ಕೆಪಿಸಿಸಿ ಪ್ರಚಾರ ಸಮಿತಿ ರಾಜ್ಯ ಸಂಯೋಜಕರು ಹಾಗೂ ತುಮಕೂರು ಜಿಲ್ಲಾ ಉಸ್ತುವಾರಿ ವಾಸುದೇವಮೂರ್ತಿ ಮಾತನಾಡಿ, ಕೆಪಿಸಿಸಿ ಅಧ್ಯಕ್ಷರಾದ ಬಿ.ಕೆ. ಹರಿಪ್ರಸಾದ್ ಅವರು ದಾಖಲೆ ಸಮೇತ ಮಾಡಿದ ಆರೋಪದಿಂದ ಕಂಗೆಟ್ಟಿರುವ ಶಾಸಕ ಅಭಯಪಾಟೀಲ್, ಕೆಪಿಸಿಸಿ ಅಧ್ಯಕ್ಷರಿಗೆ ಕನ್ನಡ ಬರುವುದಿಲ್ಲ ಎನ್ನುವ ಆರೋಪ ಮಾಡಿದ್ದಾರೆ. ಆದರೆ ಬಿ.ಕೆ. ಹರಿಪ್ರಸಾದ್ ಅವರಿಗೆ ಕನ್ನಡ, ಹಿಂದಿ, ಇಂಗ್ಲಿಷ್ ಸೇರಿದಂತೆ ಹಲವು ಭಾಷೆಗಳ ಮೇಲೆ ಪಾಂಡಿತ್ಯವಿದೆ. ಅವರು ರಾಜ್ಯಸಭೆಯಲ್ಲಿ, ವಿಧಾನ ಪರಿಷತ್‌ನಲ್ಲಿ ಎಲ್ಲಾ ಭಾಷೆಗಳಲ್ಲಿ ಮಾಡಿರುವ ಭಾಷಣಗಳೇ ಸಾಕ್ಷಿ. ಬಿಜೆಪಿ ಎಂಪಿಗಳ ರೀತಿಯಲ್ಲಿ ನಗೆ ಪಾಟಲಿಗೀಡಾಗಿಲ್ಲ. ಅಲ್ಲದೆ ಅಂಗೈ ಹುಣ್ಣಿಗೆ ಕನ್ನಡಿ ಬೇಕೆ? ಎಂಬಂತೆ ಬಬಲೇಶ್ವರ್, ಬೆಳಗಾವಿ ದಕ್ಷಿಣ, ಧಾರವಾಡದಲ್ಲಿ ನಡೆದಿರುವ ಎಸ್.ಐ.ಆರ್. ಪ್ರಕ್ರಿಯೆಗಳೇ ಸಾಕ್ಷಿಯಾಗಿವೆ. ಮೊದಲು ತಮಗೆ ಮತ ನೀಡಿದ ಮತದಾರರ ಹಕ್ಕು ರಕ್ಷಣೆಗೆ ಬಿಜೆಪಿ ಮುಂದಾಗಲಿ ಎಂದು ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಆರ್. ರಾಮಕೃಷ್ಣಪ್ಪ, ವಿವಿಧ ಮುಂಚೂಣಿ ಘಟಕಗಳ ಮುಖಂಡರಾದ ಸೈಯದ್ ದಾದಾಪೀರ್, ಗುರುಪ್ರಸಾದ್, ಅನಿಲ್‌ಕುಮಾರ್, ಭೈಲಸ್ವಾಮಿ, ಸುರೇಶ್‌ರಾಜ್, ಇರ್ಫಾನ್ ಅಹಮದ್ ಮತ್ತಿತರರು ಉಪಸ್ಥಿತರಿದ್ದರು.

# ಲೋಕಕಲ್ಯಾಣಾರ್ಥ ಕಟ್ಟೆಗಣಪತಿ ದೇವಾಲಯದಲ್ಲಿ ಮಹಾ ಹೋಮ

ಕೊರಟಗೆರೆ, ಸೆ. 27– ನಾಡಿನಾದ್ಯಾಂತ ಉತ್ತಮ ಮಳೆಯಾಗಿ ಕೆರಗಳಿಗೆ ನೀರು ಬಂದು ಸಮೃದ್ಧಿಯಾಗಿ ಬೆಳೆ ಬೆಳೆದು ಸಕಲ ಜೀವ ರಾಶಿಗಳು ಸುಖ ಶಾಂತಿಯಿಂದ ಬಾಳುವಂತೆ ಪಟ್ಟಣದ ಆರಾಧ್ಯ ದೈವ ಕಟ್ಟೆಗಣಪತಿ ದೇವಾಲಯದ ಸಮುದಾಯ ಭವನದಲ್ಲಿ ಪ್ರತಿಷ್ಠಾಪಿಸಿರುವ 18ನೇ ವರ್ಷದ ಗಣಪತಿ ಪೆಂಡಾಲಿನಲ್ಲಿ ಲೋಕ ಕಲ್ಯಾಣಾರ್ಥ ಮಹಾ ಹೋಮ ನಡೆಸಿ ಪ್ರಾರ್ಥಿಸಿದರು.



ಪ್ರಧಾನ ಅರ್ಚಕ ದತ್ತಾತ್ರೇಯ ದೀಕ್ಷಿತ್ ನೇತೃತ್ವದಲ್ಲಿ ಕೊರಟಗೆರೆ ಪಟ್ಟಣದ ಆರಾಧ್ಯ ದೈವ ಕಟ್ಟೆಗಣಪತಿ ದೇವಾಲಯದ ಸಮುದಾಯ ಭವನದಲ್ಲಿ ಪ್ರತಿಷ್ಠಾಪಿಸಿರುವ 18ನೇ ವರ್ಷದ ಗಣಪತಿ ಪೆಂಡಾಲ್‌ನಲ್ಲಿ ಲೋಕ ಕಲ್ಯಾಣಾರ್ಥ ಮಹಾ ಹೋಮ ನಡೆದ ಕಾರ್ಯಕ್ರಮದ ನಂತರ ಮಾತನಾಡಿದ ಕಟ್ಟೆಗಣಪತಿ ದೇವಾಲಯ ಅಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಎ.ಡಿ.ಬಲರಾಮಯ್ಯ, ಪ್ರತಿ ವರ್ಷದಂತೆ ಈ ವರ್ಷವು ಸಹ ಟ್ರಸ್ಟ್ ಯುವಕ ಮಂಡಲಿ ಹಾಗೂ ಮಹಿಳಾ ಮಂಡಲಿ ಸದಸ್ಯರು ಗಣೇಶ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದು ಈ ಬಾರಿ ನಾಡಿನಲ್ಲಿ ಮಳೆ ಬೆಳೆ ಇಲ್ಲದೆ ಸಾರ್ವಜನಿಕರು ಕುಡಿಯುವ ನೀರಿನ ಹಾಗೂ ವ್ಯವಸಾಯಕ್ಕೆ ನೀರಿಲ್ಲದೆ ಕಷ್ಟಪಡುತ್ತಿದ್ದು ಇದರ ನಿವಾರಣೆಗೆ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಲೋಕ ಕಲ್ಯಾಣಕ್ಕಾಗಿ ಗಣಪತಿ ದೇವಾಲಯದಲ್ಲಿ ಸ್ವಾಮಿಗೆ ತೈಲಾಭಿಷೇಕ, ಫಲ ಪಂಚಾಮೃತ ಅಭಿಷೇಕಗಳನ್ನು ನಡೆಸಿ ನಂತರ ಗಣ ಹೋಮ, ನವಗ್ರಹ ಹೋಮ, ಮಹಾ ಹೋಮ ನಡೆಸಿ ಕೊರಟಗೆರೆ ತಾಲ್ಲೂಕು ಸೇರಿದಂತೆ ನಾಡಿನಲ್ಲಿ ಉತ್ತಮ ಮಳೆಯಾಗಿ, ಭೂಮಿ ಸುಭಿಕ್ಷೆಯಾಗಲು ಮತ್ತು ಕೃಷಿ ಸಮೃದ್ಧಿಗಾಗಿ ವರುಣ ದೇವರನನ್ನು ಪ್ರಸನ್ನಗೊಳಿಸಲು ಪ್ರಾರ್ಥಿಸಲಾಗಿದೆ ಎಂದು ತಿಳಿಸಿದರು.

ದತ್ತಾತ್ರೇಯ ದೀಕ್ಷಿತ್ ಮಾತನಾಡಿ, ನಾಡಿನ ಕಲ್ಯಾಣಕ್ಕಾಗಿ ನಡೆದ ಮಹಾ ಹೋಮದಿಂದ ನಾಡಿನಲ್ಲಿ ಶಾಂತಿ ನೆಲೆಸಲು ಹಾಗೂ ಮಳೆಯಾಗಿ ಭೂಮಿ ಸುಭಿಕ್ಷೆಯಾಗಲು ಹಾಗೂ ಕೃಷಿ ಸಮೃದ್ದಿಯಾಗಿ ನಕಾರಾತ್ಮಕ ಶಕ್ತಿಯ ನಿವರಾಣೆಯೊಂದಿಗೆ ಸಾಂಕ್ರಾಮಿಕ ರೋಗಗಳಿಂದ ಮುಕ್ತಿ ಪಡೆದು ಸೌಹಾರ್ದತೆ, ಆರ್ಥಿಕ ಸುಭಿಕ್ಷೆ ಮತ್ತು ಧರ್ಮದ ರಕ್ಷಣೆಯಾಗುಂತೆ ಮಹಾ ಹೋಮ ಮಾಡುವ ಮೂಲಕ ಪ್ರಾರ್ಥಿಸಲಾಯಿತು ಎಂದು ಹೇಳಿದರು.

ಹೋಮ ಕಾರ್ಯಕ್ರಮದಲ್ಲಿ ಅರ್ಚಕರುಗಳಾದ ಚಂದ್ರಶೇಖರ, ರಾಜೇಶ್ ದೀಕ್ಷಿತ್, ಶ್ರೀನಿಧಿಶರ್ಮ ಹಾಗೂ ದೇವಾಲಯ ಅಭಿವೃದ್ದಿ ಸಮಿತಿಯ ಉಪಾಧ್ಯಕ್ಷ ಪವನ್‌ಕುಮಾರ್, ನಿರ್ದೇಶಕ ಹಾಗೂ ಹಿರಿಯ ಪತ್ರಕರ್ತ ಎನ್.ಪದ್ಮನಾಭ್, ಬ್ಯಾಂಕ್ ಕೃಷ್ಣಮೂರ್ತಿ, ಯುವಕ ಮಂಡಳಿಯ ಅಧ್ಯಕ್ಷ ಬೆನಕ ವೆಂಕಟೇಶ್, ಪದಾಧಿಕಾರಿಗಳಾಧ ಪತ್ರಕರ್ತ ಕೆ.ಬಿ.ಲೋಕೇಶ್, ಸಂಜಯ್, ಕೆ.ಪಿ.ಅಭಿಲಾಷ್, ಕೆ.ಪಿ.ಯಶಸ್, ಬ್ಯಾಂಕ್ ವಿಜಯ್‌ಕುಮಾರ್, ರಂಜೀತ್, ಬಾಲಸುಬ್ರಮಣ್ಯ ಹಾಗೂ ಮಹಿಳಾ ಮಂಡಲಿ ಅಧ್ಯಕ್ಷರು ಮತ್ತು ಸದಸ್ಯರು ಸೇರಿದಂತೆ ಅಪಾರ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿದ್ದರು.

# ಕ್ರೀಡೆಯಲ್ಲಿ ಸ್ಪರ್ಧಾತ್ಮಕ ಮನೋಭಾವ ಅಗತ್ಯ: ಎಂಎಸ್‌ಎಂ

ಮಧುಗಿರಿ, ಸೆ. 27– ಕ್ರೀಡೆಗಳಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಟಿಎಪಿಸಿಎಂಎಸ್ ಅಧ್ಯಕ್ಷ ಎಂ.ಎಸ್. ಮಲ್ಲಿಕಾರ್ಜುನಯ್ಯ ಹೇಳಿದರು.



ತಾಲ್ಲೂಕಿನ ಮಿಡಿಗೇಶಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಅಂತರ ಕಾಲೇಜು ಪುರುಷ ಮತ್ತು ಮಹಿಳೆಯರ ಚೆಸ್ ಪಂದ್ಯಾವಳಿ ಉದ್ಘಾಟಿಸಿ ಅವರು ಮಾತನಾಡಿದರು.

ಚೆಸ್ ಅಂತಾರಾಷ್ಟ್ರೀಯ ಕ್ರೀಡೆಯಾಗಿದೆ. ಗ್ರಾಮೀಣ ಭಾಗದ ಕಾಲೇಜಿನಲ್ಲಿ ವಿಶ್ವವಿದ್ಯಾಲಯ ಮಟ್ಟದ ಕ್ರೀಡಾಕೂಟ ನಡೆಯುತ್ತಿರುವುದು ಸಂತೋಷದ ವಿಷಯ ಈ ಹಿನ್ನೆಲೆಯಲ್ಲಿ ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರುಗಳು ಬದ್ಧತೆಯಿಂದ ಕಾರ್ಯನಿರ್ವಹಿಸಿ ನಮ್ಮ ಮನೆಯ ಕಾರ್ಯಕ್ರಮದಂತೆ ಕೆಲಸ ಮಾಡಬೇಕು ಎಂದರು.

ಕಾಲೇಜಿನ ಪ್ರಾಂಶುಪಾಲರಾದ ಡಾ.ಎಚ್.ಜಿ. ವಿನುತಾ ಮಾತನಾಡಿ, ಚೆಸ್ ಪಂದ್ಯಾವಳಿ ಮಾನಸಿಕ ಕೌಶಲ್ಯವನ್ನು ವೃದ್ಧಿಸುತ್ತದೆ. ಗ್ರಾಮೀಣ ಕಾಲೇಜು ಆದರೂ ಸೌಕರ್ಯಗಳಿಗೆ ಕೊರತೆ ಇಲ್ಲ. ಪ್ರತಿಭೆಗಳಿಗೆ ಕೊರತೆ ಇಲ್ಲ. ವಿದ್ಯಾರ್ಥಿಗಳು ಪಟ್ಟಣ ವ್ಯಾಮೋಹ ತೊರೆದು ಗ್ರಾಮಾಂತರ ಕಾಲೇಜುಗಳಿಗೆ ದಾಖಲಾಗಿ ಉತ್ತಮ ವಿದ್ಯಾವಂತರಾಗಬೇಕು. ಕಾಲೇಜಿನ ಬೆಳವಣಿಗೆಗೆ ಕಾಲೇಜು ಅಭಿವೃದ್ಧಿ ಸಮಿತಿಯ ಸಹಕಾರವೇ ಕಾರಣ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಜಿ.ಜೆ. ರಾಜಣ್ಣ, ಕಾಲೇಜಿನ ಪ್ರಾಂಶುಪಾಲರಾದ ಎಚ್ ಜಿ ವಿನುತ, ಕಾಲೇಜಿನ ದೈಹಿಕ ಶಿಕ್ಷಕಿ ಡಾ. ಶೋಭಾ, ಐಕ್ಯುಎಸಿ ಸಂಚಾಲಕಿ ಡಾ. ಎಲ್. ಮಂಜು ಭಾರ್ಗವಿ, ವೆಂಕಟೇಶ್ವರ ವಿದ್ಯಾ ಸಂಸ್ಥೆಯ ವೆಂಕಟರೆಡ್ಡಿ, ಎಂ. ಕೆ ತಿಪ್ಪೇಸ್ವಾಮಿ, ಪ್ರೊ. ರಜನಿ ಮತ್ತಿತರರು ಭಾಗವಹಿಸಿದ್ದರು.




ಜಪಾನ್ ನ ನಾಗೋಯಾದಲ್ಲಿ ನಡೆದ 20ನೇ ಏಷಿಯನ್ ಕ್ರೀಡಾಕೂಟದ ಮಹಿಳೆಯರ ಬಾಸ್ಕೆಟ್ ಬಾಲ್ ನಲ್ಲಿ ಜಯಗಳಿಸಿದ ತಂಡಗಳಿಗೆ ಫಿಬಾ ಏಷ್ಯಾ ಅಧ್ಯಕ್ಷರು, ಕರ್ನಾಟಕ ಒಲಂಪಿಕ್ ಸಂಸ್ಥೆ ಅಧ್ಯಕ್ಷ, ವಿಧಾನ ಪರಿಷತ್ ಸದಸ್ಯ ಡಾ, ಕೆ.ಗೋವಿಂದ ರಾಜ್ ರವರು ಭಾಗವಹಿಸಿ ಪದಕ ವಿತರಣೆ ಮಾಡಿದರು. ಮಹಿಳೆಯರ ಅಂತಿಮ ಪಂದ್ಯದಲ್ಲಿ ಕೊರಿಯಾ ತಂಡ ಅತಿಥೇಯ ಜಪಾನ್ ತಂಡವನ್ನು ಮಣಿಸಿ ಸ್ವರ್ಣ ಪದಕ ಪಡೆದುಕೊಂಡಿದೆ.



ನಗರದ ಮೈಸೂರು ರಸ್ತೆ ಶ್ರೀ ಶಾರದಾ ವಿದ್ಯಾಪೀಠದಲ್ಲಿ ನಡೆದ ಪ್ರಥಮ ದರ್ಜೆ ಕಾಲೇಜಿನ ಸಾಂಸ್ಕೃತಿಕ ಕಾರ್ಯಕ್ರಮವನ್ನು ಕವಿ ಸೂರ್ಯ ಕೀರ್ತಿ ಅವರು ಉದ್ಘಾಟಿಸಿದರು. ಸಾಹಿತ್ಯ ಅಕಾಡೆಮಿಯ ಮಾಜಿ ಸದಸ್ಯ ಡಾ, ಬಿ.ಎಂ. ಪಟೇಲ್ ಪಾಂಡು, ಸಂಸ್ಥೆಯ ಪದಾಧಿಕಾರಿಗಳಾದ ಗಂಗಣ್ಣ, ಬಿ.ಹೆಚ್. ಕೃಷ್ಣಮೂರ್ತಿ, ಪ್ರಾಚಾರ್ಯ ದೇವರಾಜ್ ರವರು ಉಪಸ್ಥಿತರಿದ್ದರು.



ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ರವರು ಸಿಎಂಆರ್ ವಿವಿಯ ಚಾನ್ಸಲರ್ ಡಾ, ಸಬಿತಾ ರಾಮಮೂರ್ತಿ, ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್ ನ ಅಧ್ಯಕ್ಷ ಡಾ, ಎಂ.ಪಿ. ಶ್ಯಾಮ್ ಹಾಗೂ ಎಐಸಿಟಿಇ ಮಾಜಿ ಅಧ್ಯಕ್ಷ ಪ್ರೋ, ಟಿ.ಜಿ. ಸೀತಾರಾಮ್ ಅವರಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿ ಪ್ರಧಾನ ಮಾಡಿ ಗೌರವಿಸಿದರು. ಉಪಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್, ಸಚಿವ ಬಸವರಾಜ ರಾಯರೆಡ್ಡಿ ಮತ್ತಿತರರು ಉಪಸ್ಥಿತರಿದ್ದರು.

# ಡಿಬಿಟಿಎ 5ನೇ ವಾರ್ಷಿಕೋತ್ಸವ




ಬೆಂಗಳೂರು,ಸೆ.27–ದ್ರಾವಿಡ ಭಾಷಾ ಅನುವಾದಕರ ಸಂಘದ ಐದನೇ ವಾರ್ಷಿಕೋತ್ಸವ ಹಾಗೂ ಡಿಬಿಟಿಎ ಅನುವಾದ ಪ್ರಶಸ್ತಿ?2026 ಪ್ರದಾನ ಸಮಾರಂಭವು ಬೆಂಗಳೂರಿನ ನಯನ ಸಭಾಂಗಣ, ಕನ್ನಡ ಭವನದಲ್ಲಿ ನಡೆಯಿತು.

ಕಾರ್ಯಕ್ರಮದ ಅಂಗವಾಗಿ ನಡೆದ ಪಂಚಭಾಷಾ ಕಾವ್ಯವೇದಿಯಲ್ಲಿ ಕನ್ನಡ, ತಮಿಳು, ತೆಲುಗು, ಮಲಯಾಳಂ ಹಾಗೂ ತುಳು ಎಂಬ ಐದು ದ್ರಾವಿಡ ಭಾಷೆಗಳ 15 ಕವಿಗಳು ಭಾಗವಹಿಸಿದರು. ಬಳಿಕ ಅನುವಾದವನ್ನು ಕೇಂದ್ರವಾಗಿಟ್ಟುಕೊಂಡು ಸಾಹಿತ್ಯಿಕ ಸಂವಾದವೂ ನಡೆಯಿತು.

2026ನೇ ಸಾಲಿನ ಡಿಬಿಟಿಎ ತೆಲುಗು ಅನುವಾದ ಪ್ರಶಸ್ತಿಯನ್ನು ತಮಿಳು ಕಾದಂಬರಿ ಸುಲುಂಧೀಯನ್ನು ತೆಲುಗಿಗೆ ಅನುವಾದಿಸಿದ ಬೊಳ್ಳಿ ರಾಮಸ್ವಾಮಿ ರಘುಪತಿ ಅವರಿಗೆ ಪ್ರದಾನ ಮಾಡಲಾಯಿತು.

ಡಾ. ಪುರುಷೋತ್ತಮ ಬಿಳಿಮಲೆ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಎನ್. ರಾಮನಾಥ್ ಅವರು ಮುಖ್ಯ ಅತಿಥಿಯಾಗಿ ಉಪಸ್ಥಿತರಿದ್ದರು. ಡಿಬಿಟಿಎ ಸಲಹೆಗಾರರಾದ ಡಾ. ನಾ. ದಾ. ಶೆಟ್ಟಿ, ಅಧ್ಯಕ್ಷರಾದ ಡಾ. ಸುಷ್ಮಾ ಶಂಕರ್ ಹಾಗೂ ಕಾರ್ಯದರ್ಶಿ ಕೆ. ಪ್ರಭಾಕರನ್ ಉಪಸ್ಥಿತರಿದ್ದರು. ಖಜಾಂಚಿ ಪ್ರೊ. ರಾಕೇಶ್ ವಿ. ಎಸ್. ಸ್ವಾಗತಿಸಿದರು. ಉಪಾಧ್ಯಕ್ಷರಾದ ಡಾ. ಬಿ. ಎಸ್. ಶಿವಕುಮಾರ್ ವಂದನಾರ್ಪಣೆ ಸಲ್ಲಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ರೆಬಿನ್ ರವೀಂದ್ರನ್ ಕಾರ್ಯಕ್ರಮದ ಸಂಯೋಜಕರಾಗಿದ್ದರು.

ಐದನೇ ವಾರ್ಷಿಕೋತ್ಸವದ ಅಂಗವಾಗಿ ಡಿಬಿಟಿಎ ಅಧಿಕೃತ ವೆಬ್‌ಸೈಟ್‌ನ್ನು ಸಹ ಲೋಕಾರ್ಪಣೆ ಮಾಡಲಾಯಿತು. ಸಂಘದ ಚಟುವಟಿಕೆಗಳು, ಸದಸ್ಯರ ವಿವರಗಳು ಹಾಗೂ ಅನುವಾದ ಕಾರ್ಯಗಳನ್ನು ಇನ್ನಷ್ಟು ವ್ಯಾಪಕವಾಗಿ ಜಗತ್ತಿಗೆ ಪರಿಚಯಿಸುವ ಹೊಸ ವೇದಿಕೆಯಾಗಿ ಈ ವೆಬ್‌ಸೈಟ್ ಕಾರ್ಯನಿರ್ವಹಿಸಲಿದೆ.

ಡಿಬಿಟಿಎ ಸದಸ್ಯರು, ವಿವಿಧ ಸಂಸ್ಥಾನಗಳಿಂದ ಆಗಮಿಸಿದ್ದ ದ್ರಾವಿಡ ಭಾಷಾ ಅನುವಾದಕರು, ಸಾಹಿತಿಗಳು ಹಾಗೂ ಸಾಹಿತ್ಯಾಸಕ್ತರು ಭಾಗವಹಿಸಿದ್ದರು.



ನಗರದ ಎಂ.ಜಿ. ರಸ್ತೆಯ ತಾಜ್ ಹೋಟೆಲ್ ನಲ್ಲಿ ಮದ್ರಾಸ್ ಅಲ್ಯೂಮ್ನಿ ಅಸೋಷಿಯನ್ ಹಮ್ಮಿಕೊಂಡಿದ್ದ ಆತ್ಮ ನಿರ್ಭರ ಭಾರತ, ಸ್ವಾವಲಂಬಿ ಭಾರತ ನಿರ್ಮಾಣ ಎಂಬ ಆಶಯದೊಂದಿಗೆ ನಡೆದ ಸಮ್ಮೇಳನದಲ್ಲಿ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್, ಮದ್ರಾಸ್ ನಿರ್ದೇಶಕ ಪ್ರೋ,ವಿ. ಕಾಮಕೋಟಿ, ಸಹ ಸಂಸ್ಥಾಪಕ ಡಾ, ಶ್ರೀಧರ್ ವೇಂಬು, ಅಧ್ಯಕ್ಷ ಶ್ರೀಧರ್ ಬೂವರಾಘವನ್ ಮತ್ತಿತರರು ಭಾಗವಹಿಸಿದ್ದರು.

# ಹಾಲಿಗೆ 5 ರೂ. ಪ್ರೋತ್ಸಾಹಧನ ಹೆಚ್ಚಿಸಲಿ: ಗೌಡ

ಸಿರಾ, ಸೆ. 27– ಸರ್ಕಾರ ಹಾಲಿಗೆ ಪ್ರೋತ್ಸಾಹ ಧನ 5 ರೂಪಾಯಿ ನೀಡುತ್ತಿದ್ದು, 10 ರೂಪಾಯಿಗೆ ಹೆಚ್ಚಳ ಮಾಡುವುದರ ಜತೆಗೆ ರೈತರು ಡೇರಿಗೆ ನೀಡುತ್ತಿರುವ ಹಾಲಿನ ದರ 36 ರೂಪಾಯಿ ಇದ್ದು, ಇದರ ದರವನ್ನು ಕೂಡ 3 ರೂಪಾಯಿ ಹೆಚ್ಚಳ ಮಾಡಿ ಹೈನುಗಾರಿಕೆಯನ್ನು ಪ್ರೋತ್ಸಾಹಿಸುವುದರ ಜತೆಗೆ ಬರದ ಸಂಕಷ್ಟದಿಂದ ಹೈನುಗಾರಿಕೆ ಮಾಡುವ ರೈತರನ್ನು ರಕ್ಷಣೆ ಮಾಡಬೇಕು ಎಂದು ತುಮಕೂರು ಹಾಲು ಕ್ರಾಂತಿಯೇ ಮಾಡಿ, ಪ್ರತಿಯೊಂದು ಗ್ರಾಮದಲ್ಲಿ ಹಾಲು ಉತ್ಪಾದಕ ಸಂಘ ಸ್ಥಾಪನೆ ಮಾಡಿ ಸಣ್ಣ ಸಣ್ಣ ರೈತರನ್ನು ಕೂಡ ಆರ್ಥಿಕವಾಗಿ ಸಬಲರನ್ನಾಗಿಸಬೇಕೆಂಬುದು ನಿರ್ದೇಶಕ ಎಸ್ ಆರ್ ಗೌಡ ರವರ ಇಚ್ಚಾಶಕ್ತಿ, ಜನ ಸೇವೆಗೆ ಹಿಡಿದ ಕೈಗನ್ನಡಿ. ತಾಲ್ಲೂಕಿನ ಎಲ್ಲಾ ಸಂಘಗಳಿಗೆ ಸ್ವಂತ ಕಟ್ಟಡ ಇರಬೇಕೆಂಬ ನಿರ್ದೇಶಕರ ಸಂಕಲ್ಪ ಮುಂದಿನ ದಿನಗಳಲ್ಲಿ ಯಶಸ್ಸು ಕಾಣಲಿದೆ ಎಂದರು.




ಒಕ್ಕೂಟದ ನಿರ್ದೇಶಕ ಎಸ್.ಆರ್. ಗೌಡ ಹೇಳಿದರು.

ತಾಲ್ಲೂಕಿನ ಗೌಡಗೆರೆ ಹೋಬಳಿಯ ಭೂತಕಾಟನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ರೈತರಿಗೆ ಕೃಷಿಯಲ್ಲಿ ಲಾಭ ಇಲ್ಲದಂತಾಗಿದ್ದು ಕುಟುಂಬ ನಿರ್ವಹಣೆ ಉದ್ದೇಶದಿಂದ ಹೈನುಗಾರಿಕೆಯತ್ತ ಒಲವು ತೋರುತ್ತಿದ್ದಾರೆ ಎಂದರು.ಬೇಸಿಗೆ ಮತ್ತು ಬರದ ಸಂಕಷ್ಟದಲ್ಲಿ ರಾಸುಗಳ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸಿ ಪಶು ಪೋಷಣೆ ಮಾಡಬೇಕು. ಹೈನುಗಾರರ ಹಿತ ಕಾಪಾಡುವುದು ನಮ್ಮ ಜವಾಬ್ದಾರಿ ಎಂದರು.

ತುಮಕೂರು ಹಾಲು ಒಕ್ಕೂಟದ ಉಪ ವ್ಯವಸ್ಥಾಪಕ ಬಿ.ಗಿರೀಶ್ ಮಾತನಾಡಿ, ಸಿರಾ ತಾಲ್ಲೂಕಿನಲ್ಲಿ ಕ್ಷೀರ

ಈ ಸಂದರ್ಭದಲ್ಲಿ ಭೂತಕಾಟನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಮಾಲಿ ಮರಿಯಪ್ಪ, ಉಪಾಧ್ಯಕ್ಷ ಪಾಂಡುರಂಗಪ್ಪ, ವಿಸ್ತರಣಾಧಿಕಾರಿ ಚೈತ್ರ, ಹಾಲು ಉತ್ಪಾದಕರ ಸಂಘದ ನಿರ್ದೇಶಕರಾದ ಹಾಲಪ್ಪ, ಪಿ.ರಂಗನಾಥ್, ಬಿ.ಹೆಚ್ ಮಾಲಿಮರಿ, ಮುದ್ದೇಗೌಡ ಮುದ್ದಣ್ಣ ಶ್ರೀನಿವಾಸ್ ಶಿವಮ್ಮ, ಕಾರ್ಯದರ್ಶಿ ಬಿ.ಟಿ. ಗಿರೀಶ್, ಪಶು ವೈದ್ಯಾಧಿಕಾರಿ ಡಾ ಬಿ.ಟಿ. ಶ್ರೀಕಾಂತ್, ವಿಸ್ತರಣಾ ಸಮಾಲೋಚಕರಾದ ಬಾಬಾ ಫಕ್ರುದ್ದೀನ್.ಪಿ.ಎಂ, ಪ್ರವೀಣ್, ಹನುಮಂತರಾಯ ಸೇರಿದಂತೆ ಭೂತ ಕಾಟನಹಳ್ಳಿ ಹಾಲು ಉತ್ಪಾದಕ ರೈತರು, ಗ್ರಾಮಸ್ಥರು ಹಾಲು ಉತ್ಪಾದಕ ಸಂಘದ ಕಾರ್ಯಕಾರಣಿ ಸಮಿತಿ ಮಾಜಿ ಸದಸ್ಯರುಗಳು ಉಪಸ್ಥಿತರಿದ್ದರು.

# ಬಾಸುಂಡೆ ಬರುವಂತೆ ಹೊಡೆದ ಶಿಕ್ಷಕ ಸಸ್ಪೆಂಡ್

ಗುಬ್ಬಿ, ಸೆ. 27– ಪಟ್ಟಣದ ಪಿಎಂಶ್ರೀ ಸರ್ಕಾರಿ ಬಾಲಕರ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಬಾಸುಂಡೆ ಬರುವಂತೆ ಹೊಡೆದಿದ್ದ ಶಿಕ್ಷಕನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಸಮೀರ್ ಎಂಬುವರೇ ಅಮಾನತುಗೊಂಡಿರುವ ಶಿಕ್ಷಕ. 7ನೇ ತರಗತಿಯ ನೂತನ್, ದಯಾನಂದ್ ಎಂಬ ವಿದ್ಯಾರ್ಥಿಗಳಿಗೆ ಶಿಕ್ಷಕ ಸಮೀರ್ ಥಳಿಸಿದ್ದಾರೆ ಎನ್ನಲಾಗಿತ್ತು. ಮಕ್ಕಳು ಶಾಲೆ ಮುಗಿಸಿಕೊಂಡು ಮನೆಗೆ ಹೋದಾಗ ಇದು ಪೋಷಕರ ಗಮನಕ್ಕೆ ಬಂದಿದೆ. ತಕ್ಷಣ ಮಕ್ಕಳನ್ನು ಸಾರ್ವಜನಿಕ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದ್ದರು.

ಪೋಷಕರು ಶಾಲೆಯ ಬಳಿ ಹೋಗಿ ಶಿಕ್ಷಕರ ವಿರುದ್ಧ ಕ್ರಮಕೈಗೊಳ್ಳುವಂತೆ ಒತ್ತಾಯಿಸಿದ್ದರು. ವಿಷಯ ತಿಳಿದ ತಕ್ಷಣ ಕ್ಷೇತ್ರ ಶಿಕ್ಷಣಾಧಿಕಾರಿ ನಟರಾಜ್ ಹಾಗೂ ಪೊಲೀಸರು ಶಾಲೆಗೆ ಭೇಟಿ ನೀಡಿ ವಿಚಾರಣೆ ನಡೆಸಿದರು.

ಮಕ್ಕಳು ತಪ್ಪು ಮಾಡಿದರೆ ಬುದ್ಧಿ ಹೇಳಲಿ, ಬಾಸುಂಡೆ ಬರುವಂತೆ ಹೊಡೆದಿರುವುದು ಎಷ್ಟು ಸರಿ. ಶಾಲೆಗಳಲ್ಲಿ ಮಕ್ಕಳನ್ನು ನಿಯಂತ್ರಿಸುವ ಕ್ರಮಗಳನ್ನು ಶಿಕ್ಷಕರು ಪಾಲಿಸಬೇಕು. ಮಕ್ಕಳು ಮನನೊಂದು ಏನಾದರೂ ಮಾಡಿಕೊಂಡರೆ ಯಾರು ಹೊಣೆ ಎಂದು ಪೋಷಕರು ಪ್ರಶ್ನಿಸಿದರು.

# ಪತ್ರಕರ್ತ ಭಾನುಪ್ರಶಾಂತ್‌ಗೆ ಮಾತೃ ವಿಯೋಗ



ತಿಪಟೂರು, ಸೆ. 27– ಹಿರಿಯ ಪತ್ರಕರ್ತ, ಸಂಜೆವಾಣಿ ದಿನಪತ್ರಿಕೆಯ ತಿಪಟೂರು ವರದಿಗಾರ, ಬಯಲುಸೀಮೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಘದ ಸಂಸ್ಥಾಪಕ ಎನ್. ಭಾನುಪ್ರಶಾಂತ್ ರವರ ತಾಯಿ ವಿಮಲಾ (86) ಅವರು ವಯೋಸಹಜ ಕಾಯಿಲೆಯಿಂದ ನಿಧನರಾದರು.ಶ್ರೀಯುತರು ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಪಾರ್ಥಿವ ಶರೀರವನ್ನು ನಗರದ ಗುಬ್ಬಿ ಲೇಔಟ್‌ನ ಚಿಗುರು ಮಾಂಟೆಸರಿ ಬಳಿಯಿರುವ ಅವರ ನಿವಾಸದಲ್ಲಿ ಅಂತಿಮ ದರ್ಶನಕ್ಕಾಗಿ ಇಡಲಾಗಿತ್ತು. ಮೃತರ ಅಂತ್ಯಕ್ರಿಯೆಯು ನಗರದ ಬಂಡಿಹಳ್ಳಿ ಹಿಂದೂ ರುದ್ರಭೂಮಿಯಲ್ಲಿ ಇಂದು ನೆರವೇರಿತು.

# ಸಮಾನತೆಯಿಂದ ಶೋಷಣೆ ಮುಕ್ತ ಸಮಾಜ ನಿರ್ಮಾಣ ಸಾಧ್ಯ: ಬಸವಲಿಂಗಪ್ಪ

ಪಾವಗಡ, ಸೆ. 27– ಅಸ್ಪೃಶ್ಯತೆ ಎನ್ನುವುದು ಸಮಾಜಕ್ಕೆ ಅಂಟಿದ ಶಾಪ. ಅದನ್ನು ತೊಡೆದು ಹಾಕಲು ಪ್ರತಿಯೊಬ್ಬರೂ ಮನೋಭಾವನೆಯನ್ನು ಬದಲಾಯಿಸಿಕೊಳ್ಳಬೇಕು. ಜಾತಿ ವ್ಯವಸ್ಥೆ ಸೃಷ್ಟಿಸಿದ ತಾರತಮ್ಯಗಳನ್ನು ತೊರೆದು ಸಮಾಜದಲ್ಲಿ ಎಲ್ಲರೂ ಸಮಾನತೆಯಿಂದ ಬಾಳಿದಾಗ ಮಾತ್ರ ಶೋಷಣೆ ಮುಕ್ತ ಸಮಾಜ ನಿರ್ಮಾಣ ಸಾಧ್ಯ ಎಂದು ನಿವೃತ್ತ ಪ್ರಾಚಾರ್ಯರಾದ ಬಸವಲಿಂಗಪ್ಪ ಹೇಳಿದರು.

ತಾಲ್ಲೂಕು ಆಡಳಿತ, ತಾಲೂಕು ಪಂಚಾಯಿತಿ, ಸಮಾಜ ಕಲ್ಯಾಣ ಇಲಾಖೆ ಹಾಗೂ ಪೊಲೀಸ್ ಇಲಾಖೆ ಸಂಯುಕ್ತಾಶ್ರಯದಲ್ಲಿ ತಾಲ್ಲೂಕಿನ ರೊಪ್ಪ ಗ್ರಾಮದಲ್ಲಿ ಅಸ್ಪೃಶ್ಯತಾ ನಿವಾರಣೆ ಹಾಗೂ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ದೌರ್ಜನ್ಯ ಪ್ರತಿಬಂಧ ಕಾಯಿದೆಯ ಅರಿವು ಮೂಡಿಸುವ ವಿಶೇಷ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ಕಾನೂನುಗಳ ಜಾರಿಯಿಂದಲೇ ಎಲ್ಲವೂ ಸಾಧ್ಯವಿಲ್ಲ. ಪ್ರತಿಯೊಬ್ಬರಲ್ಲೂ ಸಾಮಾಜಿಕ ಕಳಕಳಿ ಅಗತ್ಯ. ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ನಮ್ಮ ಹಕ್ಕುಗಳಿಗಾಗಿ ಶಾಂತಿಯುತವಾಗಿ ಹೋರಾಡಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯಿದೆಯು ಅಶಕ್ತರಿಗೆ ಶಕ್ತಿಯಾಗಿದೆಯೇ ಹೊರತು ಯಾರಿಗೂ ಹಾನಿ ಮಾಡಲು ಅಲ್ಲ. ಗ್ರಾಮ ಮಟ್ಟದಲ್ಲಿ ದಲಿತರಿಗೆ ಮತ್ತು ಶೋಷಿತರಿಗೆ ಸಮಾನ ಗೌರವ ಹಾಗೂ ಮೂಲಭೂತ ಸೌಕರ್ಯಗಳು ಸಿಗಬೇಕು. ಸರ್ಕಾರದ ಯೋಜನೆಗಳು ಹಾಗೂ ಕಾನೂನುಗಳ ಅರಿವು ಪ್ರತಿಯೊಬ್ಬರಿಗೂ ಮೂಡಿದಾಗ ಮಾತ್ರ ದೌರ್ಜನ್ಯ ರಹಿತ, ಸಮಾನತೆಯಿಂದ ಕೂಡಿದ ಸಮಾಜ ನಿರ್ಮಾಣ ಸಾಧ್ಯ ಎಂದರು.

ರೊಪ್ಪ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವಿಜಯ್‌ಕುಮಾರ್ ಮಾತನಾಡಿ, ಗ್ರಾಮ ಮಟ್ಟದಲ್ಲಿ ಅಸ್ಪೃಶ್ಯತೆ ಮತ್ತು ತಾರತಮ್ಯವನ್ನು ಬೇರುಸಹಿತ




ಕಿತ್ತೊಗೆಯಲು ಇಂತಹ ಜಾಗೃತಿ ಕಾರ್ಯಕ್ರಮಗಳು ಅಗತ್ಯ. ಸರ್ಕಾರದ ವಿಬಿಜಿ ರಾಮ್ ಜಿ ಯೋಜನೆಯಡಿ ಕೃಷಿ ಹೊಂಡ ಸೇರಿದಂತೆ ಹಲವು ಕಲ್ಯಾಣಕಾರಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಅವಕಾಶವಿದ್ದು, ಆಸಕ್ತಿಯುಳ್ಳ ಫಲಾನುಭವಿಗಳು ಪಂಚಾಯ್ತಿ ಕಚೇರಿಯನ್ನು ಸಂಪರ್ಕಿಸಬಹುದು. ಗ್ರಾಮದಲ್ಲಿ ಸ್ವಚ್ಚತೆ, ಕುಡಿಯುವ ನೀರು ಮತ್ತು ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವಲ್ಲಿ ಪಂಚಾಯಿತಿಯು ಯಾವುದೇ ತಾರತಮ್ಯವಿಲ್ಲದೆ ಕೆಲಸ ಮಾಡುತ್ತಿದೆ. ಸಾರ್ವಜನಿಕರು ಪಂಚಾಯಿತಿ ತೆರಿಗೆಗಳನ್ನು ಸರಿಯಾದ ಸಮಯಕ್ಕೆ ಪಾವತಿಸುವ ಮೂಲಕ ಗ್ರಾಮದ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಹೇಳಿದರು

# ಹೋರ್ಮುಜ್ ಜಲಸಂಧಿ ತೆರೆಯಲು ಇರಾನ್ ಬಯಕೆ: ಟ್ರಂಪ್

ವಾಷಿಂಗ್ಟನ್,ಸೆ.27:ಹೋರ್ಮುಜ್ ಜಲಸಂಧಿಯನ್ನುಮುಚ್ಚಿರುವುದರಿಂದ ಇರಾನ್ ತೀವ್ರಆರ್ಥಿಕ ಒತ್ತಡವನ್ನು ಎದುರಿಸುತ್ತಿದ್ದು,ಜಲಸಂಧಿಯನ್ನು ತಕ್ಷಣವೇ ಪುನಃ ತೆರೆಯಲು ಬಯಸುತ್ತಿದೆ ಎಂದು ಅಮೆರಿಕ ಅಧ್ಯಕ್ಷಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಜಗತ್ತಿಗೆಸಮಸ್ಯೆಉಂಟುಮಾಡುವ ಉದ್ದೇಶದಿಂದ ಇರಾನ್ ಈ ಪ್ರಮುಖ ಜಲಮಾರ್ಗವನ್ನು ಮುಚ್ಚುವ ಮೂಲಕ ತಾನೇ ತನ್ನನ್ನು ಸಂಕಷ್ಟಕ್ಕೆ ಸಿಲುಕಿಸಿಕೊಂಡಿದೆ ಎಂದು ಟ್ರಂಪ್ ಹೇಳಿದ್ದಾರೆ.

ಫೆಬ್ರವರಿ ಅಂತ್ಯದಲ್ಲಿ ಅಮೆರಿಕ ಮತ್ತು ಇಸ್ರೇಲ್ ಇರಾನ್ ಮೇಲೆ ದಾಳಿ ನಡೆಸಿದ ಬಳಿಕ, ಇರಾನ್ ಪರಿಣಾಮಕಾರಿಯಾಗಿ ಹೋರ್ಮುಜ್ ಜಲಸಂಧಿಯ ಸಂಚಾರವನ್ನು ನಿರ್ಬಂಧಿಸಿತು. ಜಲಮಾರ್ಗದಲ್ಲಿ ಇರಾನ್‌ನ ಬೆದರಿಕೆಗಳು ಮತ್ತು ಹಡಗುಗಳ ಮೇಲಿನ ದಾಳಿಗಳ ಹಿನ್ನೆಲೆಯಲ್ಲಿ ಈ ಮಾರ್ಗದಲ್ಲಿ ಸಂಚರಿಸುವ ಹಡಗುಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ.

ಟ್ರಂಪ್ ಸುದ್ದಿಗಾರರೊಂದಿಗೆ,"ಅವರು ಈಗ ಜಲಸಂಧಿಯನ್ನು ತಕ್ಷಣವೇ ತೆರೆಯಲು ಬಯಸುತ್ತಿದ್ದಾರೆ. ಏಕೆ ಗೊತ್ತೇ? ಅವರು ಸಂಕಷ್ಟದಲ್ಲಿದ್ದಾರೆ. ಏಕೆಂದರೆ ಅವರ ದೇಶಕ್ಕೆ ಹಣದ ಒಳಹರಿವು ಇಲ್ಲ. ಅವರು ತಮ್ಮ ಆದಾಯದ ಪ್ರಮುಖ ಮೂಲವಾಗಿ ಹೋರ್ಮುಜ್ ಜಲಸಂಧಿಯನ್ನು ಅವಲಂಬಿಸಿದ್ದಾರೆ. ಹೀಗಾಗಿ ಅವರು ತಾವೇ ತಮ್ಮನ್ನು ಸಂಕಷ್ಟಕ್ಕೆ ಸಿಲುಕಿಸಿಕೊಂಡಿದ್ದಾರೆ" ಎಂದು ಹೇಳಿದ್ದಾರೆ.

ಅಮೆರಿಕವು ಇದಕ್ಕೆ ಪ್ರತಿಕ್ರಿಯೆಯಾಗಿ, ತನ್ನ ಮಾತಿನಲ್ಲಿ "ಮಿಲಿಟರಿ ಇತಿಹಾಸದಲ್ಲೇ ಅತಿದೊಡ್ಡ ನಾಕಾಬಂದಿ" ಎಂದು ಕರೆಯಲಾದ ಕ್ರಮವನ್ನು ಕೈಗೊಂಡಿದೆ ಎಂದು ಟ್ರಂಪ್ ಹೇಳಿದ್ದಾರೆ. ಆದರೆ ಇತರ ದೇಶಗಳು ಜಲಮಾರ್ಗವನ್ನು ಬಳಸಲು ಅವಕಾಶ ನೀಡಲಾಗಿದೆ ಎಂದೂ ಅವರು ತಿಳಿಸಿದ್ದಾರೆ.

"ಅವರು ಜಲಸಂಧಿಯನ್ನು ಮುಚ್ಚಿ ಜಗತ್ತಿಗೆ ಸಮಸ್ಯೆ ಉಂಟುಮಾಡೋಣ ಎಂದುಕೊಂಡರು. ನಂತರ ನಾನು ಕ್ರಮ ಕೈಗೊಂಡು, ಮಿಲಿಟರಿ ಇತಿಹಾಸದಲ್ಲೇ ಅತಿದೊಡ್ಡ ನಾಕಾಬಂದಿಯನ್ನು ನಿರ್ಮಿಸಿದೆವು. ಅದು ಉಕ್ಕಿನ ಗೋಡೆಯಂತಿದೆ. ಈಗ ಅವರ ಬಳಿ ಹಣವಿಲ್ಲ. ಅವರು ಜಲಸಂಧಿಯನ್ನು ಮುಚ್ಚಲು ಬಯಸಿದ್ದರು. ಅದಕ್ಕೆ ನಾನು, 'ಸರಿ, ನಾವು ಅದನ್ನು ನಿಮ್ಮ ಮೇಲೆಯೇ ಮುಚ್ಚುತ್ತೇವೆ, ಆದರೆ ಉಳಿದ ಎಲ್ಲರಿಗೂ ಅದನ್ನು ಬಳಸಲು ಅವಕಾಶ ಇರುತ್ತದೆ' ಎಂದು ಹೇಳಿದೆ" ಎಂದು ಟ್ರಂಪ್ ಹೇಳಿದ್ದಾರೆ.

ಹೋರ್ಮುಜ್ ಜಲಸಂಧಿಯನ್ನು ಪುನಃ ತೆರೆಯುವ ಉದ್ದೇಶದಿಂದ ಇರಾನ್ ನೀಡಿದ್ದ ಏಳು ದಿನಗಳ ಕದನ ವಿರಾಮದ ಪ್ರಸ್ತಾವನೆಯನ್ನು ಟ್ರಂಪ್ ತಿರಸ್ಕರಿಸಿದ ಬಳಿಕ, ಅಮೆರಿಕ ಮತ್ತು ಇಸ್ರೇಲ್‌ನೊಂದಿಗಿನ ಸಂಘರ್ಷವನ್ನು ಪರಿಹರಿಸಲು ರಾಜತಾಂತ್ರಿಕ ಮಾತುಕತೆಯೇ ಏಕೈಕ ಮಾರ್ಗ ಎಂದು ಇರಾನ್ ಪುನರುಚ್ಚರಿಸಿದೆ.

## ಗಾಂಧೀಜಿ ಜಯಂತಿ ಅರ್ಥಪೂರ್ಣವಾಗಿ ಆಚರಿಸಲು ಸೂಚನೆ

ಧಾರವಾಡ,ಸೆ.27: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದಲ್ಲಿ ಅಕ್ಟೋಬರ 2 ರಂದು ಬೆಳಿಗ್ಗೆ 9 ಗಂಟೆಗೆ 157 ನೇ ಗಾಂಧಿ ಜಯಂತಿಯನ್ನು ಧಾರವಾಡ ಹೊಸ ಬಸ್ ನಿಲ್ದಾಣ ಹತ್ತಿರದ ಗಾಂಧಿ ಭವನದಲ್ಲಿ ಅರ್ಥಪೂರ್ಣವಾಗಿ ಆಚರಿಸಲು ಕ್ರಮವಹಿಸಬೇಕೆಂದು ಅಪರ ಜಿಲ್ಲಾಧಿಕಾರಿ ಗೀತಾ ಸಿ. ಡಿ. ಅವರು ಹೇಳಿದರು.

ಅವರು ಜಿಲ್ಲಾಧಿಕಾರಿಗಳ ಕಚೇ-ರಿಯ ಸಭಾಭವನದಲ್ಲಿ ಜರುಗಿದ ಮಹಾತ್ಮ ಗಾಂಧೀಜಿಯವರ 157 ನೇ ಜಯಂತಿ ಕಾರ್ಯಕ್ರಮದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ, ಮಾತನಾಡಿದರು.

ಗಾಂಧೀಜಿ ಜಯಂತಿ ಕಾರ್ಯಕ್ರಮವನ್ನು ನೂತನ ಗಾಂಧಿ ಭವನದಲ್ಲಿ ಆಚರಿಸಲು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಮಹಾನಗರ ಪಾಲಿಕೆ ಅಧಿಕಾರಿಗಳು ಗಾಂಧಿ ಭವನ ಹಾಗೂ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಲ್ಲಿರುವ ಗಾಂಧಿ ಪ್ರತಿಮೆ ಹಾಗೂ ಸುತ್ತಲಿನ ಪ್ರದೇಶದ ಸ್ವಚ್ಛತೆ ಕೈಗೊಳ್ಳಬೇಕು. ಗಾಂಧಿ ಜಯಂತಿಯಂದು ಗಾಂಧಿ ಭವನವನ್ನು ಅಲಂಕರಿಸಿ, ಆಕರ್ಷಣೀಯವಾಗಿ ಸಿದ್ಧಗೊಳಿಸಬೇಕೆಂದು ಪಾಲಿಕೆಯ ಅಧಿಕಾರಿಗಳಿಗೆ ಅವರು ಸೂಚಿಸಿದರು.

ರಜಾ ದಿನವಾಗಿರುವದರಿಂದ ಸಾರ್ವಜನಿಕರು, ವಿದ್ಯಾರ್ಥಿಗಳು, ಗಾಂಧಿ ವಿಚಾರ ಪ್ರಣೀತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಅಧಿಕಾರಿಗಳು ಕ್ರಮವಹಿಸಬೇಕೆಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಗಾಂಧಿ ಪ್ರೀಯ ಭಜನೆಗಳು, ಸರ್ವಧರ್ಮ ಪ್ರಾರ್ಥನೆ, ವಿಶೇಷ ಉಪನ್ಯಾಸವನ್ನು ಆಯೋಜಿಸಬೇಕು. ಈಗಾಗಲೇ ವಾರ್ತಾ ಇಲಾಖೆಯಿಂದ ಜಿಲ್ಲಾಮಟ್ಟದಲ್ಲಿ ಆಯೋಜಿಸಿದ್ದ ಬಾಪೂಜಿ ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಪ್ರೌಢಶಾಲಾ ವಿಭಾಗ, ಪಿಯು ಕಾಲೇಜು ವಿಭಾಗ ಮತ್ತು ಪದವಿ ಹಾಗೂ ಸ್ನಾತಕೊತ್ತರ ವಿಭಾಗದಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದಿರುವ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ವಿತರಣೆಗೆ ಕ್ರಮವಹಿಸಬೇಕೆಂದು ಅಧಿಕಾರಿಗಳಿಗೆ ಅವರು ತಿಳಿಸಿದರು.

ಗಾಂಧಿ ಭವನದಲ್ಲಿ ಮಹಾತ್ಮ ಗಾಂಧೀಜಿಯವರ ವಿಚಾರಧಾರೆಗಳನ್ನು, ತತ್ವಸಿದ್ಧಾಂತಗಳನ್ನು ಮತ್ತು ಅವರ ಜೀವನ ಚರಿತ್ರೆಯನ್ನು ಪ್ರತಿಬಿಂಬಿಸುವ ಹಾಗೂ ಮಾರ್ಗದರ್ಶನ ಮಾಡುವ ಕಾರ್ಯಕ್ರಮಗಳನ್ನು ಗಾಂಧೀಜಿ ಪ್ರಣೀತ ಸಂಘ-ಸಂಸ್ಥೆಗಳ, ಶಾಲಾ ಕಾಲೇಜುಗಳ ಸಹಯೋಗದಲ್ಲಿ ಆಯೋಜಿಸಲು ಸೂಚಿಸಲಾಗಿದೆ ಎಂದು ಅವರು ಹೇಳಿದರು.

# ಮಿಜ್ವಾನ್ ಫ್ಯಾಷನ್ ಶೋನಲ್ಲಿ ರ್‍ಯಾಂಪ್ ವಾಕ್ ಮಾಡಿದ ಆಲಿಯಾ-ವಿಕ್ಕಿ



ಮುಂಬೈನಲ್ಲಿ ನಡೆದ ಪ್ರಸಿದ್ಧ ವಿನ್ಯಾಸಕ ಮನೀಶ್ ಮಲ್ಹೋತ್ರಾ ಅವರ ಹದಿನೈದನೇ ಆವೃತ್ತಿಯ ಮಿಜ್ವಾನ್ ಕಲ್ಯಾಣ ಫ್ಯಾಷನ್ ಶೋನಲ್ಲಿ ಬಾಲಿವುಡ್ ನಟರಾದ ವಿಕ್ಕಿ ಕೌಶಲ್ ಮತ್ತು ಆಲಿಯಾ ಭಟ್ ಶೋಸ್ಟಾಪರ್ ಆಗಿ ಆಗಮಿಸಿ ರ್‍ಯಾಂಪ್ ವಾಕ್ ಮಾಡಿದರು. ತಾಜ್ ಲ್ಯಾಂಡ್ಸ್ ಎಂಡ್ ಹೋಟೆಲ್‌ನಲ್ಲಿ ಆಯೋಜಿಸಲಾಗಿದ್ದ ಈ ಸಮಾರಂಭದಲ್ಲಿ ಇಬ್ಬರೂ ತಮ್ಮ ರಾಜಮನೆತನದ ಉಡುಪುಗಳಲ್ಲಿ ಕಂಗೊಳಿಸಿದರು. ಈ ಮೂಲಕ ಸಂ-ಜಯ್ ಲೀಲಾ ಬನ್ಸಾಲಿ ನಿರ್ದೇಶನದ ಮುಂಬರುವ ಬಿಗ್ ಬಜೆಟ್ ಚಿತ್ರ ಲವ್ ಅಂಡ್ ವಾರ್‌ನಲ್ಲಿ ತಮ್ಮ ತೆರೆಯ ಮೇಲಿನ ಜೋಡಿಯ ಸಣ್ಣ ಝಲಕ್ ಅಭಿಮಾನಿಗಳಿಗೆ ತೋರಿಸಿದರು.

ಸಮಾರಂಭದಲ್ಲಿ ಆಲಿಯಾ ಭಟ್ ಚಿಕನ್‌ಕಾರಿ ಕಸೂತಿಯ ಐವರಿ ಬಣ್ಣದ ಸುಂದರ ಉಡುಪಿನಲ್ಲಿ ಹಾಗೂ ಶಿರದ ಮೇಲೆ ದುಪಟ್ಟಾ ಧರಿಸಿ, ಕುಂದನ್ ಆಭರಣಗಳೊಂದಿಗೆ ಅತ್ಯಂತ ವೈಭವದ ರೂಪದಲ್ಲಿ ಕಾಣಿಸಿಕೊಂಡರು. ನಟ ವಿಕ್ಕಿ ಕೌಶಲ್ ರಾಯಲ್ ಬ್ಲೂ ಬಣ್ಣದ ಶೇರ್ವಾನಿ ಧರಿಸಿ ಗಂಭೀರ ಹಾಗೂ ರಾಜಸೀಯ ಲುಕ್‌ನಲ್ಲಿ ರ್‍ಯಾಂಪ್ ಮೇಲಿಳಿದರು. ಇವರಿಬ್ಬರ ಅದ್ಭುತ ರ್‍ಯಾಂಪ್ ಕೆಮಿಸ್ಟ್ರಿಯ ಚಿತ್ರಗಳು ಹಾಗೂ ವೀಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ವೈರಲ್ ಆಗುತ್ತಿವೆ.

ವಿಶೇಷವೆಂದರೆ, ಈ ರ್‍ಯಾಂಪ್ ವಾಕ್ ಕಾರ್ಯಕ್ರಮ ನಡೆದ ಅದೇ ದಿನದಂದು ಲವ್ ಅಂಡ್ ವಾರ್ ಚಿತ್ರದ ನೂತನ ಪಾತ್ರಗಳ ಪೋಸ್ಟರ್‌ಗಳನ್ನು ಚಿತ್ರತಂಡ ಅಧಿಕೃತವಾಗಿ ಬಿಡುಗಡೆ ಮಾಡಿದೆ. ಇದಕ್ಕೂ ಮುನ್ನ ರಣಬೀರ್ ಕಪೂರ್ ಮತ್ತು ಆಲಿಯಾ ಭಟ್ ಅವರ ಫಸ್ಟ್ ಲುಕ್ ಪೋಸ್ಟರ್‌ಗಳು ಬಿಡುಗಡೆಯಾಗಿದ್ದವು. ಇದೀಗ ವಿಕ್ಕಿ ಕೌಶಲ್ ಅವರ ತೀವ್ರ ಹಾಗೂ ವಿಂಟೇಜ್ ಶೈಲಿಯ ಹೊಸ ಲುಕ್ ಪೋಸ್ಟರ್ ಬಿಡುಗಡೆಯಾಗಿದ್ದು, ಪ್ರೇಕ್ಷಕರಲ್ಲಿ ಸಿನಿಮಾದ ಮೇಲಿನ ಕುತೂಹಲವನ್ನು ಮತ್ತಷ್ಟು ಹೆಚ್ಚಿಸಿದೆ.

ಉತ್ತರ ಪ್ರದೇಶದ ಮಿಜ್ವಾನ್ ಗ್ರಾಮದ ಮಹಿಳಾ ಕುಶಲಕರ್ಮಿಗಳ ಕಲೆಗೆ ಜಾಗತಿಕ ವೇದಿಕೆ ಕಲ್ಪಿಸುವ ಉದ್ದೇಶದಿಂದ ಕೈಫಿ ಅಜ್ಮಿ ಅವರು ಸ್ಥಾಪಿಸಿದ ಮಿಜ್ವಾನ್ ವೆಲ್ಫೇರ್ ಸೊಸೈಟಿಗೆ ಬೆಂಬಲವಾಗಿ ಈ ಫ್ಯಾಷನ್ ಶೋ ನಡೆಯುತ್ತದೆ. ಸಂಜಯ್ ಲೀಲಾ ಬನ್ಸಾಲಿ ನಿರ್ಮಿಸಿ ನಿರ್ದೇಶಿಸುತ್ತಿರುವ ಲವ್ ಅಂಡ್ ವಾರ್ ಚಿತ್ರದಲ್ಲಿ ರಣಬೀರ್ ಕಪೂರ್, ಆಲಿಯಾ ಭಟ್ ಮತ್ತು ವಿಕ್ಕಿ ಕೌಶಲ್ ಪ್ರಮುಖ ಪಾತ್ರಗಳಲ್ಲಿ ನಟಿಸುತ್ತಿದ್ದು, ಈ ಚಿತ್ರವು ಎರಡು ಸಾವಿರದ ಇಪ್ಪತ್ತೇಳರ ಜನವರಿ ಇಪ್ಪತ್ತೊಂದರಂದು ಚಿತ್ರಮಂದಿರಗಳಲ್ಲಿ ತೆರೆಕಾಣಲಿದೆ.

# ಪಂಜಾಬ್‌ನ ಎಲ್ ಪಿಯು ನಲ್ಲಿ ಹಿಂಸಾಚಾರಕ್ಕೆ ತಿರುಗಿದ ವಿದ್ಯಾರ್ಥಿಗಳ ಪ್ರತಿಭಟನೆ

ಫಗ್ವಾರಾ,ಸೆ.27: ಪಂಜಾಬ್‌ನ ಲವ್ಲಿ ಪ್ರೊಫೆಷನಲ್ ಯೂನಿವರ್ಸಿಟಿ (ಎಲ್ ಪಿಯು)ಯಲ್ಲಿ ಶನಿವಾರ ತಡರಾತ್ರಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣಗೊಂಡಿತು. ವಿದ್ಯಾರ್ಥಿನಿಯೊಬ್ಬಳ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿದೆ ಅಥವಾ ಆಕೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂಬ ಪರಿಶೀಲನೆಯಾಗದ ಆರೋಪಗಳು ಹರಡಿದ ಬಳಿಕ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಆಸ್ತಿಪಾಸ್ತಿಗಳಿಗೆ ಹಾನಿ ಮಾಡಿದ್ದು, ಕೆಲವು ಕಟ್ಟಡಗಳ ಭಾಗಗಳಿಗೆ ಬೆಂಕಿ ಹಚ್ಚಿದ್ದಾರೆ.

ಈ ಆರೋಪಗಳು ತಪ್ಪು ತಿಳುವಳಿಕೆಯಿಂದ ಹುಟ್ಟಿಕೊಂಡಿರುವಂತೆ ಕಾಣುತ್ತದೆ ಎಂದು ಪೊಲೀಸರು ತಿಳಿಸಿದ್ದಾರೆ. ವಿಶ್ವವಿದ್ಯಾಲಯವೂ ಆರೋಪಗಳನ್ನು "ಸುಳ್ಳು, ಆಧಾರರಹಿತ ಮತ್ತು ಕಟ್ಟುಕಥೆ" ಎಂದು ತಳ್ಳಿಹಾಕಿದೆ.

ಸಾಮಾಜಿಕ ಮಾಧ್ಯಮ ಹಾಗೂ ಕ್ಯಾಂಪಸ್‌ನಲ್ಲಿ ವದಂತಿಗಳು ಹರಡಿದ ಹಿನ್ನೆಲೆಯಲ್ಲಿ ಸುಮಾರು 2,000 ವಿದ್ಯಾರ್ಥಿಗಳು ಬಾಲಕಿಯರ ಹಾಸ್ಟೆಲ್ ಸಮೀಪ ಜಮಾಯಿಸಿದರು. ಬಳಿಕ ಪ್ರತಿಭಟನೆ ತೀವ್ರಗೊಂಡು ವಿದ್ಯಾರ್ಥಿಗಳು ಹೆದ್ದಾರಿಯನ್ನು ಬಂದ್ ಮಾಡಿ ಸಂಚಾರಕ್ಕೆ ಅಡ್ಡಿಪಡಿಸಿದರು. ನಂತರ ವಿಶ್ವವಿದ್ಯಾಲಯದ ಆವರಣದೊಳಗೆ ನುಗ್ಗಿ ಕಿಟಕಿ ಗಾಜುಗಳನ್ನು ಒಡೆದು, ಇಟ್ಟಿಗೆಗಳು ಮತ್ತು ಹೂವಿನ ಕುಂಡಗಳನ್ನು ಎಸೆದು, ಕೆಲವು ಕಟ್ಟಡಗಳ ಭಾಗಗಳಿಗೆ ಬೆಂಕಿ ಹಚ್ಚಿದರು. ವಿಶ್ವವಿದ್ಯಾಲಯದ ಆವರಣದಲ್ಲಿ ಬೆಂಕಿ ಹೊತ್ತಿಕೊಂಡಿರುವುದು ಹಾಗೂ ಪ್ರತಿಭಟನೆಯ ಸಂದರ್ಭದಲ್ಲಿ ವ್ಯಕ್ತಿಯೊಬ್ಬರು ಯುದ್ಧವಿಮಾನ ಮಾದರಿಯ ಪ್ರತಿಕೃತಿಯ ಮೇಲೆ ಕುಳಿತಿರುವುದು ಕಂಡುಬರುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿದೆ.

ಕ್ಯಾಂಪಸ್‌ನ ಕೃಷಿ ವಿಭಾಗದ ಸಮೀಪ ನಾಲ್ಕೈದು ದಿನಗಳ ಹಿಂದೆ ಓರ್ವ ಮಹಿಳೆ ಆತ್ಮಹತ್ಯೆ ಮಾಡಿಕೊಂಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಆ ಘಟನೆಯ ವಿಡಿಯೊ ಕೂಡ ವೈರಲ್ ಆಗಿತ್ತು. ಆದರೆ, ಆಕೆಯ ಸಾವಿಗೂ ವಿದ್ಯಾರ್ಥಿಗಳ ನಡುವೆ ಹರಿದಾಡುತ್ತಿದ್ದ ಅತ್ಯಾಚಾರದ ಆರೋಪಕ್ಕೂ ಸಂಬಂಧವಿದೆ ಎಂಬುದಕ್ಕೆ ಯಾವುದೇ ದೂರು ದಾಖಲಾಗಿಲ್ಲ ಎಂದು ಪೊಲೀಸರು ಹೇಳಿದ್ದಾರೆ.

ಪೊಲೀಸರು ಸ್ಥಳಕ್ಕೆ ಧಾವಿಸಿ ಹೆದ್ದಾರಿಯನ್ನು ತೆರವುಗೊಳಿಸಿದ್ದು, ಇದೀಗ ಸಂಚಾರ ಪುನರಾರಂಭಗೊಂಡಿದೆ. ಪರಿಸ್ಥಿತಿಯನ್ನು ನಿಯಂತ್ರಣ-ಕ್ಕೆ ತರಲಾಗಿದೆ. ವಿದ್ಯಾರ್ಥಿಗಳು ಮತ್ತು ವಿಶ್ವವಿದ್ಯಾಲಯದ ಆಡಳಿತದ ನಡುವೆ ಮಾತುಕತೆಗಳು ನಡೆಯುತ್ತಿವೆ ಎಂದು ಕಪುರ್ತಲಾ ಜಿಲ್ಲೆಯ ಹಿರಿಯ ಪೊಲೀಸ್ ಅಧೀಕ್ಷಕ ಗೌರವ್ ತೂರಾ ತಿಳಿಸಿದ್ದಾರೆ.

## ಹಳೆಯ ತಳಿಯ ಬೀಜಗಳನ್ನು ಸಂರಕ್ಷಣೆ ಮಾಡುವುದು ಅವಶ್ಯ

ಧಾರವಾಡ,ಸೆ 27: ಕೃಷಿಯಲ್ಲಿ ತಲೆ ತಲಾಂತರದಿಂದ ಹಳೆಯ ತಳಿಗಳನ್ನು ಸಂರಕ್ಷಿಸಿಕೊಂಡು ಬರಲಾಗುತ್ತಿದೆ. ಹಿಂದಿನ ತಳಿಗಳನ್ನು ಸಂರಕ್ಷಿಸಿ ಕಾಪಾಡಬೇಕಿದೆ. ಆ ನಿಟ್ಟಿನಲ್ಲಿ ಹಳೆಯ ತಳಿಗಳ ಬೀಜಗಳನ್ನು ಸಂರಕ್ಷಣೆ ಮಾಡುವುದು ಅವಶ್ಯವಿದೆ ಎಂದು ಕೃಷಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಡಾ.ಆರ್.ಆರ್. ಹಂಚಿನಾಳ ಅವರು ಹೇಳಿದರು.

ಕೃಷಿ ವಿಶ್ವವಿದ್ಯಾಲಯದ ರೈತರ ಜ್ಞಾನಾಭಿವೃದ್ಧಿ ಕೇಂದ್ರದಲ್ಲಿ ಕೃಷಿ ಮೇಳ 2026 ರ ಅಂಗವಾಗಿ ಆಯೋಜಿಸಲಾಗಿದ್ದ ಬೀಜ ಮೇಳವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ಪೂರ್ವಜರ ಪ್ರಯತ್ನದಿಂದ ಹಳೆಯ ತಳಿಗಳನ್ನು ಬೆಳೆಯಲಾಗುತ್ತಿದೆ. ಹಳೆಯ ತಳಿಗಳು ಭೂಮಿಯ ಲವಣಾಂಶ ಹೀರಿಕೊಂಡು ಬೆಳೆಯುತ್ತವೆ. ಆದರೆ ಯಾವುದೇ ತರಹದ ರಾಸಾಯನಿಕ ಗೊಬ್ಬರವನ್ನು ಬಳಸುತ್ತಿರಲಿಲ್ಲ. ಸುಮಾರು 2 ಲಕ್ಷಕ್ಕೂ ಅಧಿಕ ಭತ್ತದ ತಳಿಗಳು ಇವೆ. ಬೀಜದ ಮಹತ್ವ ಹೇಳಿಕೊಡುವುದು ಬಹಳ ಮುಖ್ಯವಾಗಿದೆ. ಒಳ್ಳೆಯ ಫಲವತ್ತಾದ ಭೂಮಿಯಲ್ಲಿ ಬೀಜಗಳನ್ನು ಹಾಕಿದರೆ ಉತ್ತಮ ಇಳುವರಿಯನ್ನು ಪಡೆಯಬಹುದಾಗಿದೆ ಎಂದು ಅವರು ತಿಳಿಸಿದರು.

ಹಳೆಯ ತಳಿಯ ಬೀಜಗಳನ್ನು ಬಿತ್ತಿದರೆ, ಶೇ.18 ರಿಂದ 20 ರಷ್ಟು ಹೆಚ್ಚಿನ ಇಳುವರಿ ಪಡೆಯಬಹುದು. ಅಲ್ಲದೇ ರಸಗೊಬ್ಬರ, ಕೊಟ್ಟಿಗೆ ಗೊಬ್ಬರ ಬಳಸಿದರೆ ಇನ್ನೂ ಹೆಚ್ಚಿನ ಇಳುವರಿಯನ್ನು ಪಡೆಯಬಹುದಾಗಿದೆ. ಒಳ್ಳೆಯ ಆಹಾರದಿಂದ ಉತ್ತಮ ಸಮಾಜವನ್ನು ನಿರ್ಮಿಸಬಹುದು. ದೇಶಕ್ಕೆ ಮಾದರಿಯಾದ ಕೃಷಿ ವಿಶ್ವವಿದ್ಯಾಲಯವು ರೈತರೊಂದಿಗೆ ಬೆರೆತು ಮುನ್ನಡೆಯಬೇಕು ಎಂದರು.

ರೈತರ ಭಾಗಿತ್ವದಲ್ಲಿ ಬೀಜ ಉತ್ಪಾದನೆ ಮಾಡಿದರೆ ಎಲ್ಲರಿಗೂ ಅನುಕೂಲವಾಗಲಿದೆ. ಇಲ್ಲಿನ ಬೀಜಗಳು ರಾಜಸ್ಥಾನ, ಅಸ್ಸಾಂ ಸೇರಿದಂತೆ ಇಂಡೋನೇಷ್ಯಾ ದೇಶಕ್ಕೂ ರಫ್ತು ಮಾಡಲಾಗಿರುತ್ತದೆ. ರೈತರ ತಳಿಗಳಿಗೆ ಪೇಟೆಂಟ್ ನೀಡಲಾಗಿದೆ.

# ಆರೋಗ್ಯಕರ ಜೀವನಶೈಲಿ ರೂಢಿಸಿಕೊಳ್ಳಲು ಕರೆ



ಕೆ.ಆರ್.ಪುರ, ಸೆ.27- ಹೃದಯದ ಆರೋಗ್ಯವನ್ನು ಕಾಪಾಡಿಕೊಳ್ಳಲು ಆರೋಗ್ಯಕರ ಜೀವನಶೈಲಿಯನ್ನು ಪ್ರತಿದಿನದ ಬದುಕಿನ ಭಾಗವಾಗಿಸಿಕೊಳ್ಳಬೇಕು. ನಿಯಮಿತ ನಡಿಗೆ ಹಾಗೂ ದೈಹಿಕ ಚಟುವಟಿಕೆ, ಸಮತೋಲಿತ ಆಹಾರ, ಒತ್ತಡ ನಿಯಂತ್ರಣ ಮತ್ತು ನಿಯಮಿತ ಆರೋಗ್ಯ ತಪಾಸಣೆಗಳು ಹೃದಯದ ಆರೋಗ್ಯಕ್ಕೆ ಬಹಳ ಮುಖ್ಯ ಎಂದು ಭಾರತೀಯ ಅಂಧರ ಕ್ರಿಕೆಟ್ ತಂಡದ ಕೋಚ್ ಡಾ. ಪ್ಯಾಟ್ರಿಕ್ ರಾಜ್‌ಕುಮಾರ್ ಅವರು ಹೇಳಿದರು.

ವಿಶ್ವ ಹೃದಯ ದಿನದ ಅಂಗವಾಗಿ ಹೃದಯದ ಆರೋಗ್ಯದ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಮೆಡಿಕವರ್ ಆಸ್ಪತ್ರೆ ವಾಕಥಾನ್ ಗೆ ಚಾಲನೆ ನೀಡಿ ಮಾತನಾಡಿದರು.

ಕ್ರೀಡೆ ಮತ್ತು ದೈಹಿಕ ಚಟುವಟಿಕೆಗಳು ದೇಹವನ್ನು ಮಾತ್ರವಲ್ಲದೆ ಒಟ್ಟಾರೆ ಆರೋಗ್ಯವನ್ನು ಉತ್ತಮವಾಗಿಡಲು ಸಹಾಯ ಮಾಡುತ್ತವೆ. ಪ್ರತಿದಿನದ ಜೀವನದಲ್ಲಿ ನಡಿಗೆಯಂತಹ ಸರಳ ದೈಹಿಕ ಚಟುವಟಿಕೆಯನ್ನು ಅಳವಡಿಸಿಕೊಳ್ಳುವುದು ಪ್ರತಿಯೊಬ್ಬರಿಗೂ ಸಾಧ್ಯ. ಆರೋಗ್ಯಕರ ಹೃದಯಕ್ಕಾಗಿ ಜನರು ಸಕ್ರಿಯ ಜೀವನಶೈಲಿಯನ್ನು ರೂಢಿಸಿಕೊಳ್ಳಬೇಕು ಎಂದು ತಿಳಿಸಿದರು.

ಮೆಡಿಕವರ್ ಆಸ್ಪತ್ರೆಯ ಪ್ರಾದೇಶಿಕ ನಿರ್ದೇಶಕ ಸಿದ್ದರೆಡ್ಡಿ ಅವರು ಮಾತನಾಡಿ ವಾಕಥಾನ್ ಮೂಲಕ ಜನರಲ್ಲಿ ಹೃದಯದ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವುದರ ಜೊತೆಗೆ, ಪ್ರತಿಯೊಬ್ಬರೂ ತಮ್ಮ ಆರೋಗ್ಯಕ್ಕಾಗಿ ಸಕ್ರಿಯವಾಗಿ ಹೆಜ್ಜೆ ಇಡಬೇಕು ಎಂಬ ಸಂದೇಶವನ್ನು ನೀಡುತ್ತಿದ್ದೇವೆ," ಎಂದು ಹೇಳಿದರು.

" ಮೆಡಿಕವರ್ ಆಸ್ಪತ್ರೆಯ ಈ ವಾಕಥಾನ್ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ ಉತ್ತಮ ಪ್ರಯತ್ನವಾಗಿದೆ," ಎಂದು ಹೇಳಿದರು.

# ಗಣೇಶೋತ್ಸವ ಆಚರಣೆ ಶ್ಲಾಘನೀಯ



ಕೆ.ಆರ್.ಪುರ,ಸೆ.27-ಸಮಾಜಮುಖಿ ಕಾರ್ಯಗಳ ಮೂಲಕ ಗಣೇಶೋತ್ಸವ ಆಚರಣೆ ಮಾಡುವುದು ಶ್ಲಾಘನೀಯ ಎಂದು ಶಾಸಕ ಬಿ.ಎ.ಬಸವರಾಜ ಅವರು ತಿಳಿಸಿದರು.

ಕೆ.ಆರ್.ಪುರ ಕ್ಷೇತ್ರದ ನೆಲ್ಲೂರುಪುರದಲ್ಲಿ ರಾಮಲಕ್ಷ್ಮಣ ಅವರ ತಂಡದ ವತಿಯಿಂದ ಏರ್ಪಡಿಸಿದ್ದ ಗಣೇಶೋತ್ಸವದಲ್ಲಿ ಭಾಗವಹಿಸಿ ಮಾತನಾಡಿದರು.

ಬಾಲಗಂಗಾಧರ ತಿಲಕರು ಸಮೂಹಿಕ ಗಣೇಶೋತ್ಸವಕ್ಕೆ ಚಾಲನೆ ನೀಡಿದ್ದು, ಅಂದಿನಿಂದಲೂ ಗಣೇಶೋತ್ಸವಗಳು ಸಮಾಜಮುಖಿಯಾಗಿ ಸಾಗುತ್ತಿರುವುದು ಸಂತಸದ ವಿಷಯ ಎಂದು ನುಡಿದರು.

ಗಣೇಶೋತ್ಸವದಲ್ಲಿ ಅನ್ನಸಂತರ್ಪಣೆ, ಸಸಿಗಳ ವಿತರಣೆ, ಮಹಿಳೆಯರಿಗೆ ಸೀರೆಗಳ ವಿತರಣೆ ಸೇರಿದಂತೆ ಹಲವು ಜನಪರ ಕಾರ್ಯಕ್ರಮಗಳನ್ನು ಕ್ಷೇತ್ರದಲ್ಲಿ ಮಾಡಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಆಯೋಜ-ಕರಾದ ರಾಮಲಕ್ಷ್ಮಣ ಅವರ ತಂಡದ ಸದಸ್ಯರು, ಮಾಜಿ ಪಾಲಿಕೆ ಸದಸ್ಯ ಸಿದ್ದಲಿಂಗಯ್ಯ, ಮಂಡಲ ಪ್ರಧಾನಕಾರ್ಯದರ್ಶಿ ಮಾರ್ಕಶ್ ರಮೇಶ್ ಸೇರಿದಂತೆ ಗ್ರಾಮಸ್ಥರು ಸದಸ್ಯರು ಇದ್ದರು.

## ಕೆರೆ ಬಳಿ ಎಂಜಿನಿಯರಿಂಗ್ ವಿದ್ಯಾರ್ಥಿ : ಪೊಲೀಸರ ಎಂಟ್ರಿ ಏನಿದು ಕೇಸ್

ಶಿವಮೊಗ್ಗ, ಸೆ.27- ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಮನೆಯವರಿಗೆ ತಿಳಿಸಿ ಕೆರೆಯ ಬಳಿ ಆಗಮಿಸಿದ್ದ ಎಂಜಿನಿಯರಿಂಗ್ ವಿದ್ಯಾರ್ಥಿಯೋರ್ವನನ್ನು, ಶಿವಮೊಗ್ಗದ ವಿನೋಬನಗರ ಠಾಣೆ ಪೊಲೀಸರು ಸಿನಿಮೀಯ ಶೈಲಿಯಲ್ಲಿ ಪತ್ತೆ ಮಾಡಿ ರಕ್ಷಿಸಿದ ಘಟನೆ ನಡೆದಿದೆ.

ಏನಿದು ಘಟನೆ ಶಿವಮೊಗ್ಗದ ಬಡಾವಣೆಯೊಂದರ ನಿವಾಸಿಯಾದ 20 ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿಯೋರ್ವ, 'ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದ್ದೇನೆ. ಕ್ಷಮಿಸಿ' ಎಂದು ತನ್ನ ಕುಟುಂಬದವರಿಗೆ ಮೊಬೈಲ್ ಫೋನ್ ಮೂಲಕ ಕರೆ ಮಾಡಿ ತಿಳಿಸಿದ್ದ.

ಗಾಬರಿಗೊಂಡ ಕುಟುಂಬದವರು ಈ ಸಂಗತಿಯನ್ನು, ವಿನೋಬನಗರ ಠಾಣೆ ಇನ್ಸ್‌ಪೆಕ್ಟರ್ ಸಂತೋಷ್ ಕುಮಾರ್ ಅವರಿಗೆ ತಿಳಿಸಿದ್ದರು. ತಕ್ಷಣವೇ ಕಾರ್ಯಪ್ರವೃತ್ತರಾದ ಸಂತೋಷ್ ಕುಮಾರ್ ಅವರು, ತಮ್ಮ ಸಿಬ್ಬಂದಿಗಳ ಮೂಲಕ ವಿದ್ಯಾರ್ಥಿಯ ಪತ್ತೆಗೆ ಕ್ರಮಕೈಗೊಂಡಿದ್ದರು.

ಈ ನಡುವೆ ವಿನೋಬನಗರ ಪೊಲೀಸ್ ಠಾಣೆ ಸಿಬ್ಬಂದಿ ಯೋಗೇಶ್ ಹಾಗೂ ಎಸ್ಪಿ ಕಚೇರಿ ಸಿಬ್ಬಂದಿ ಗುರುರಾಜ್ ರವರು ವಿದ್ಯಾರ್ಥಿಯು ಶಿವಮೊಗ್ಗದ ಹೊರವಲಯ ಸೋಮಿನಕೊಪ್ಪದ ಕೆರೆ ಬಳಿಯಿರುವುದನ್ನು ಪತ್ತೆ ಹಚ್ಚಿದ್ದರು.

ಸ್ಥಳೀಯ ನಿವಾಸಿಗಳ ಸಹಕಾರದೊಂದಿಗೆ ಕೆರೆ ಬಳಿಯಿದ್ದ ವಿದ್ಯಾರ್ಥಿಯನ್ನು ಪೊಲೀಸರು ರಕ್ಷಿಸಿ ಕರೆತಂದಿದ್ದಾರೆ. ನಂತರ ಅವರ ಕುಟುಂಬದವರೊಂದಿಗೆ ಕಳುಹಿಸಿ ಕೊಟ್ಟಿದ್ದಾರೆ. ಉತ್ತಮ ಕರ್ತವ್ಯ ನಿರ್ವಹಿಸಿದ ಇನ್ಸ್‌ಪೆಕ್ಟರ್ ಸಂತೋಷ್ ಕುಮಾರ್ ಹಾಗೂ ಸಿಬ್ಬಂದಿಗಳಾದ ಯೋಗೇಶ್ ಮತ್ತು ಗುರುರಾಜ್ ಅವರಿಗೆ ಎಸ್ಪಿ ನಿಖಿಲ್ ಬಿ ಅವರು ಪ್ರಶಂಸೆ ವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದ್ದಾರೆ.

# ಸಾರ್ವಜನಿಕರ ಮನೆಬಾಗಿಲಿಗೆ ಆಡಳಿತ : ಸ್ಥಳದಲ್ಲೇ ಅಹವಾಲು ಸ್ವೀಕಾರ



ಶಿವಮೊಗ್ಗ,ಸೆ.27-ಸಾರ್ವಜನಿಕರಿಗೆ ಸರ್ಕಾರದ ಯೋಜನೆಗಳು ಹಾಗೂ ಸೇವೆಗಳನ್ನು ಕಾಲಮಿತಿಯಲ್ಲಿ ತಲುಪಿಸುವುದು ಆಡಳಿತದ ಪ್ರಾಥಮಿಕ ಕರ್ತವ್ಯ. ಜನಸಾಮಾನ್ಯರು ಸಣ್ಣಪುಟ್ಟ ಕೆಲಸಗಳು ಹಾಗೂ ದಾಖಲೆಗಳಿಗಾಗಿ ಸರ್ಕಾರಿ ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸಿ, 'ಆಡಳಿತವೇ ಜನರ ಮನೆ ಬಾಗಿಲಿಗೆ' ತಲುಪಬೇಕು ಎಂಬ ಉದ್ದೇಶದಿಂದ ಈ "ಪ್ರಜಾಸೇವಾ ಆಂದೋಲನ" ಸಭೆ ಏರ್ಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಶಿವಮೊಗ್ಗ ಮಹಾನಗರಪಾಲಿಕೆಯ ಜಂಟಿ ಸಹಯೋಗದಲ್ಲಿ ಮಹಾನಗರಪಾಲಿಕೆ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಶಿವಮೊಗ್ಗ ತಾಲೂಕಿನ ಕಸಬಾ ಹೋಬಳಿ ಮಟ್ಟದ "ಪ್ರಜಾಸೇವಾ ಆಂದೋಲನ ಸಭೆ"ಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಾರ್ವಜನಿಕರಿಂದ ಸ್ವೀಕರಿಸಲಾಗುವ ಅರ್ಜಿಗಳನ್ನು ನಿರ್ಲಕ್ಷಿಸದೆ, ನಿಯಮಾವಳಿಗಳಂತೆ ಸಾಧ್ಯವಾದಷ್ಟು ಅರ್ಜಿಗಳನ್ನು ಸ್ಥಳದಲ್ಲೇ ಇತ್ಯರ್ಥಪಡಿಸಬೇಕು. ತಕ್ಷಣಕ್ಕೆ ಪರಿಹರಿಸಲಾಗದ ಹಾಗೂ ಹೆಚ್ಚಿನ ಪರಿಶೀಲನೆ ಅಗತ್ಯವಿರುವ ಅರ್ಜಿಗಳಿಗೆ ಕಾಲಮಿತಿ ನಿಗದಿಪಡಿಸಿ, ನಿಗದಿತ ಸಮಯದೊಳಗೆ ಅರ್ಜಿದಾರರಿಗೆ ಸೂಕ್ತ ಉತ್ತರ ಅಥವಾ ಪರಿಹಾರ ಒದಗಿಸಬೇಕು ಎಂದು ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಅಲ್ಲದೆ, ವಿವಿಧ ಇಲಾಖೆಗಳು ಪರಸ್ಪರ ಸಮನ್ವಯತೆ ಸಾಧಿಸಿ ಸಾರ್ವಜನಿಕರ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಸೂಚಿಸಿದರು.

ಸಭೆಯಲ್ಲಿ ಮಾತನಾಡಿದ ಪಾಲಿಕೆ ಆಯುಕ್ತರಾದ ಮಾಯಣ್ಣಗೌಡ, "ವಿಳಂಬವಾಗದಂತೆ ತ್ವರಿತವಾಗಿ ಹಾಗೂ ಸಕಾಲದಲ್ಲಿ ಸೇವೆ ನೀಡಿ ಜನರ ಜೀವನಮಟ್ಟ ಸುಧಾರಣೆ ಮಾಡುವುದು ಈ ಆಂದೋಲನದ ಮುಖ್ಯ ಉದ್ದೇಶ. ಹೋಬಳಿ, ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಈ ಸಭೆಗಳು ನಡೆಯುತ್ತಿದ್ದು, ಇಂದು ಕಸಬಾ ಹೋಬಳಿ ಮಟ್ಟದ ಸಭೆಯಲ್ಲಿ ಸಾರ್ವಜನಿಕರ ಅಹವಾಲುಗಳನ್ನು ಸ್ಥಳದಲ್ಲೇ ಪರಿಹರಿಸಲು ಪ್ರಯತ್ನಿಸಲಾಗುತ್ತಿದೆ" ಎಂದರು.

ಸಾರ್ವಜನಿಕರು ಮಂಡಿಸಿದ ಪ್ರಮುಖ ಸಮಸ್ಯೆಗಳು ಹಾಗೂ ನೀಡಿದ ಸೂಚನೆಗಳು:

ಖಾಲಿ ಜಾಗ, ಪಾರ್ಕ್ ಒತ್ತುವರಿ ಮತ್ತು ಮೂಲಭೂತ ಸೌಕರ್ಯ: ಮಂಜುನಾಥ ಬಡಾವಣೆಯ (ವಾರ್ಡ್ 27) ಸುವರ್ಣಾ ನಾಗರಾಜ್ ಅವರು, ಬಡಾವಣೆಯ ಖಾಲಿ ಸರ್ಕಾರಿ ಜಾಗದಲ್ಲಿ ಮರಳು ಇತ್ಯಾದಿ ವಸ್ತುಗಳನ್ನು ಹಾಕುತ್ತಿರುವುದನ್ನು ತಡೆಯಲು 'ಸರ್ಕಾರಿ ಜಾಗ'ವೆಂದು ಫಲಕ ಅಳವಡಿಸಲು, ವಾರ್ಡ್ ನ ಪಾರ್ಕ್ ಒತ್ತುವರಿ ಮಾಡಲಾಗಿದ್ದು ಇದನ್ನು ತೆರವುಗೊಳಿಸಬೇಕು. ಜಲಮಂಡಳಿ ಕೆಲಸಗಳಿಂದ ರಸ್ತೆ ಗುಂಡಿ ಬಿದ್ದಿರುವುದು, ಬೀದಿ ದೀಪ ವ್ಯವಸ್ಥೆ ಇಲ್ಲದಿರುವುದು, ಯುಜಿಡಿ ನೀರು ಚರಂಡಿಗೆ ಹರಿಯುವುದು ಹಾಗೂ ಮೆಸ್ಕಾಂ ಸಂಪರ್ಕದಲ್ಲಿ ಮಧ್ಯವರ್ತಿಗಳ ಹಾವಳಿ ಕುರಿತು ಗಮನಸೆಳೆದರು. ಈ ವೇಳೆ ಜಿಲ್ಲಾಧಿಕಾರಿಗಳು, ಸಾರ್ವಜನಿಕ ಸ್ಪಂದನೆಗೆ ಅಧಿಕಾರಿಗಳು ಉದಾಸೀನ ತೋರಬಾರದೆಂದು ಜಲಮಂಡಳಿ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದರು. ಇಂತಹ ವರ್ತನೆ ಪುನರಾವರ್ತನೆಯಾದರೆ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದರು.

ಅಪಾಯಕಾರಿ ಮರಗಳ ಟ್ರಿಮ್ಮಿಂಗ್: ಗಾಡಿಕೊಪ್ಪದ ಮಧುಸೂದನ್ ಹಾಗೂ ಸಾರ್ವಜನಿಕರು ಶಾಲೆಗಳ ಬಳಿ ಮತ್ತು ನಗರ ಮಧ್ಯಭಾಗದಲ್ಲಿ ಅಪಾಯಕಾರಿ ಮರಗಳ ರೆಂಬೆಗಳನ್ನು ಕತ್ತರಿಸುವಂತೆ (ಟ್ರಿಮ್) ಹಲವು ಬಾರಿ ಮನವಿ ಮಾಡಿದರೂ ಶಂಕರ ಅರಣ್ಯ ವಲಯ ಅಧಿಕಾರಿಗಳು ಸ್ಪಂದಿಸಿಲ್ಲ ಎಂದು ದೂರಿದರು. ಇದಕ್ಕೆ ಡಿಸಿಯವರು, ಕೂಡಲೇ ಮರದ ಕೊಂಬೆಗಳನ್ನು ಟ್ರಿಮ್ ಮಾಡಲು ಸೂಚಿಸಿ, ಭವಿಷ್ಯದಲ್ಲಿ ಇದರಿಂದ ಏನಾದರೂ ಅಪಾಯ ಸಂಭವಿಸಿದರೆ ಸಂಬಂಧಪಟ್ಟವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸುವುದಾಗಿ ಎಚ್ಚರಿಸಿದರು.

ಇಲಾಖೆಗಳ ನಡುವಿನ ಸಮನ್ವಯತೆ ಮತ್ತು ಇ-ಕೆವೈಸಿ ಸಮಸ್ಯೆ: ಬಸವನಗುಡಿಯ ರವಿಪ್ರಸಾದ್ ಮಾತನಾಡಿ, ಕೆಇಬಿ ಕಂಬ ತೆರವು, ಬೀದಿ ದೀಪಗಳ ಅಭಾವ, ಜಯನಗರ-ಬಸವನಗುಡಿ ಭಾಗದಲ್ಲಿ ಕೇಬಲ್ ಡ್ಯಾಮೇಜ್/ಬ್ಲಾಸ್ಟ್ ಸಮಸ್ಯೆ ಹಾಗೂ ವಿವಿಧ ಇಲಾಖೆಗಳ ನಡುವೆ ಸಮನ್ವಯತೆಯ ಕೊರತೆಯನ್ನು ಪ್ರಸ್ತಾಪಿಸಿದರು. ಜೊತೆಗೆ, ಹಿರಿಯ ನಾಗರಿಕರಿಗೆ ಪಡಿತರ ಚೀಟಿ ಇ-ಕೆವೈಸಿ ಮಾಡಿಸಲು ಆಗುತ್ತಿರುವ ತೊಂದರೆಗಳನ್ನು ವಿವರಿಸಿದರು. ಜಿಲ್ಲಾಧಿಕಾರಿಗಳು ಈ ಬಗ್ಗೆ ಇಲಾಖೆಗಳ ಸಮನ್ವಯತೆ ಹಾಗೂ ಇ-ಕೆವೈಸಿ ಸರಳೀಕರಣಕ್ಕೆ ಕ್ರಮ ವಹಿಸುವುದಾಗಿ ತಿಳಿಸಿದರು.

ಆರೋಗ್ಯ, ಶೌಚಾಲಯ ಮತ್ತು ಮೂಲಸೌಕರ್ಯದ ಕೊರತೆ: ಬಾಪೂಜಿನಗರ: ನೂರುಲ್ಲಾ ಅವರು ಚರಂಡಿ/ಮೋರಿ ಮೇಲೆ ಶೌಚಾಲಯ ನಿರ್ಮಿಸಲಾಗಿದೆ ಹಾಗೂ ತರಕಾರಿ ಮಾರಾಟ ಮಾಡುತ್ತಿರುವ ಬಗ್ಗೆ ದೂರಿದರು.

## ಟಿಟಿ ಪಲ್ಟಿ 10 ಮಂದಿಗೆ ಗಾಯ

ಚಿತ್ರದುರ್ಗ,ಸೆ.27-ಮಂತ್ರಾಲಯಕ್ಕೆ ತೆರಳುತ್ತಿದ್ದ ಟಿಟಿ ವಾಹನ ಚಾಲಕನ ನಿಯಂತ್ರಣ ತಪ್ಪಿ ಡಿವೈಡರ್‌ಗೆ ಡಿಕ್ಕಿ ಹೊಡೆದು ಪಲ್ಟಿಯಾಗಿ 10 ಕ್ಕೂ ಹೆಚ್ಚು ಮಂದಿ ಗಾಯಗೊಂಡಿರುವ ಘಟನೆ ಚಳ್ಳಕೆರೆ ತಾಲೂಕಿನ ಕೋಡಿಹಳ್ಳಿ ಗೇಟ್ ಬಳಿ ನಡೆದಿದೆ.

ಅಪಘಾತದಲ್ಲಿ ಗಾಯಗೊಂಡಿರುವ 10ಕ್ಕೂ ಹೆಚ್ಚು ಮಂದಿಯನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ.

ಚಾಲಕನ ನಿಯಂತ್ರಣ ತಪ್ಪಿದ ಪರಿಣಾಮ ವಾಹನ ಡಿವೈಡರ್‌ಗೆ ಡಿಕ್ಕಿ ಹೊಡೆದು ಪಲ್ಟಿಯಾಗಿದೆ. ಗಾಯಾಳುಗಳನ್ನು ಕೂಡಲೇ ಚಳ್ಳಕೆರೆ ತಾಲೂಕು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ನೀಡಲಾಗುತ್ತಿದೆ.

ಘಟನೆ ಕುರಿತು ಚಳ್ಳಕೆರೆ ಪೊಲೀಸರು ಮಾಹಿತಿ ಪಡೆದು ಮುಂದಿನ ಕ್ರಮ ಕೈಗೊಂಡಿದ್ದಾರೆ.

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ-ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಆದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

# ಭಾರತ-ವೆಸ್ಟ್ ಇಂಡೀಸ್ ಮೊದಲ ಏಕದಿನ ಪಂದ್ಯ ಇಂದು

## ಹೊಸ ದಾಖಲೆಗಳ ಹೊಸ್ತಿಲಲ್ಲಿ ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ



ತಿರುವನಂತಪುರಂ,ಸೆ.27-ಭಾರತ ಮತ್ತು ವೆಸ್ಟ್ ಇಂಡೀಸ್ ನಡುವಿನ ಮೂರು ಪಂದ್ಯಗಳ ಏಕದಿನ ಸರಣಿಯ ಮೊದಲ ಪಂದ್ಯ ಇಂದು ತಿರುವನಂತಪುರದ ಗ್ರೀನ್‌ಫೀಲ್ಡ್ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯಲಿದ್ದು, ಪಂದ್ಯವು ಭಾರತೀಯ ಕಾಲಮಾನ ಮಧ್ಯಾಹ್ನ 2:00 ಗಂಟೆಗೆ ಆರಂಭವಾಗಲಿದೆ. ಈ ವರ್ಷ ನ್ಯೂಜಿಲೆಂಡ್ ಮತ್ತು ಇಂಗ್ಲೆಂಡ್ ವಿರುದ್ಧದ ಸರಣಿ ಸೋಲು ಕಂಡಿದ್ದ ಭಾರತ, ಅಫ್ಘಾನಿಸ್ತಾನ ವಿರುದ್ಧ ಮಾತ್ರ ಗೆಲುವು ಸಾಧಿಸಿತ್ತು. ಹೀಗಾಗಿ ಈ ಸರಣಿಯು ಭಾರತ ತಂಡಕ್ಕೆ ಅತ್ಯಂತ ಪ್ರಮುಖವೆನಿಸಿದೆ.

ಈ ಪಂದ್ಯದಲ್ಲಿ ಪ್ರಮುಖ ದಾಖಲೆಗಳು ರೂಪುಗೊಳ್ಳುವ ಸಾಧ್ಯತೆಯಿದ್ದು, ವಿರಾಟ್ ಕೊಹ್ಲಿ ಏಕದಿನ ಕ್ರಿಕೆಟ್‌ನಲ್ಲಿ 15,000 ರನ್‌ಗಳ ಗಡಿ ದಾಟಲು ಇನ್ನು ಕೇವಲ 59 ರನ್‌ಗಳ ಅಗತ್ಯವಿದೆ. ಅವರು 302 ಇನ್ನಿಂಗ್ಸ್‌ಗಳಲ್ಲಿ 14,941 ರನ್ ಗಳಿಸಿದ್ದು, ಈ ಮೈಲಿಗಲ್ಲನ್ನು ತಲುಪಿದರೆ 2007 ರಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ 377 ಇನ್ನಿಂಗ್ಸ್‌ಗಳಲ್ಲಿ 15,000 ರನ್ ಪೂರೈಸಿದ್ದ ಸಚಿನ್ ತೆಂಡೂಲ್ಕರ್ ಅವರ ಸಾರ್ವಕಾಲಿಕ ದಾಖಲೆಯನ್ನು ಮುರಿಯಲಿದ್ದಾರೆ. ವೆಸ್ಟ್ ಇಂಡೀಸ್ ವಿರುದ್ಧ 43 ಪಂದ್ಯಗಳಲ್ಲಿ 2,261 ರನ್ ಹಾಗೂ 9 ಶತಕ ಗಳಿಸಿರುವ ಕೊಹ್ಲಿ, ಇನ್ನೊಂದು ಶತಕ ಬಾರಿಸಿದರೆ ಎರಡು ವಿಭಿನ್ನ ತಂಡಗಳ ವಿರುದ್ಧ ತಲಾ 10 ಶತಕ ಸಿಡಿಸಿದ ವಿಶ್ವದ ಮೊದಲ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಲಿದ್ದಾರೆ. ಅವರು ಈಗಾಗಲೇ ಶ್ರೀಲಂಕಾ ವಿರುದ್ಧ ಈ ಸಾಧನೆ ಮಾಡಿದ್ದಾರೆ. 2018 ರಲ್ಲಿ ವಿಶಾಖಪಟ್ಟಣದಲ್ಲಿ ಕ್ಯಾರಿಬಿಯನ್ ಪಡೆ ವಿರುದ್ಧ 129 ಎಸೆತಗಳಲ್ಲಿ ಅಜೇಯ 157 ರನ್ ಗಳಿಸಿದ್ದಾಗ ಕೊಹ್ಲಿ ಕೇವಲ 205 ಇನ್ನಿಂಗ್ಸ್‌ಗಳಲ್ಲಿ 10,000 ರನ್ ಪೂರೈಸಿ, ಸಚಿನ್ (259 ಇನ್ನಿಂಗ್ಸ್) ಅವರ ದಾಖಲೆಯನ್ನು ತಲೆಕೆಳಗು ಮಾಡಿದ್ದರು.

ಇನ್ನೊಂದೆಡೆ, ರೋಹಿತ್ ಶರ್ಮಾ ಭಾರತದ ಆರಂಭಿಕ ಆಟಗಾರನಾಗಿ ತಮ್ಮ 200 ನೇ ಇನ್ನಿಂಗ್ಸ್ ಆಡಲು ಸಜ್ಜಾಗಿದ್ದಾರೆ. ಅವರು ಈವರೆಗೆ ಆರಂಭಿಕರಾಗಿ 199 ಇನ್ನಿಂಗ್ಸ್‌ಗಳಲ್ಲಿ 54.50 ಸರಾಸರಿ ಹಾಗೂ 96.39 ಸ್ಟ್ರೈಕ್ ರೇಟ್‌ನೊಂದಿಗೆ 32 ಶತಕ ಮತ್ತು 49 ಅರ್ಧಶತಕ ಒಳಗೊಂಡಂತೆ 9,865 ರನ್ ಕಲೆಹಾಕಿದ್ದಾರೆ.

ಇತ್ತಂಡಗಳ ಮುಖಾಮುಖಿ ಇತಿಹಾಸವನ್ನು ಗಮನಿಸಿದರೆ, ಇದುವರೆಗೆ ಆಡಿರುವ 142 ಏಕದಿನ ಪಂದ್ಯಗಳಲ್ಲಿ ಭಾರತ 72 ಹಾಗೂ ವೆಸ್ಟ್ ಇಂಡೀಸ್ 64 ಪಂದ್ಯಗಳಲ್ಲಿ ಗೆಲುವು ಸಾಧಿಸಿದ್ದು, 6 ಪಂದ್ಯಗಳು ಡ್ರಾ ಅಥವಾ ಟೈನಲ್ಲಿ ಅಂತ್ಯಗೊಂಡಿವೆ. ವೆಸ್ಟ್ ಇಂಡೀಸ್ ತಂಡವು ಭಾರತದ ವಿರುದ್ಧ ಕೊನೆಯ ಬಾರಿಗೆ 2006 ರಲ್ಲಿ ದ್ವಿಪಕ್ಷೀಯ ಏಕದಿನ ಸರಣಿ ಗೆದ್ದಿದ್ದರೆ, ಭಾರತವು ಆ ನಂತರದ 13 ಸರಣಿಗಳನ್ನು ತನ್ನದಾಗಿಸಿಕೊಂಡಿದೆ. ಅಲ್ಲದೆ ಕ್ಯಾರಿಬಿಯನ್ ಪಡೆ ಭಾರತದ ಮಣ್ಣಿನಲ್ಲಿ ಕೊನೆಯ ಬಾರಿಗೆ ಸರಣಿ ಗೆದ್ದದ್ದು 2002 ರಲ್ಲಿ.

ತಂಡದ ಸಂಯೋಜನೆಯ ವಿಚಾರಕ್ಕೆ ಬಂದರೆ, ಭಾರತಕ್ಕೆ 4 ನೇ ಕ್ರಮಾಂಕ ಹಾಗೂ ಬೌಲಿಂಗ್ ವಿಭಾಗ ಪ್ರಮುಖ ಸವಾಲಾಗಿದೆ. ಶ್ರೇಯಸ್ ಅಯ್ಯರ್ ಮತ್ತು ಅಕ್ಷರ್ ಪಟೇಲ್ ಏಷ್ಯನ್ ಕ್ರೀಡಾಕೂಟದ ಟಿ20 ತಂಡದಲ್ಲಿರುವುದರಿಂದ, ರುತುರಾಜ್ ಗಾಯಕ್ವಾಡ್ 4 ನೇ ಕ್ರಮಾಂಕದಲ್ಲಿ ಕಣಕ್ಕಿಳಿಯುವ ಭರವಸೆ ಮೂಡಿಸಿದ್ದಾರೆ. ಹಾರ್ದಿಕ್ ಪಾಂಡ್ಯ ಮತ್ತು ಜಸ್ಪ್ರೀತ್ ಬುಮ್ರಾ ಗೈರುಹಾಜರಿಯಲ್ಲಿ ನಿತೀಶ್ ಕುಮಾರ್ ರೆಡ್ಡಿಗೆ 10 ಓವರ್ ಬೌಲಿಂಗ್ ಜವಾಬ್ದಾರಿ ಸಿಗಬಹುದು, ಹಾಗೆಯೇ ಬ್ಯಾಟಿಂಗ್‌ಗೆ ಆಳ ತರಲು ನಮನ್ ಧೀರ್‌ಗೆ ಚೊಚ್ಚಲ ಪ್ರವೇಶದ ಅವಕಾಶವಿದೆ. ಬೌಲಿಂಗ್ ಆಯ್ಕೆಗಳಾಗಿ ಗುರ್ನೂರ್ ಬ್ರಾರ್ ಮತ್ತು ಆಕಿಬ್ ನಬಿ ತಂಡದಲ್ಲಿದ್ದಾರೆ. ಅಭ್ಯಾಸದ ವೇಳೆ ಮೊಹಮ್ಮದ್ ಸಿರಾಜ್ ಬೌಲಿಂಗ್‌ನಲ್ಲಿ ಶುಭ್‌ಮನ್ ಗಿಲ್ ಮೊಣಕೈಗೆ ಪೆಟ್ಟಾಗಿ ಐಸ್ ಪ್ಯಾಕ್ ಧರಿಸಿದ್ದರೂ, ಅವರನ್ನು ಫಿಟ್ ಎಂದು ಘೋಷಿಸಲಾಗಿದೆ. ಅಗತ್ಯ ಬಿದ್ದರೆ ಯಶಸ್ವಿ ಜೈಸ್ವಾಲ್ ಬ್ಯಾಕಪ್ ಓಪನರ್ ಆಗಿದ್ದಾರೆ. ಗಿಲ್ ಈ ವರ್ಷ 9 ಪಂದ್ಯಗಳಲ್ಲಿ 110.65 ಸ್ಟ್ರೈಕ್ ರೇಟ್‌ನಲ್ಲಿ 561 ರನ್ ಗಳಿಸಿದ್ದರೆ, ಪ್ರಸಿದ್ಧ್ ಕೃಷ್ಣ 13 ವಿಕೆಟ್ ಪಡೆದಿದ್ದಾರೆ.

ಗ್ರೀನ್‌ಫೀಲ್ಡ್ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಇದುವರೆಗೆ ಎರಡು ಏಕದಿನ ಪಂದ್ಯಗಳು ನಡೆದಿದ್ದು, ವೇಗಿಗಳ ಸರಾಸರಿ 25.35 ಆಗಿದೆ. 2018 ರಲ್ಲಿ ಇದೇ ಮೈದಾನದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ರವೀಂದ್ರ ಜಡೇಜಾ ನಾಲ್ಕು ವಿಕೆಟ್ ಪಡೆದು ಎದುರಾಳಿಯನ್ನು 104 ರನ್‌ಗಳಿಗೆ ಆಲೌಟ್ ಮಾಡಿದ್ದರು. ಶುಕ್ರವಾರ ಅಭ್ಯಾಸದ ವೇಳೆ ಮಳೆಯಾಗಿದ್ದರೂ, ಪಂದ್ಯದ ದಿನ ವಾತಾವರಣವು ಬಿಸಿ ಮತ್ತು ಆರ್ದ್ರತೆಯಿಂದ ಕೂಡಿದ್ದು ಮಳೆಯ ಬೆದರಿಕೆ ಇಲ್ಲ ಎಂದು ತಿಳಿಸಲಾಗಿದೆ.

**ಸಂಭಾವ್ಯ ಆಟಗಾರರು**

ಭಾರತ: ರೋಹಿತ್ ಶರ್ಮಾ, ಶುಭಮನ್ ಗಿಲ್ (ನಾಯಕ), ವಿರಾಟ್ ಕೊಹ್ಲಿ, ರುತುರಾಜ್ ಗಾಯಕ್ವಾಡ್, ಕೆಎಲ್ ರಾಹುಲ್ (ವಿಕೆಟ್ ಕೀಪರ್), ರವೀಂದ್ರ ಜಡೇಜಾ, ನಿತೀಶ್ ಕುಮಾರ್ ರೆಡ್ಡಿ, ನಮನ್ ಧೀರ್, ಕುಲದೀಪ್ ಯಾದವ್, ಪ್ರಸಿದ್ಧ್ ಕೃಷ್ಣ, ಮೊಹಮ್ಮದ್ ಸಿರಾಜ್.

ವೆಸ್ಟ್ ಇಂಡೀಸ್: ಜಾನ್ ಕ್ಯಾಂಪ್‌ಬೆಲ್, ಜಸ್ಟಿನ್ ಗ್ರೀವ್ಸ್/ಜ್ಯುವೆಲ್ ಆಂಡ್ರ್ಯೂ, ಕೀಸಿ ಕಾರ್ಟಿ, ಶೈ ಹೋಪ್ (ನಾಯಕ-ವಿಕೆಟ್ ಕೀಪರ್), ಶೆರ್ಫೇನ್ ರುದರ್ಫೋರ್ಡ್, ರೋಸ್ಟನ್ ಚೇಸ್, ಮ್ಯಾಥ್ಯೂ ಫೋರ್ಡ್, ಗುಡಕೇಶ್ ಮೋಟೀ, ಜೇಡನ್ ಸೀಲ್ಸ್/ಶಮರ್ ಜೋಸೆಫ್, ಅಲ್ಜಾರಿ ಜೋಸೆಫ್, ಲಾಡ್ಜ್.

# ಮಸೀದಿ ರಸ್ತೆ ಸ್ವಚ್ಛತೆಗೆ ಮೈಕ್ರೋ ಪ್ಲಾನ್ ಅಭಿವೃದ್ಧಿ ಕಾಮಗಾರಿಗಳಿಗೆ ಆಯುಕ್ತರ ಡೆಡ್‌ಲೈನ್



ಬೆಂಗಳೂರು,ಸೆ.27:ಬೆಂಗಳೂರು ಉತ್ತರ ನಗರ ಪಾಲಿಕೆ ವ್ಯಾಪ್ತಿಯ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿದ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್, ನಾಗರಿಕ ಸೌಲಭ್ಯಗಳು ಮತ್ತು ಮೂಲಸೌಕರ್ಯ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸಿ, ಸ್ಥಳೀಯ ಸಮಸ್ಯೆಗಳ ತ್ವರಿತ ಪರಿಹಾರಕ್ಕೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಸ್ಥಳೀಯ ನಿವಾಸಿಗಳು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಪ್ರತಿನಿಧಿಗಳು ಹಾಗೂ ಹಿರಿಯ ನಾಗರಿಕರೊಂದಿಗೆ ಸಂವಾದ ನಡೆಸಿದ ಆಯುಕ್ತರು, ವಿವಿಧ ಪ್ರದೇಶಗಳಲ್ಲಿ ಎದುರಾಗುತ್ತಿರುವ ಸಮಸ್ಯೆಗಳ ಕುರಿತು ಮಾಹಿತಿ ಪಡೆದು, ಅವುಗಳ ನಿವಾರಣೆಗೆ ಕಾಲಮಿತಿ ನಿಗದಿಪಡಿಸಿದರು.

**ಮಸೀದಿ ರಸ್ತೆ ಸ್ವಚ್ಛತೆಗೆ ವಿಶೇಷ ಯೋಜನೆ:**

ಪುಲಿಕೇಶಿನಗರದ ಮಸೀದಿ ರಸ್ತೆ ಜಂಕ್ಷನ್ ಸಮೀಪ ರಸ್ತೆ ಸ್ವಚ್ಛತೆ ಸಮರ್ಪಕವಾಗಿ ನಡೆಯುತ್ತಿಲ್ಲ ಎಂಬ ದೂರುಗಳ ಹಿನ್ನೆಲೆಯಲ್ಲಿ ಸ್ಥಳ ಪರಿಶೀಲನೆ ನಡೆಸಿದ ಆಯುಕ್ತರು,ಸೆಪ್ಟೆಂಬರ್ 29ರೊಳಗೆ ಸ್ಟ್ರೀಟ್ ಸ್ವೀಪಿಂಗ್‌ಗೆ ಮೈಕ್ರೋ ಪ್ಲಾನಿಂಗ್ ಸಿದ್ಧಪಡಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಪ್ರತಿ ರಸ್ತೆಯ ಸ್ವಚ್ಛತಾ ವೇಳಾಪಟ್ಟಿ, ಸಿಬ್ಬಂದಿ ನಿಯೋಜನೆ ಮತ್ತು ಯಂತ್ರೋಪಕರಣಗಳ ಬಳಕೆ ಕುರಿತು ವಿವರವಾದ ಯೋಜನೆ ರೂಪಿಸಿ, ಅದರ ಅನುಷ್ಠಾನವನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುವಂತೆ ಸೂಚನೆ ನೀಡಲಾಗಿದೆ. ನಗರ ಸ್ವಚ್ಛತೆಗೆ ಯಾವುದೇ ರೀತಿಯ ನಿರ್ಲಕ್ಷ್ಯ ಸಹಿಸಲಾಗುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

**ಡ್ರೈನ್ ಮತ್ತು ರಸ್ತೆ ಕಾಮಗಾರಿಗಳಿಗೆ ವೇಗ :**

ನಾರ್ತ್ ಈಸ್ಟ್ ಬೆಂಗಳೂರು ರೆಸಿಡೆಂಟ್ಸ್ ವೆಲ್ಫೇರ್ ಅಸೋಸಿಯೇಷನ್ ಪ್ರತಿನಿಧಿಗಳೊಂದಿಗೆ ನಡೆದ ಸಭೆಯಲ್ಲಿ, ಹಚ್‌ಚಿನ್ಸ್ ರಸ್ತೆ ಮತ್ತು ವೀಲರ್ ಎಕ್ಸ್‌ಟೆನ್ಶನ್ ರಸ್ತೆ ಪ್ರದೇಶಗಳ ಚರಂಡಿ ಕಾಮಗಾರಿಗಳ ಕುರಿತು ಚರ್ಚೆ ನಡೆಯಿತು.

ಈ ಭಾಗಗಳಲ್ಲಿ ನಡೆಯುತ್ತಿರುವ ಕಾಮಗಾರಿಗಳಿಗೆ ವೇಗ ನೀಡುವಂತೆ ಸಂಬಂಧಿತ ಅಧಿಕಾರಿಗಳಿಗೆ ಸೂಚಿಸಿದ ಆಯುಕ್ತರು, ಪಾಲಿಕೆ ಹಾಗೂ ಇತರೆ ಇಲಾಖೆಗಳ ವತಿಯಿಂದ ಕೈಗೊಳ್ಳಲಾಗುತ್ತಿರುವ ಎಲ್ಲಾ ಯೋಜನೆಗಳಿಗೆ ಕಾಲಮಿತಿ ನಿಗದಿಪಡಿಸಿ, ಅದರಂತೆ ಪ್ರಗತಿಯನ್ನು ಖಚಿತಪಡಿಸಿಕೊಳ್ಳುವಂತೆ ನಿರ್ದೇಶಿಸಿದರು.

ಕಾಮಗಾರಿಗಳ ಪ್ರತಿಯೊಂದು ಹಂತವನ್ನೂ ಸ್ವತಃ ಪರಿಶೀಲಿಸಲಾಗುವುದು ಮತ್ತು ಗುಣಮಟ್ಟ ಹಾಗೂ ನಿಗದಿತ ಅವಧಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಅಧಿಕಾರಿಗಳಿಗೆ ತಿಳಿಸಿದರು.

**ಎಸ್‌ಎಂವಿಟಿ ಸಂಪರ್ಕಕ್ಕೆ ಎಲಿವೇಟೆಡ್ ರೋಟರಿ :**

ಮಾರುತಿ ಸೇವಾನಗರ, ಎಸ್‌ಎಂವಿಟಿ ಬೈಯಪ್ಪನಹಳ್ಳಿ ರೈಲು ನಿಲ್ದಾಣ, ಕಮ್ಮನಹಳ್ಳಿ ಹಾಗೂ ಬಾಣಸವಾಡಿ ಪ್ರದೇಶಗಳನ್ನು ಸಂಪರ್ಕಿಸುವ ಎಲಿವೇಟೆಡ್ ರೋಟರಿ ಯೋಜನೆಗೆ ಸರ್ಕಾರದಿಂದ ಅನುಮೋದನೆ ದೊರೆತಿರುವ ಹಿನ್ನೆಲೆಯಲ್ಲಿ, ಅಗತ್ಯ ಭೂಸ್ವಾಧೀನ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಜಂಟಿ ಆಯುಕ್ತರಿಗೆ ಸೂಚಿಸಲಾಯಿತು.

ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಕಾಮಗಾರಿ ಆರಂಭವಾಗಲಿದ್ದು, ಈ ಯೋಜನೆಯಿಂದ ಪೂರ್ವ ಮತ್ತು ಉತ್ತರ ಭಾಗಗಳ ಸಂಚಾರ ದಟ್ಟಣೆ ಗಣನೀಯವಾಗಿ ಕಡಿಮೆಯಾಗುವ ನಿರೀಕ್ಷೆಯಿದೆ.

**ಚಾರ್ಲ್ಸ್ ಶಾಲೆ ಅಂಡರ್‌ಪಾಸ್ ವಿಸ್ತರಣೆ**

ಚಾರ್ಲ್ಸ್ ಶಾಲೆ ಸಮೀಪದ ಅಂಡರ್‌ಪಾಸ್‌ನಲ್ಲಿ ಪ್ರಸ್ತುತ ದ್ವಿಚಕ್ರ ವಾಹನಗಳಿಗೆ ಮಾತ್ರ ಸಂಚಾರ ಅವಕಾಶವಿರುವುದರಿಂದ ಸ್ಥಳೀಯರಿಗೆ ಆಗುತ್ತಿರುವ ತೊಂದರೆ ಕುರಿತು ಸಭೆಯಲ್ಲಿ ಚರ್ಚೆ ನಡೆಯಿತು.

ಅಂಡರ್‌ಪಾಸ್ ಅಗಲೀಕರಣ ಕುರಿತು ಸಚಿವ ಕೆ.ಜೆ. ಜಾರ್ಜ್ ಅವರೊಂದಿಗೆ ಚರ್ಚಿಸಿ, ಕೆ-ರೈಡ್ ಸಂಸ್ಥೆಯೊಂದಿಗೆ ಸಮನ್ವಯ ಸಾಧಿಸಿ ಯೋಜನೆ ರೂಪಿಸುವಂತೆ ಸರ್ವಜ್ಞನಗರ ವಿಭಾಗದ ಕಾರ್ಯಪಾಲಕ ಅಭಿಯಂತರರಿಗೆ ಸೂಚನೆ ನೀಡಲಾಗಿದೆ.

ಈ ಪರಿಶೀಲನಾ ವೇಳೆ ಜಂಟಿ ಆಯುಕ್ತ ಮೊಹಮ್ಮದ್ ನಯೀಮ್ ಮೊಮಿನ್,ಕಾರ್ಯಪಾಲಕ ಅಭಿಯಂತರರು, ಪಾಲಿಕೆ ಅಧಿಕಾರಿಗಳು ಹಾಗೂ ಸ್ಥಳೀಯ ನಿವಾಸಿಗಳು ಹಾಜರಿದ್ದರು.



ವಿಶ್ವ ಪ್ರವಾಸೋದ್ಯಮ ದಿನದ ಅಂಗವಾಗಿ ಮೈಸೂರು ಅರಮನೆ ಆವರಣದಲ್ಲಿ ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿತ್ತು. ಜಿಲ್ಲಾಡಳಿತ ಮತ್ತು ಪ್ರವಾಸೋದ್ಯಮ ಇಲಾಖೆ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮವನ್ನು ಸಚಿವ ಕೆ.ಜೆ.ಜಾರ್ಜ್ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಶಾಸಕರಾದ ತನ್ವೀರ್ ಸೇಠ್, ಅನಿಲ್ ಚಿಕ್ಕಮಾಧು, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣ ಗೌಡ ಸೇರಿದಂತೆ ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳು, ಹೋಟೆಲ್ ಉದ್ಯಮಿಗಳು ಮತ್ತು ಅನೇಕ ಗಣ್ಯರು ಉಪಸ್ಥಿತರಿದ್ದರು.



ಬೆಂಗಳೂರಿನ ಬಾಣಸವಾಡಿಯ ಸುಬ್ಬಯ್ಯನ ಪಾಳ್ಯದಲ್ಲಿ ನಡೆದ ಊರ ಹಬ್ಬದಲ್ಲಿ 100ಕ್ಕೂ ಹೆಚ್ಚು ಪಲ್ಲಕ್ಕಿ ಉತ್ಸವಗಳ ಮೆರವಣಿಗೆ ನಡೆಸಲಾಯಿತು. ಈ ಸಂದರ್ಭದಲ್ಲಿ ಸಾವಿರಾರು ಭಕ್ತರು ಭಾಗವಹಿಸಿದ್ದರು.

# ಸಿವಿಲ್ ಪೊಲೀಸ್ ಕಾನ್‌ಸ್ಟೇಬಲ್ ನೇಮಕ ನಾಳೆಯಿಂದ ವಲಯವಾರು ದೈಹಿಕ ಪರೀಕ್ಷೆ

ಬೆಂಗಳೂರು,ಸೆ.27-ರಾಜ್ಯ ಪೊಲೀಸ್ ಇಲಾಖೆಯ ಸಿವಿಲ್ ಪೊಲೀಸ್ ಕಾನ್‌ಸ್ಟೆಬಲ್ (ಆರ್‌ಪಿಸಿ ಮತ್ತು ಕೆಕೆ) ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ ಮುಂದಿನ ಹಂತದ ಆಯ್ಕೆ ಪ್ರಕ್ರಿಯೆಯು ಆರಂಭಗೊಂಡಿದೆ.

ಕಳೆದ ಆಗಸ್ಟ್ 2 ರಂದು ರಾಜ್ಯಾದ್ಯಂತ ಯಶಸ್ವಿಯಾಗಿ ನಡೆಸಲಾಗಿದ್ದ ಲಿಖಿತ ಪರೀಕ್ಷೆಯಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳಿಗೆ ಇದೀಗ ದೈಹಿಕ ಪರೀಕ್ಷೆಯ ಹಂತ ಎದುರಾಗಿದೆ. ಮುಂದಿನ ಸುತ್ತಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ದೇಹದಾರ್ಢ್ಯ ಪರೀಕ್ಷೆ (ಪಿಎಸ್ ಟಿ) ಹಾಗೂ ಸಹಿಷ್ಣುತಾ ಪರೀಕ್ಷೆಯ (ಇಟಿ) ದಿನಾಂಕ ಮತ್ತು ವಲಯವಾರು ವೇಳಾಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಬಿಡುಗಡೆ ಮಾಡಿದೆ.

**19,396 ಅಭ್ಯರ್ಥಿಗಳ ಸ್ಪರ್ಧೆ:**

ಈ ಬೃಹತ್ ನೇಮಕಾತಿ ಅಭಿಯಾನದ ಮೂಲಕ ರಾಜ್ಯಾದ್ಯಂತ ಒಟ್ಟು 3,991 ಸಿವಿಲ್ ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ. ಲಿಖಿತ ಪರೀಕ್ಷೆಯ ಫಲಿತಾಂಶದ ಆಧಾರದ ಮೇಲೆ ಒಟ್ಟು 19,396 ಅರ್ಹ ಅಭ್ಯರ್ಥಿಗಳು ದೈಹಿಕ ಪರೀಕ್ಷೆಯಲ್ಲಿ ಪಾಲ್ಗೊಳ್ಳಲು ಅರ್ಹತೆ ಗಿಟ್ಟಿಸಿಕೊಂಡಿದ್ದಾರೆ. ಉಳಿಕೆ ಮೂಲ ವೃಂದದ (ಆರ್ ಪಿಸಿ) 3,395 ಹುದ್ದೆಗಳಿಗೆ 16,454 ಅಭ್ಯರ್ಥಿಗಳು ಪರೀಕ್ಷೆಗೆ ಆಯ್ಕೆಯಾಗಿದ್ದರೆ, ಕಲ್ಯಾಣ ಕರ್ನಾಟಕ (ಕೆಕೆ) ವೃಂದದ 596 ಹುದ್ದೆಗಳಿಗೆ 2,942 ಅಭ್ಯರ್ಥಿಗಳು ಮುಂದಿನ ಸುತ್ತಿಗೆ ಅರ್ಹತೆ ಪಡೆದುಕೊಂಡಿದ್ದಾರೆ.

**ಕೇಂದ್ರ ವಲಯದ ಪರೀಕ್ಷಾ ವಿವರ:**

ಉಳಿಕೆ ಮೂಲ ವೃಂದದ (ಆರ್ ಪಿಸಿ) ಪರೀಕ್ಷೆಗಳು ಸೆಪ್ಟೆಂಬರ್ 28 ರಿಂದ ವಿವಿಧ ಹಂತಗಳಲ್ಲಿ ಆರಂಭವಾಗಲಿವೆ. ಅತ್ಯಂತ ಹೆಚ್ಚು ಅಂದರೆ 2,015 ಹುದ್ದೆಗಳನ್ನು ಹೊಂದಿರುವ ಬೆಂಗಳೂರು ನಗರ ಘಟಕದ 9,887 ಅಭ್ಯರ್ಥಿಗಳಿಗೆ ಸೆಪ್ಟೆಂಬರ್ 28 ರಿಂದ ಅಕ್ಟೋಬರ್ 05 ರವರೆಗೆ ಚಾಮರಾಜಪೇಟೆಯ ಸಿಎಆರ್ (ಹೆಚ್‌ಕ್ಯೂ) ಮೈದಾನ, ಆಡುಗೋಡಿಯ ಸಿಎಆರ್ (ದಕ್ಷಿಣ) ಹಾಗೂ ಥಣಿಸಂದ್ರ ಮುಖ್ಯ ರಸ್ತೆಯ ಸಿಎಆರ್ (ಉತ್ತರ) ಪೆರೇಡ್ ಮೈದಾನಗಳಲ್ಲಿ ಪರೀಕ್ಷೆಗಳು ಜರುಗಲಿವೆ.

ಇನ್ನು ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು, ಬೆಂಗಳೂರು ಜಿಲ್ಲೆ ಹಾಗೂ ರೈಲ್ವೆ ಘಟಕಗಳನ್ನೊಳಗೊಂಡ ಕೇಂದ್ರ ವಲಯದ 200 ಹುದ್ದೆಗಳ 946 ಅಭ್ಯರ್ಥಿಗಳಿಗೆ ಸೆಪ್ಟೆಂಬರ್ 28 ರಿಂದ ಅಕ್ಟೋಬರ್ 03 ರವರೆಗೆ ಕೋರಮಂಗಲದ 3ನೇ ಬೆಟಾಲಿಯನ್ ಕೆಎಸ್‌ಆರ್‌ಪಿ ಮೈದಾನದಲ್ಲಿ ದೈಹಿಕ ಪರೀಕ್ಷೆ ನಡೆಯಲಿದೆ. ವಲಯದ ವೇಳಾಪಟ್ಟಿ:

ಮೈಸೂರು, ಹಾಸನ, ಕೊಡಗು, ಚಾಮರಾಜನಗರ ಮತ್ತು ಮಂಡ್ಯ ಘಟಕಗಳನ್ನು ಒಳಗೊಂಡ ದಕ್ಷಿಣ ವಲಯದ 395 ಹುದ್ದೆಗಳ 1,891 ಅಭ್ಯರ್ಥಿಗಳಿಗೆ ಸೆಪ್ಟೆಂಬರ್ 28 ರಿಂದ ಅಕ್ಟೋಬರ್ 05 ರವರೆಗೆ ಮೈಸೂರಿನ ರೇಸ್ ಕೋರ್ಸ್ ಹಿಂಭಾಗದ ಸಿಟಿ ಆರ್ಮ್ಸ್ ರಿಸರ್ವ್ (ಸಿಎಆರ್ ) ಮೈದಾನದಲ್ಲಿ ಪರೀಕ್ಷೆ ನಡೆಯಲಿದೆ. ಶಿವಮೊಗ್ಗ, ಹಾವೇರಿ, ದಾವಣಗೆರೆ ಮತ್ತು ಚಿತ್ರದುರ್ಗ ಘಟಕಗಳ ಪೂರ್ವ ವಲಯದ 250 ಹುದ್ದೆಗಳ 1,234 ಅಭ್ಯರ್ಥಿಗಳಿಗೆ ಸೆಪ್ಟೆಂಬರ್ 29 ರಿಂದ ಅಕ್ಟೋಬರ್ 06 ರವರೆಗೆ ಶಿವಮೊಗ್ಗದ ನವಿಲೆಯಲ್ಲಿರುವ ಕೃಷಿ ವಿಶ್ವವಿದ್ಯಾಲಯದ ಮೈದಾನದಲ್ಲಿ ಪರೀಕ್ಷೆ ನಿಗದಿಯಾಗಿದೆ. ಹಾಗೆಯೇ, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಚಿಕ್ಕಮಗಳೂರು ಮತ್ತು ಮಂಗಳೂರು ನಗರ ಘಟಕಗಳ ಪಶ್ಚಿಮ ವಲಯದ 395 ಹುದ್ದೆಗಳ 1,803 ಅಭ್ಯರ್ಥಿಗಳಿಗೆ ಸೆಪ್ಟೆಂಬರ್ 28 ರಿಂದ ಅಕ್ಟೋಬರ್ 03 ರವರೆಗೆ ಮಂಗಳೂರಿನ ಲಾಲ್‌ಬಾಗ್‌ನಲ್ಲಿರುವ ಮಂಗಳ ಕ್ರೀಡಾಂಗಣದಲ್ಲಿ ದೈಹಿಕ ಪರೀಕ್ಷೆ ಜರುಗಲಿದೆ.

**ಪರೀಕ್ಷಾ ದಿನಾಂಕಗಳು:**

ಗದಗ ಹಾಗೂ ಹುಬ್ಬಳ್ಳಿ-ಧಾರವಾಡ ನಗರ ಘಟಕಗಳನ್ನು ಒಳಗೊಂಡ ಉತ್ತರ ವಲಯದ 110 ಹುದ್ದೆಗಳಿಗೆ ಅರ್ಹತೆ ಪಡೆದ 549 ಅಭ್ಯರ್ಥಿಗಳಿಗೆ ಸೆಪ್ಟೆಂಬರ್ 29 ಮತ್ತು 30 ರಂದು ಬೆಳಗಾವಿಯ ಮಚ್ಚೆಯಲ್ಲಿರುವ 2ನೇ ಬೆಟಾಲಿಯನ್ ಕೆಎಸ್‌ಆರ್‌ಪಿ ಮೈದಾನದಲ್ಲಿ ಪರೀಕ್ಷೆ ನಡೆಯಲಿದೆ. ಇದರೊಂದಿಗೆ, ಬಳ್ಳಾರಿ ಮತ್ತು ರಾಯಚೂರು ಘಟಕಗಳನ್ನು ಒಳಗೊಂಡ ಬಳ್ಳಾರಿ ವಲಯದ (ಆರ್ ಪಿಸಿ) 30 ಹುದ್ದೆಗಳಿಗೆ ಆಯ್ಕೆಯಾಗಿರುವ 144 ಅಭ್ಯರ್ಥಿಗಳಿಗೆ ಅಕ್ಟೋಬರ್ 05 ರಿಂದ 06 ರವರೆಗೆ ಕೊಪ್ಪಳದ ಮುನಿರಾಬಾದ್‌ನ ಕೆಎಸ್‌ಆರ್‌ಪಿ ಪಿ.ಟಿ.ಎಸ್. ಮೈದಾನದಲ್ಲಿ ದೈಹಿಕ ಪರೀಕ್ಷೆ ನಿಗದಿಯಾಗಿದೆ.

**ದೈಹಿಕ ಪರೀಕ್ಷೆಗಳು:**

ಕಲ್ಯಾಣ ಕರ್ನಾಟಕ ವೃಂದದ ಪರೀಕ್ಷೆಗಳು ಅಕ್ಟೋಬರ್ ಎರಡನೇ ವಾರದಿಂದ ಆರಂಭಗೊಳ್ಳಲಿವೆ. ಸಿಒಪಿ ಬೆಂಗಳೂರು ನಗರ (ಕೆಕೆ) ವಿಭಾಗದ 171 ಹುದ್ದೆಗಳಿಗೆ ಆಯ್ಕೆಯಾದ 833 ಅಭ್ಯರ್ಥಿಗಳಿಗೆ ಅಕ್ಟೋಬರ್ 08 ರಂದು ಬೆಂಗಳೂರಿನ ಚಾಮರಾಜಪೇಟೆ ಮತ್ತು ಆಡುಗೋಡಿ ಸಿಎಆರ್ ಮೈದಾನಗಳಲ್ಲಿ ಪರೀಕ್ಷೆ ಜರುಗಲಿದೆ. ಬಳ್ಳಾರಿ ವಲಯದ (ಕೆಕೆ) ಕೊಪ್ಪಳ, ರಾಯಚೂರು, ಬಳ್ಳಾರಿ ಮತ್ತು ವಿಜಯನಗರ ಘಟಕಗಳ 174 ಹುದ್ದೆಗಳ 869 ಅಭ್ಯರ್ಥಿಗಳಿಗೆ ಅಕ್ಟೋಬರ್ 12 ರಿಂದ 15 ರವರೆಗೆ ಕೊಪ್ಪಳದ ಮುನಿರಾಬಾದ್‌ನಲ್ಲಿ ಪರೀಕ್ಷೆ ನಡೆಸಲಾಗುತ್ತದೆ. ಅಂತಿಮವಾಗಿ, ಕಲಬುರಗಿ ನಗರ/ಜಿಲ್ಲೆ ಹಾಗೂ ಬೀದರ್ ಘಟಕಗಳ ಈಶಾನ್ಯ ವಲಯದ 251 ಹುದ್ದೆಗಳ 1,240 ಅಭ್ಯರ್ಥಿಗಳಿಗೆ ಅಕ್ಟೋಬರ್ 12 ರಿಂದ 14 ರವರೆಗೆ ಕಲಬುರಗಿಯ ತಾಜ್ ಸುಲ್ತಾನ್‌ಪುರದಲ್ಲಿರುವ 6ನೇ ಬೆಟಾಲಿಯನ್ ಕೆಎಸ್‌ಆರ್‌ಪಿ ಮೈದಾನದಲ್ಲಿ ಪರೀಕ್ಷೆಗಳು ನಡೆಯಲಿವೆ.

**ಕರೆ ಪತ್ರದ ವಿವರ:**

ದೈಹಿಕ ಪರೀಕ್ಷೆಗೆ ಅರ್ಹತೆ ಪಡೆದಿರುವ ಎಲ್ಲಾ ಅಭ್ಯರ್ಥಿಗಳು ತಮ್ಮ ಕರೆ ಪತ್ರವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅಧಿಕೃತ ವೆಬ್‌ಸೈಟ್ cetonline.karnataka.gov.in/kea ನಿಂದ ತಕ್ಷಣವೇ ಡೌನ್‌ಲೋಡ್ ಮಾಡಿಕೊಳ್ಳಬಹುದು. ಅಭ್ಯರ್ಥಿಗಳು ತಮಗೆ ನಿಗದಿಪಡಿಸಿದ ದಿನಾಂಕ, ಸಮಯ ಹಾಗೂ ಪರೀಕ್ಷಾ ಕೇಂದ್ರಗಳಿಗೆ ಅಗತ್ಯ ದಾಖಲೆಗಳೊಂದಿಗೆ ಕಡ್ಡಾಯವಾಗಿ ಹಾಜರಾಗಬೇಕೆಂದು ಸೂಚಿಸಲಾಗಿದೆ.

## 'ರಾಮಾಯಣ' ಚಿತ್ರದ ಹೊಸ ಪೋಸ್ಟರ್




ಬಾಲಿವುಡ್‌ನ ಖ್ಯಾತ ನಿರ್ದೇಶಕ ನಿತೇಶ್ ತಿವಾರಿ ನಿರ್ದೇಶನದ ಬಹುನಿರೀಕ್ಷಿತ 'ರಾಮಾಯಣ' ಚಿತ್ರದ ನಿರ್ಮಾಪಕರು ಹೊಸ ಪೋಸ್ಟರ್ ಒಂದನ್ನು ಬಿಡುಗಡೆ ಮಾಡುವ ಮೂಲಕ ಪ್ರೇಕ್ಷಕರಲ್ಲಿ ಮತ್ತೆ ಭಾರಿ ಕುತೂಹಲ ಮೂಡಿಸಿದ್ದಾರೆ. ಭಾರತೀಯ ಚಿತ್ರರಂಗದಲ್ಲೇ ಅತ್ಯಂತ ಅದ್ದೂರಿ ಬಜೆಟ್‌ನಲ್ಲಿ ನಿರ್ಮಾಣವಾಗುತ್ತಿರುವ ಈ ಪೌರಾಣಿಕ ಚಿತ್ರದಲ್ಲಿ ನಟ ರಣಬೀರ್ ಕಪೂರ್ ಶ್ರೀರಾಮನ ಪಾತ್ರದಲ್ಲಿ ಕಂಗೊಳಿಸುತ್ತಿದ್ದರೆ, ಸಾಯಿ ಪಲ್ಲವಿ ಸೀತೆಯಾಗಿ ಹಾಗೂ ಕೆಜಿಎಫ್ ಖ್ಯಾತಿಯ ಯಶ್ ರಾವಣನ ಪ್ರಮುಖ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ.

ಚಿತ್ರತಂಡ ಬಿಡುಗಡೆ ಮಾಡಿರುವ ಈ ನೂತನ ಪೋಸ್ಟರ್ ಅತ್ಯಂತ ಭಕ್ತಿಪೂರ್ವಕ ಹಾಗೂ ಭವ್ಯವಾದ ವಿನ್ಯಾಸದಿಂದ ಕಂಗೊಳಿಸುತ್ತಿದ್ದು, ಚಿತ್ರದ ಮೇಲಿರುವ ನಿರೀಕ್ಷೆಯನ್ನು ಮತ್ತಷ್ಟು ಹೆಚ್ಚಿಸಿದೆ.

# ವೀಸಾ ನಿಯಮ ಬಿಗಿಗೊಳಿಸಿದ ಬ್ರಿಟನ್



ಲಂಡನ್,ಸೆ.27-ಅಮೆರಿಕದಲ್ಲಿ ಡೊನಾಲ್ಡ್ ಟ್ರಂಪ್ ಆಡಳಿತಾವಧಿಯಲ್ಲಿ ಭಾರತೀಯ ವಿದ್ಯಾರ್ಥಿಗಳು ಎದುರಿಸಿದ್ದ ವೀಸಾ ಸಮಸ್ಯೆ ಹಾಗೂ ಸವಾಲುಗಳು ಈಗ ಬ್ರಿಟನ್‌ನಲ್ಲಿಯೂ ಪುನರಾವರ್ತನೆಯಾಗುವ ಮುನ್ಸೂಚನೆಗಳು ಕಾಣಿಸಿಕೊಳ್ಳುತ್ತಿವೆ.

ಬ್ರಿಟನ್ ಸರ್ಕಾರದ ಕಠಿಣ ವೀಸಾ ನೀತಿಗಳಿಂದಾಗಿ ಅಲ್ಲಿಗೆ ತೆರಳುವ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಶೇಕಡಾ 20 ರಷ್ಟು ಗಣನೀಯ ಇಳಿಕೆಯಾಗುವ ಸಾಧ್ಯತೆಯಿದೆ. ಇದರಿಂದಾಗಿ ಬ್ರಿಟನ್ ಶಿಕ್ಷಣ ಕ್ಷೇತ್ರವು ವಾರ್ಷಿಕವಾಗಿ ಸುಮಾರು 10,000 ಕೋಟಿ ನಷ್ಟವನ್ನು ಅನುಭವಿಸಬೇಕಾಗಬಹುದು ಎಂದು ಅಂದಾಜಿಸಲಾಗಿದೆ.

**ವರದಿಯ ಪ್ರಮುಖ ಮುಖ್ಯಾಂಶಗಳು**

ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಕುಸಿತ: ಯುಕೆಯ ಸೆಂಟರ್ ಫಾರ್ ಗ್ಲೋಬಲ್ ಹೈಯರ್ ಎಜುಕೇಶನ್ (ಸಿಜಿಹೆಚ್‌ಇ) ಬಿಡುಗಡೆ ಮಾಡಿರುವ ವರದಿಯ ಪ್ರಕಾರ, 2027 ರ ಮೇ-ಜೂನ್ ಬೇಸಿಗೆ ಪ್ರವೇಶಾವಧಿಯಲ್ಲಿ ಬ್ರಿಟನ್‌ಗೆ ಬರುವ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆ ಶೇಕಡಾ 20 ರಷ್ಟು ಕುಸಿಯಲಿದೆ.

**ವೀಸಾ ವಿತರಣೆಯಲ್ಲಿ ಇಳಿಕೆ:**

ಈ ವರ್ಷದ ಸೆಪ್ಟೆಂಬರ್ ವೇಳೆಗೆ ಭಾರತೀಯ ವಿದ್ಯಾರ್ಥಿಗಳಿಗೆ ಸುಮಾರು 83,000 ವಿದ್ಯಾರ್ಥಿ ವೀಸಾಗಳನ್ನು ನೀಡಲಾಗಿತ್ತು. ಆದರೆ ಹೊಸ ನಿಯಮಗಳ ಪರಿಣಾಮವಾಗಿ ಮುಂದಿನ ವರ್ಷ ಈ ಸಂಖ್ಯೆಯು 63,000 ಕ್ಕೆ ಇಳಿಯುವ ನಿರೀಕ್ಷೆಯಿದೆ.

**ರಾಷ್ಟ್ರೀಯತಾವಾದಿ ರಾಜಕೀಯದ ಪ್ರಭಾವ**

ರಿಫಾರ್ಮ್ ಯುಕೆ ನಂತಹ ರಾಷ್ಟ್ರೀಯತಾವಾದಿ ಪಕ್ಷಗಳ ಬೆಳವಣಿಗೆ ಹಾಗೂ ಸ್ಥಳೀಯರಿಗೆ ಉದ್ಯೋಗಾವಕಾಶ ನೀಡುವ ಆದ್ಯತೆಯ ಹಿನ್ನೆಲೆಯಲ್ಲಿ, ಆಂಡಿ ಬರ್ನ್‌ಹ್ಯಾಮ್ ಸರ್ಕಾರವು ಅಮೆರಿಕದ ಮಾದರಿಯನ್ನು ಅನುಸರಿಸಿ ವೀಸಾ ಹಿನ್ನೆಲೆ ಪರಿಶೀಲನೆಯನ್ನು ಅತ್ಯಂತ ಬಿಗಿಗೊಳಿಸಿದೆ.

## ಭಾರತೀಯ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಇಳಿಕೆ

**ಕೆಲಸದ ವೀಸಾ ಅವಧಿ ಕಡಿತ**

ಯುಕೆ ಪದವೀಧರರ ಕೆಲಸದ ವೀಸಾ (ಗ್ರಾಜುಯೇಟ್ ವರ್ಕ್ ವೀಸಾ) ಅವಧಿಯನ್ನು ಎರಡು ವರ್ಷಗಳಿಂದ ಒಂದೂವರೆ ವರ್ಷಕ್ಕೆ ಕಡಿತಗೊಳಿಸಲಾಗಿದೆ.

ಇದರಿಂದಾಗಿ ಶಿಕ್ಷಣ ಪೂರ್ಣಗೊಳಿಸಿದ ನಂತರ ಭಾರತೀಯ ವಿದ್ಯಾರ್ಥಿಗಳಿಗೆ ಯುಕೆಯಲ್ಲಿ ಕೆಲಸ ಮಾಡಲು ಅಥವಾ ಸಂಶೋಧನೆ ನಡೆಸಲು ಸಿಗುವ ಸಮಯ ಕಡಿಮೆಯಾಗಲಿದೆ.

**ಭಾರತದಲ್ಲೇ ಬ್ರಿಟಿಷ್ ವಿಶ್ವವಿದ್ಯಾಲಯಗಳ ಕ್ಯಾಂಪಸ್:**

ವೀಸಾ ಕಡಿತ ಮತ್ತು ಬಿಗಿನೀತಿಗಳ ನಡುವೆಯೂ ಭಾರತೀಯ ವಿದ್ಯಾರ್ಥಿಗಳಿಗೆ ಒಂದು ಆಶಾದಾಯಕ ಬೆಳವಣಿಗೆ ಕಂಡುಬಂದಿದೆ. ಸೌತಾಂಪ್ಟನ್, ಲಿವರ್‌ಪೂಲ್ ಮತ್ತು ಯಾರ್ಕ್ ಸೇರಿದಂತೆ ಬ್ರಿಟನ್‌ನ ಪ್ರಮುಖ ಒಂಬತ್ತು ವಿಶ್ವವಿದ್ಯಾಲಯಗಳು ಭಾರತದಲ್ಲೇ ತಮ್ಮ ನೂತನ ಕ್ಯಾಂಪಸ್‌ಗಳನ್ನು ಆರಂಭಿಸಲು ಯೋಜನೆ ಪ್ರಕಟಿಸಿವೆ. ಇವುಗಳಲ್ಲಿ ಕೆಲವು ವಿಶ್ವವಿದ್ಯಾಲಯಗಳಲ್ಲಿ ಈಗಾಗಲೇ ಶೈಕ್ಷಣಿಕ ಚಟುವಟಿಕೆಗಳು ಪ್ರಾರಂಭವಾಗಿವೆ.

ಭಾರತೀಯ ವಿದ್ಯಾರ್ಥಿಗಳು ಸ್ವದೇಶದಲ್ಲೇ ಉಳಿದುಕೊಂಡು ಬ್ರಿಟಿಷ್ ಮಾನದಂಡದ ಉನ್ನತ ಶಿಕ್ಷಣವನ್ನು ಪಡೆಯಲು ಇದು ನೆರವಾಗಲಿದೆ ಹಾಗೂ ಮುಂಬರುವ ದಿನಗಳಲ್ಲಿ ಇನ್ನಷ್ಟು ಬ್ರಿಟಿಷ್ ವಿಶ್ವವಿದ್ಯಾಲಯಗಳು ಭಾರತಕ್ಕೆ ಕಾಲಿಡುವ ನಿರೀಕ್ಷೆಯಿದೆ ಎಂದು ಶಿಕ್ಷಣ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.




ನಗರದಲ್ಲಿಂದು ವಿಪ್ರೋ ಹಮ್ಮಿಕೊಂಡಿದ್ದ 13ನೇ ಮ್ಯಾರಥಾನ್ ಓಟಕ್ಕೆ ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ರವರು ಚಾಲನೆ ನೀಡಿದರು. ಫಿಟ್‌ನೆಸ್ ಸೆಲೆಬ್ರಿಟಿ ಮಂದಿರ ಬೇಡಿ, ಭಾರತದ ಮಾಜಿ ಲಾಂಗ್ ಜಂಪರ್ ವಿಶ್ವ ಚಾಂಪಿಯನ್ಸ್ ಶಿಫ್ ಅಂಜುಬಾಬಿ ಜಾರ್ಜ್, ಕ್ರೀಡಾ ಪಟುಗಳು ಮತ್ತು ಸಾರ್ವಜನಿಕರು ಇದ್ದಾರೆ.